ಇಲ್ಲಿ ಮಾನ್ಯ ಸಾರಿಗೆ ಮಂತ್ರಿಗಳಿಲ್ಲ. ಅವರ ಪರವಾಗಿ ಯಾರಾದರೂ ಸಚಿವರು ಜವಾಬ್ದಾರಿ ತೆಗೆದುಕೊಂಡು ಟ್ರಾನ್ಸ್‌ಪೋರ್ಟ್ ಮಿನಿಸ್ಟರ್‌ಗೆ ತಿಳಿಸಿ ಹೇಳಿಕೆ ಕೊಡಿಸಬೇಕು. ನಾಳೆಯಿಂದ ನಾಲ್ಕು ದಿವಸ ರಜಾ ಇರುವುದರಿಂದ ಶಾಸನಸಭೆ ಸೇರುವುದಿಲ್ಲ

ಅಧ್ಯಕ್ಷರು.— ಮಾನ್ಯ ಲಕ್ಷ್ಮೀಸಾಗರ್ ಅವರೇ, ದಯವಿಟ್ಟು ನೋಡಿ.

ಶ್ರೀ ಎಸ್. ಬಂಗಾರಪ್ಪ.— ಮಾನ್ಯ ಸಾರಿಗೆ ಮಂತ್ರಿಗಳು ಒಂದು ವಾರದೊಳಗೆ ಮಾತುಕತೆ ಮಾಡುತ್ತೇನೆಂದು ತಿಳಿಸಿದ್ದರು. ೧೫ ದಿವಸವಾದರೂ ಏನು ಮಾಡಿಲ್ಲ. ವ್ಯಾನ್ ಮಾಲೀಕರಕ್ಷೆ ಮೆರವಣಿಗೆ ತಂದಿದ್ದಾರೆ. ಸಾವಿರಾರು ವೆಹಿಕಲ್ಸ್ ಬಂದಿವೆ. ಸೋಮವಾರದವರೆಗೆ ಏನೂ ಮಾಡುವುದಕ್ಕಾಗುವುದಿಲ್ಲ ಎಂದರೆ ನಾಲ್ಕು ದಿವಸಕ್ಕೆ ಅವರಿಗೆಲ್ಲಾ ಎಷ್ಟು ಖರ್ಚಾಗುತ್ತದೆ ? ಆದ್ದರಿಂದ ಇವೊತ್ತೇ ಆ ಪ್ರತಿನಿಧಿಗಳನ್ನು ಕರೆಯಿಸಿ ಮಾತುಕತೆ ಮಾಡಿದರೆ ಅನುಕೂಲವಾಗುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.— ಮಾಡುತ್ತೇವೆ,

ಶ್ರೀ ಪಂಪಾಪತಿ.— ಅಧ್ಯಕ್ಷರೆ...

ಅಧ್ಯಕ್ಷರು.— ನಿಮ್ಮದನ್ನು ಸೋಮವಾರ ತೆಗೆದುಕೊಳ್ಳುತ್ತೇನೆ ಎಂದು ಹೇಳಿದ್ದೇನಲ್ಲ.

ಶ್ರೀ ಪಂಪಾಪತಿ.— ಗುಲ್ಬರ್ಗ, ರಾಯಚೂರು ಕಡೆಗಳಿಂದ ಸಾವಿರಾರು ಜನ ಬಂದಿದ್ದಾರೆ.

ಅಧ್ಯಕ್ಷರು.— ವಿಷಯದ ಮಹತ್ವ ಗೊತ್ತಿದೆ. ಇದರ ಬಗ್ಗೆ ಮತ್ತೆ ಭಾಷಣ ಬೇಡ,

ಶ್ರೀ ಪಂಪಾಪತಿ.— ೬ ಪ್ಲಸ್ ೧ ಎಂದು ಹೇಳುತ್ತಿರುವುದರಿಂದ ಅನೇಕರಿಗೆ ತೊಂದರೆಯಾಗುತ್ತದೆ.

ಅಧ್ಯಕ್ಷರು.— ಹೇಳಿದ್ದಾರಲ್ಲ. ರಿಪಿಟಿಷನ್ ಏತಕ್ಕೆ ?

ಶ್ರೀ ಪಂಪಾಪತಿ.— ಅವರು ಏನೂ ಹೇಳಿಲ್ಲ.

ಅಧ್ಯಕ್ಷರು.— ಸಂಸದೀಯ ವ್ಯವಹಾರ ಮಂತ್ರಿಗಳು ಹೇಳಿದ್ದಾರೆ. ವಿರೋಧ ಪಕ್ಷದ ನಾಯಕರೂ ಹೇಳಿದ್ದಾರೆ. ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಪಂಪಾಪತಿ.— ನನ್ನನ್ನು ಕೂರಿಸಿದರೆ ಕೆಲಸ ಆಗುವುದಿಲ್ಲ. ಮುಖ್ಯವಾದ ವಿಷಯ ಬಂದಾಗಲೂ ಮಾತನಾಡುವುದಕ್ಕೆ ಅವಕಾಶ ಕೊಡದೇಹೋದರೆ ಹೇಗೆ ?

ಶ್ರೀ ಎಸ್. ಬಂಗಾರಪ್ಪ.— ಟ್ರಾನ್ಸ್‌ಪೋರ್ಟ್ ಮಿನಿಸ್ಟರ್‌ಗೆ ಹೇಳಿ ಇದರ ಬಗ್ಗೆ ಸ್ಟೇಟ್‌ಮೆಂಟ್ ಇವೊತ್ತೇ ಮಾಡಿಸಿದರೆ ಅನುಕೂಲವಾಗುತ್ತದೆ.

ಅಧ್ಯಕ್ಷರು.— ಹೇಳುತ್ತಾರೆ ಬಿಡಿ.

(ಉಪಾಧ್ಯಕ್ಷರಾದ ಲಕ್ಷ್ಮೀನರಸಿಂಹಯ್ಯನವರು ಪೀಠದಲ್ಲಿದ್ದರು)

ವಿತ್ತೀಯ ಕಾರ್ಯಕಲಾಪ

೧೯೮೫-೮೬ರ ಬೇಡಿಕೆಗಳ ಮೇಲಿನ ಚರ್ಚೆ.— ಬೇಡಿಕೆ ಸಂಖ್ಯೆ ೫೫-೫೬

(ಮಾನ್ಯ ಸಹಕಾರ ಮಂತ್ರಿಗಳಿಂದ ಉತ್ತರ)

ಶ್ರೀ ಆರ್. ಎಲ್. ಜಾಲಪ್ಪ.— ಸನ್ಮಾನ್ಯ ಅಧ್ಯಕ್ಷರೆ, ತನ್ನ ಖಾತೆಯ ಬೇಡಿಕೆಯ ಮೇಲೆ ಬಹಳ ಜನ ಮಾತನಾಡಿ ಅನೇಕ ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಸನ್ಮಾನ್ಯ ಆಚಾರ್ ಅವರು ಕೆ. ಎಚ್. ಪಾಟೀಲರು, ಕೆಂಪೀರೇಗೌಡರು ಮತ್ತು ಇತರೆ ಸ್ನೇಹಿತರು ಬಹಳ ಚೆನ್ನಾಗಿ ಮಾತನಾಡಿ ಒಳ್ಳೆಯ ಸಲಹೆಗಳನ್ನು ಕೊಟ್ಟಿರುವುದಕ್ಕಾಗಿ ಅವರಿಗೆ ನನ್ನ ವಂದನೆಗಳನ್ನು ಅರ್ಪಿಸುತ್ತೇನೆ. ಸನ್ಮಾನ್ಯ ಆಚಾರ್ ಅವರು ಮಾತನಾಡುತ್ತಾ ಕಡೆಯಲ್ಲಿ ಒಂದು ವ್ಯಾನನ್ನು ಹೇಳಿದರು. ಜನರಿಗೆ ಎಲ್ಲಿ ಬೇಕಾಗುತ್ತದೋ ಅಲ್ಲಿ ಸಹಕಾರಿ ಕ್ಷೇತ್ರ ಚೆನ್ನಾಗಿ ಬೆಳೆಯುತ್ತದೆ ಎಂದು ಹೇಳಿದ್ದಾರೆ. ಅಲ್ಲಿಂದಲೇ ನಾನು ಪ್ರಾರಂಭ ಮಾಡುತ್ತೇನೆ. ಜೊತೆಗೆ ಇನ್ನೊಂದು ಮಾತೂ ಹೇಳಿದರು. ಜೀವನದ ಎಲ್ಲಾ ರಂಗಗಳಲ್ಲೂ

ಭ್ರಷ್ಟಾಚಾರ ಇದ್ದರೂ ಸಹಕಾರ ರಂಗಕ್ಕೆ ಮಾತ್ರ ಅಪಚಾರ ಏತಕ್ಕೆ ಎಂದು ಕೇಳಿದರು. ಮಾನ್ಯ ಅಧ್ಯಕ್ಷರೆ. ೨೩,೧೨೦ ಸಹಕಾರ ಸಂಘಗಳು ನಮ್ಮ ರಾಜ್ಯದಲ್ಲಿವೆ. ಅದರಲ್ಲಿ ಈಗಾಗಲೇ ಹೇಳಿದ ಹಾಗೆ ೪,೫೧೬ ಸಂಘಗಳನ್ನು ಲಿಕ್ವಿಡೇಟ್ ಮಾಡಿದ್ದೇವೆ. ೪೫೦೮ ಸಹಕಾರ ಸಂಘಗಳು ಕೆಲಸ ಮಾಡುತ್ತಿಲ್ಲ. ಉಳಿದ ಸಹಕಾರ ಸಂಘಗಳ ಷೇರು ಬಂಡವಾಳದ ಮೊತ್ತ ೨೫೭ ಕೋಟಿ ರೂಪಾಯಿಗಳು, ಇವುಗಳ ಠೇವಣಾತಿ ೫೨೮ ಕೋಟಿ ರೂಪಾಯಿಗಳು. ಠೇವಣಾತಿ ಕಳೆದ ಮೂರು ವರ್ಷಗಳಲ್ಲಿ ವರ್ಷೆವರ್ಷೇ ೧೦೦ಕ್ಕೆ ೧೫ ರಷ್ಟು ಬೆಳೆದಿದೆ. ಇದರ ವರ್ಕಿಂಗ್ ಕ್ಯಾಪಿಟಲ್ ೨,೧೪೬ ಕೋಟಿ ರೂಪಾಯಿಗಳು. ಅಲ್ಪಾವಧಿ ಮತ್ತು ಧೀರ್ಘಾವಧಿ ಸಾಲವನ್ನು ಕೊಟ್ಟಿರತಕ್ಕದ್ದು ಆಯಾಯ ಸಾಲಿನಲ್ಲಿ ಈ ರೀತಿ ಇದೆ. ೧೯೮೦-೮೧ರಲ್ಲಿ ೮೭.೧೭ ಕೋಟಿ ರೂಪಾಯಿಗಳು ೧೯೮೧-೮೨ರಲ್ಲಿ ೯೩.೩೩ ಕೋಟಿ ರೂಪಾಯಿಗಳು. ೧೯೮೨-೮೩ರಲ್ಲಿ ೧೧೪.೧೨ ಕೋಟಿ ರೂಪಾಯಿಗಳು. ೧೯೮೩-೮೪ರಲ್ಲಿ ೧೪೭.೬೨ ಕೋಟಿ ರೂಪಾಯಿಗಳು. ೧೯೮೪-೮೫ರಲ್ಲಿ ೧೫೮.೧೧ ಕೋಟಿ ರೂಪಾಯಿಗಳು. ರಾಜ್ಯದಲ್ಲಿ ಸುಮಾರು ೧ಲಕ್ಷ ೯೫ ಸಾವಿರ ನೀರಾವರಿ ಬಾವಿಗಳಿಗೆ ಹಣವನ್ನು ಒದಗಿಸಿದ್ದಾರೆ. ಟ್ರ್ಯಾಕ್ಟರ್ಸ್, ಪವರ್ ಟಿಲ್ಲರ್ಸ್ ಮತ್ತು ಬೇರೆ ಮೆಷಿನರಿಗಳಿಗೆ ಸುಮಾರ್ಯ ೮,೩೦೦ ಜನರಿಗೆ ಸಹಾಯ ಮಾಡಿದ್ದಾರೆ. ೪೦ಕೋಟಿ ರೂಪಾಯಿಗಳ ಸಹಾಯ ತೋಟಗಾರಿಕೆಗೆ ಈ ಒಂದು ಸಹಕಾರಿ ರಂಗದಿಂದ ಅನುಕೂಲವಾಗಿದೆ. ಸುಮಾರು ೬ ಲಕ್ಷದ ೮೬ ಜನರಿಗೆ ಸಾಲವನ್ನು ಕೊಡಲಾಗಿದೆ. ಇದರಲ್ಲಿ ಶೇಕಡ ೪೫ ಭಾಗದ ಜನ ಸಣ್ಣ ರೈತರಾಗಿದ್ದಾರೆ. ನಮ್ಮ ರಾಜ್ಯದಲ್ಲಿ ಸುಮಾರು ೨೦೯ ಅರ್ಬನ್ ಬ್ಯಾಂಕ್‌ಗಳು ಇವೆ. ಇವುಗಳಲ್ಲಿ ಸುಮಾರು ೧೮೫ ಬ್ಯಾಂಕ್‌ಗಳು ಸರಿಯಾಗಿ ಕೆಲಸ ಮಾಡುತ್ತಿವೆ. ಹೆಚು ಬ್ಯಾಂಕುಗಳು ತಮ್ಮ ಕಾಲ ಮೇಲೆ ನಿಂತಿವೆ. ೧೯೮೦-೮೧ರಲ್ಲಿ ೧೩೭ ಕೋಟಿ ರೂಪಾಯಿಗಳ ಡಿಪಾಸಿಟ್ ಇದ್ದದ್ದು, ಇದು ೧೯೮೪-೮೫ರ ಸಾಲಿನಲ್ಲಿ ೨೧೪ ಕೋಟಿ ರೂಪಾಯಿಗಳ ಡೆಪಾಸಿಟ್ ಇದೆ. ಲಕ್ಷಾಂತರ ಸಣ್ಣಪುಟ್ಟ ಕೈಗಾರಿಕೆ ಮಾಡುವವರಿಗೆ ಅರ್ಬನ್ ಬ್ಯಾಂಕ್‌ಗಳವರು ಸಹಾಯ ಮಾಡುತ್ತಾರೆ. ಸ್ಟೇಟ್ ಮಾರ್ಕೆಟಿಂಗ್ ಫೆಡರೇಷನ್‌ರವರು ಸುಮಾರು ಮೂರುವರೆ ಲಕ್ಷ ಟನ್ ಗೊಬ್ಬರವನ್ನು ಕಳೆದ ವರ್ಷ ವ್ಯಾಪಾರ ಮಾಡಿದ್ದಾರೆ, ಮತ್ತು ಸುಮಾರು ೩೦೦ ಟನ್ ಔಷಧಿಯನ್ನು ವ್ಯಾಪಾರ ಮಾಡಿದ್ದಾರೆ, ಹಾಗೂ ೨ ಕೋಟಿ ರೂಪಾಯಿಗಳ ಧವಸಧಾನ್ಯಗಳನ್ನು ವ್ಯಾಪಾರ ಮಾಡಿದ್ದಾರೆ ಕನ್‌ಸ್ಯೂಮರ್ಸ್ ಫೆಡರೇಷನ್ ಕಳೆದ ವರ್ಷ ಸುಮಾರು ೧೭ ಕೋಟಿ ರೂಪಾಯಿಗಳ ವ್ಯವಹಾರ ಮಾಡಿದೆ. ಈ ಎರಡೂ ಸಂಸ್ಥೆಗಳು ಕಳೆದ ೨ವರ್ಷಗಳಿಂದ ಅಲ್ಪ ಸ್ವಲ್ಪ ಲಾಭ ಮಾಡುತ್ತಿವೆ. ಕನ್ಸೂಮರ್ಸ್ ಫೆಡರೇಷನ್‌ಗಳು ಎಲ್ಲಾ ಕಡೆ ಲುಕ್ಸಾನಿನಲ್ಲಿ ಇದ್ದು ಕಳೆದ ೨ವರ್ಷಗಳಿಂದ ಸ್ವಲ್ಪ ಸ್ವಲ್ಪ ಲಾಭಗಳಿಸುತ್ತಿವೆ. ಇಷ್ಟಾದರೂ ಈ ಸಹಕಾರಿ ರಂಗಕ್ಕೆ ಇಷ್ಟೊಂದು ಅಪಪ್ರಚಾರ ಏಕೆ ಆಗುತ್ತಿದೆ ಎನ್ನುವುದನ್ನು ನಾವು ಯೋಚನೆ ಮಾಡಬೇಕು. ಅಧ್ಯಕ್ಷರೇ, ಜನರ ಸಂಪರ್ಕ ಅತಿ ಹೆಚ್ಚಿನ ಮಟ್ಟದಲ್ಲಿ ಇರುವುದು ಈ ಸಹಕಾರಿ ಸಂಸ್ಥೆಗಳಲ್ಲಿ, ಬೇರೆ ಯಾವುದೇ ಇಲಾಖೆಗೆ ಇಷ್ಟು ನೇರವಾದ, ಹತ್ತಿರವಾದ ಸಂಪರ್ಕ ಜನರಿಗೆ ಬರುವುದಿಲ್ಲ. ಇದರಲ್ಲಿ ಅಲ್ಪಸ್ವಲ್ಪ ತಪ್ಪು ಆದರೂ ಕೂಡಾ ಜನ ಅದನ್ನು ಬಹಳ ಕ್ರಿಟಿಕಲ್ಲಾಗಿ ನೋಡುತ್ತಾರೆ. ಹೀಗಾಗಿ ಈ ಸಹಕಾರಿ ರಂಗದಲ್ಲಿ ಏನು ಮಹತ್ ಸಾಧನೆ ಆದರೂ ಕೂಡಾ ಸಣ್ಣಪುಟ್ಟ ತಪ್ಪುಗಳು ಮುಂದೆ ಬಂದು ಹೆಚ್ಚಿನ ಅಪಪ್ರಚಾರಗಳು ಆಗುತ್ತವೆಯೇ ವಿನಹ ಬಹಳ ಜನರು ತಿಳಿದುಗೊಂಡಿರುವ ಹಾಗೆ ಈ ಒಂದು ಸಹಕಾರಿ ರಂಗ ಕೆಟ್ಟಿಲ್ಲ. ಅಧ್ಯಕ್ಷರೇ, ನಾನು ಈಗಾಗಲೇ ಹೇಳಿದ ಹಾಗೆ ೨,೧೧೪ಕೋಟಿ ರೂಪಾಯಿಗಳದುಡಿಯುವ ಬಂಡವಾಳ ನಮ್ಮಲ್ಲಿ ಇದ್ದಾಗ ಅದರಲ್ಲಿ ಅಪವ್ಯಯ ಆಗಿರುವುದು ಎಂದರೆ ಮಿಸ್ ಅಪ್ರೋಪ್ರಿಯೇಷನ್ ಆಗಿರುವುದು ಸುಮಾರು ೭ ಕೋಟಿ ರೂಪಾಯಿಗಳು. ಎಂದಾಗ ೦.೦೩ ಪರ್ಸೆಂಟ್ ಮಿಸ್ ಅಪ್ರೋಪ್ರಿಯೇಷನ್ ಆಗಿದೆ. ನಮ್ಮ ಶೇರು ಬಂಡವಾಳ ಮತ್ತು ನಮ್ಮ ಡಿಪಾಸಿಟ್‌ಗೆ ಇದನ್ನು ಹೋಲಿಸಿದಾಗ ಸುಮಾರು ೧ ಪರ್ಸೆಂಟ್ ಮಿಸ್‌ಅಪ್ರೋಪ್ರಿಯೇಷನ್ ಆಗಿದೆ. ಅದಕ್ಕೆ ಈಗಾಗಲೇ ನಾವು ಸೂಕ್ತ ಕ್ರಮ ಕೈಗೊಂಡಿದ್ದೇವೆ. ಈ ಅಪವ್ಯಯಕ್ಕೆ ಕಾರಣ ಏನು ? ಈ ಬಗ್ಗೆ ಮಾನ್ಯ ಆಚಾರ್ ಅವರು ಹೇಳಿದರು. ಇದು ನಾನ್‌ಅಫಿಶಿಯಲ್ ಮೂವ್‌ಮೆಂಟ್ ಇದೆ. ಯಾರು ಇದರ ಧರ್ಮದರ್ಶಿಗಳು ಇದ್ದಾರೆ ಅವರು ತಮ್ಮ ಸಂಸ್ಥೆಗಳು ಸರಿಯಾಗಿ ನಡೆಸುವುದಕ್ಕೆ ಬಿಡದೇ ಇದ್ದರೆ, ಯಾವುದೇ ಸರ್ಕಾರ ಪ್ರತಿಯೊಂದು ಸಹಕಾರಿ ಸಂಸ್ಥೆಗಳಿಗೂ ಕೂಡಾ ಒಬ್ಬೊಬ್ಬ ಪೋಲೀಸರನ್ನು ಹಾಕಿ ಕಾಯುವುದಕ್ಕೆ ಸಾಧ್ಯವಿಲ್ಲ. ಬಹಳ ಹೆಚ್ಚಿನ ಜವಾಬ್ದಾರಿ ಸಂಸ್ಥೆಯ ಸದಸ್ಯರ ಮೇಲೆ ಇದೆ. ಮತ್ತು ಆಡಳಿತ ಮಂಡಳಿಯ ಸವಗ್ರಹಗಳು ಏನು ಇರುತ್ತಾರೋ ಅವರ ಮೇಲೆ ಬಹಳ ಹೆಚ್ಚಿನ ಜವಾಬ್ದಾರಿ ಇದೆ. ಒಂದು ಕಾಲದಲ್ಲಿ, ಸುಮಾರು

೮-೧೦ ವರ್ಷಗಳ ಹಿಂದೆ ನಮ್ಮ ರಾಜ್ಯದ ಸಹಕಾರಿ ರಂಗಕ್ಕೆ ಬಹಳ ಉತ್ತಮ ಹೆಸರು ಇತ್ತು. ಏನು ದುರಾದೃಷ್ಟವೋ ಏನೋ ಕಳೆದ ೭-೮ ವರ್ಷಗಳಲ್ಲಿ ಸ್ವಲ್ಪ ಇದರ ಅಧಃಪತನ ಪ್ರಾರಂಭವಾಗಿದೆ. ನಮ್ಮ ಆಡಳಿತ ಮಂಡಲಿಯವರಲ್ಲಿ ಹೊಣೆಗಾರಿಕೆ ಕಡಿಮೆಯಾಗುತ್ತಿದೆ, ಇದು ಬಹಳ ಮುಖ್ಯ ಕಾರಣ. ಮಾನ್ಯ ಆಚಾರ್ಯ ಅವರು ಹೇಳಿದಹಾಗೆ ಇದಕ್ಕೆ ಹೆಚ್ಚಿನ ಒಂದು ಟ್ರೈನಿಂಗ್, ಶಿಕ್ಷಣ ಬೇಕು. ಈಗಿರುವ ವ್ಯವಸ್ಥೆ ಸಾಲದು ಎನ್ನುವ ಭಾವನೆಯನ್ನು ಆಚಾರ್ ಅವರು ವ್ಯಕ್ತ ಪಡಿಸಿದ್ದಾರೆ. ಅದನ್ನು ನಾನು ಒಪ್ಪುತ್ತೇನೆ. ಇವುಗಳನ್ನು ಬಲಪಡಿಸುವುದಕ್ಕೆ ಮತ್ತು ಈ ಸಂಸ್ಥೆಗಳು ಸರ್ಕಾರದ್ದು ಅಲ್ಲ ನಮ್ಮದೇ ಎನ್ನುವ ಒಂದು ಸಹಕಾರಿ ಭಾವನೆ ಜನರಲ್ಲಿ ಎಷ್ಟು ಮೂಡಿಸುವುದಕ್ಕೆ ಸಾಧ್ಯವೋ ಅಷ್ಟು ಮೂಡಿಸುವುದಕ್ಕೆ ಸರ್ಕಾರ ಶಕ್ತಿ ಮೀರಿ ಪ್ರಯತ್ನ ಮಾಡುತ್ತದೆಂದು ಈ ಸಭೆಯಲ್ಲಿ ನಾನು ಭರವಸೆ ಕೊಡುತ್ತೇನೆ. ಕಳೆದ ವರ್ಷ ನಾನು ಮಂಗಳೂರಿಗೆ ಹೋಗಿದ್ದಾಗ ಮಂಗಳೂರು ಮತ್ತು ಬೆಳಗಾಂನಲ್ಲಿ ಎರಡು ಸಹಕಾರಿ ತರಬೇತಿ ಕೇಂದ್ರಗಳನ್ನು ತೆರೆಯುವ ಬಗ್ಗೆ ಮಾನ್ಯ ಜಾಲಪ್ಪನವರು ಮಾತು ಕೊಟ್ಟರೂ ಸಹಾ ಅದನ್ನು ಮಾಡಿಲ್ಲಾ ಎಂದು ಹೇಳಿದರು. ಅದು ಕಾರಣಾಂತರದಿಂದ ಸಾಧ್ಯವಾಗಿಲ್ಲ. ಅದಕ್ಕಾಗಿ ನಾನು ವಿಷಾದ ಪಡುತ್ತೇನೆ. ಮತ್ತು ಈ ವರ್ಷ ನಾನು ಅದಕ್ಕೋಸ್ಕರ ಪ್ರಯತ್ನ ಮಾಡುತ್ತೇನೆಂದು ಅವರಿಗೆ ಭರವಸೆ ಕೊಡುತ್ತೇನೆ. ಜೊತೆಗೆ ಮಹಿಳಾ ಶಿಕ್ಷಕರು ಜಾಸ್ತಿ ಬೇಕು ಎಂದು ಹೇಳಿದರು. ಅದನ್ನು ನಾನು ಒಪ್ಪುತ್ತೇನೆ. ಈ ವರ್ಷ ಎಷ್ಟು ಜಾಸ್ತಿ ಅವರನ್ನು ಒದಗಿಸುವುದಕ್ಕೆ ಸಾಧ್ಯವೋ ಅಷ್ಟನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಇನ್ನು ಸಹಕಾರಿ ರಂಗದಲ್ಲಿ ಮಹಿಳೆಯರಿಗೆ ಹೆಚ್ಚು ಪಾತ್ರ ಕೊಡಬೇಕೆಂದು ಹೇಳಿದ್ದಾರೆ. ನಾವು ಮೊದಲನೆಯ ಸಾರಿ ಈ ಸಹಕಾರಿ ಕಾನೂನಿಗೆ ತಿದ್ದುಪಡಿ ತಂದಾಗ ಪ್ರಾಥಮಿಕ ಮಟ್ಟದಲ್ಲಿ ಒಬ್ಬ ಹರಿಜನರಿಗೆ ಹಾಗೂ ಒಬ್ಬ ಮಹಿಳೆಯರಿಗೆ ಪ್ರಾತಿನಿಧ್ಯ ಕೊಡಬೇಕೆಂದು ಬದಲಾವಣೆ ಮಾಡಿದ್ದೇವೆ. ಇದನ್ನು ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲಿ ಮಾಡಬೇಕಾಗಿದೆ. ಏನು ಒಂದು ಸಮಗ್ರ ಬದಲಾವಣೆಯನ್ನು ಮಾಡುತ್ತೇವೆಯೋ ಆಗ ಅದನ್ನು ಸೇರಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇದರ ಜೊತೆಗೆ ಒಂದು ಸುದ್ದಿಯನ್ನು ತಮ್ಮ ಗಮನಕ್ಕೆ ತರಲು ಇಷ್ಟ ಪಡುತ್ತೇನೆ. ನಾವು ಬೀದರ್ ಜಿಲ್ಲೆಯಲ್ಲಿ ಏನು ಹಾಲಿನ ಸಹಕಾರಿ ಸಂಘವನ್ನು ಮಾಡಿದ್ದೇವೆ ಅದನ್ನು ಪೂರ್ಣವಾಗಿ ಹೆಣ್ಣು ಮಕ್ಕಳ ಕೈಗೆ ಕೊಟ್ಟಿದ್ದೇವೆ. ಅದರ ಸದಸ್ಯರು, ಆಡಳಿತ ಮಂಡಳಿಯ ಅಧ್ಯಕ್ಷರು ಹಾಗೂ ಆಡಳಿತ ಮಂಡಲಿಯವರೆಲ್ಲರೂ ಹೆಣ್ಣುಮಕ್ಕಳಾಗಿದ್ದಾರೆ. ಇಂತಹ ಒಂದು ವ್ಯವಸ್ಥೆಯನ್ನು ಅಲ್ಲಿ ಮಾಡಿದ್ದೇವೆ. ಜೊತೆಗೆ ಎಲ್ಲೆಲ್ಲಿ ಮಹಿಳೆಯರು ಗ್ರಾಹಕರ ಸಹಕಾರಿ ಸಂಘಗಳನ್ನು ಮಾಡುವುದಕ್ಕೆ ಮುಂದೆ ಬರುತ್ತಾರೋ ಅಲ್ಲಿ ಕಾನೂನು ಸಡಿಲ ಮಾಡಿ ಅವರು ರಿಜಿಸ್ಟ್ರೇಷನ್ ಮಾಡುವಾಗ ಅವರು ಕಟ್ಟುವ ಹಣದಲ್ಲಿ ಅರ್ಧ ಹಣ ಕಟ್ಟಿದರೆ ಸಾಕು ರಿಜಿಸ್ಟ್ರೇಷನ್ ಮಾಡಬೇಕು ಎಂದು ಸರ್ಕ್ಯೂಲರ್ ಕೊಟ್ಟಿದ್ದೇವೆ. ಇವೂ ಕೂಡ ಹೆಣ್ಣು ಮಕ್ಕಳು ಸಹಕಾರಿ ರಂಗದಲ್ಲಿ ಮುಂದೆ ಬಂದರೆ ಈಗ ಏನು ಸ್ವಲ ದುರಾಡಳಿತ, ದುರುಪಯೋಗ, ಆಗುತ್ತಿದೆ ಅದು ನಿಲ್ಲಬಹುದು ಎನ್ನುವ ಆಸೆ ನನಗೆ ಇದೆ. ಸರ್ಕಾರ ಇವರಿಗೆ ಎಷ್ಟು ಉತ್ತೇಜನವನ್ನು ಕೊಡಬೇಕೋ ಅದನ್ನು ಕೊಡುವುದಕ್ಕೆ ಮುಂದೆ ಬರುತ್ತದೆಂದು ಆಶ್ವಾಸನೆಯನ್ನು ಕೊಡುತ್ತೇನೆ. ಮಾನ್ಯ ಸದಸ್ಯರು ತಾಲ್ಲೂಕಿಗೆ ಒಬ್ಬ ಎ.ಆರ್.ಸಿ.ಎಸ್. ಹಾಗೂ ಸಬ್ ಡಿವಿಜನ್‌ಗೆ ಒಬ್ಬ ಅಸಿಸ್ಟೆಂಟ್ ರಿಜಿಸ್ಟ್ರಾರ್ ಇರಬೇಕೆಂದು ಸೂಚನೆ ಕೊಟ್ಟಿದ್ದಾರೆ. ಇದನ್ನು ನಾನು ಒಪ್ಪುತ್ತೇನೆ. ಕಾರಣಾಂತರದಿಂದ ಕಳೆದ ವರ್ಷ ಈ ಬಗ್ಗೆ ಚರ್ಚೆ ಮಾಡಿದರೂ ಅದನ್ನು ಜಾರಿಗೆ ತರಲಿಕ್ಕೆ ಆಗಲಿಲ್ಲ. ಇದನ್ನು ಈ ವರ್ಷ ಕೂಡಾ ಪೂರ್ಣವಾಗಿ ಜಾರಿಗೆ ಕೊಡುವುದಕ್ಕೆ ಕಷ್ಟವಾಗುತ್ತದೆ. ಆದರೂ ಈ ವಿಷಯವನ್ನು ಮಂತ್ರಿಮಂಡಲದ ಮುಂದೆ ನಾನು ತೆಗೆದುಕೊಂಡು ಹೋಗಿ ಏನು ಒಂದು ಸಬ್ ಡಿವಿಜನ್‌ಗೆ ೪-೫ ತಾಲ್ಲೂಕುಗಳು ಇವೆ ಅವನ್ನು ೩ ಅಥವಾ ೨ಕ್ಕೆ ಇಳಿಸಿ ಒಂದೊಂದು ಸಬ್ ಡಿವಿಜನ್‌ಗೆ ಒಬ್ಬೊಬ್ಬ ಅಸಿಸ್ಟೆಂಟ್ ರಿಜಿಸ್ಟ್ರಾರ್ ಅವರನ್ನು ಹಾಕುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಇನ್ನೊಂದು ಮುಖ್ಯವಾದ ವಿಚಾರ ಎಂದರೆ, ವಿಚಾರಣಾ ವಿಭಾಗ. ಈಗಿರತಕ್ಕ ವಿಭಾಗದಲ್ಲಿ ಬಹಳಷ್ಟು ಶಕ್ತಿ ಇಲ್ಲವಾಗಿದೆ. ಇದನ್ನು ನಾನು ಒಪ್ಪುತ್ತೇನೆ. ಇನ್ನೂ ಹೆಚ್ಚಿನ ಶಕ್ತಿ ಇದಕ್ಕೆ ಬೇಕಾಗಿದೆ. ಯಾರಾದರೂ ಸ್ವಲ್ಪ ಉತ್ತಮ ಗುಣ ಇರುವವರನ್ನು ಅಲ್ಲಿಗೆ ಹಾಕಬೇಕಾಗುತ್ತದೆ. ಡೆಪ್ಯುಟಿ ರಿಜಿಸ್ಟ್ರಾರ್ ಮತ್ತು ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರ ಹುದ್ದೆಗಳನ್ನು ಜಾಸ್ತಿ ಮಾಡಬೇಕೆಂದು ಅರ್ಥ ಮಂತ್ರಿಮಂಡಲದ ಮುಂದೆ ತೆಗೆದುಕೊಂಡು ಹೋಗುತ್ತಿದ್ದೇನೆ. ಅರ್ಬಿಟ್ರೇಷನ್ ಕೇಸ್ ಆಗಿಲ್ಲವೆಂದು ಮಾನ್ಯ ಸದಸ್ಯರು ಹೇಳಿದರು. ಇದು ನಿಜ. ಈಗಾಗಲೇ ಮಾನ್ಯ ಕೆ.ಹೆಚ್. ಪಾಟೀಲ್‌ರವರು ಅವರ ತಿದ್ದುಪಡಿಯಲ್ಲಿ ಪ್ರತ್ಯೇಕವಾದ ಕೋರ್ಟ್‌ಗಳನ್ನು ಮಾಡಬೇಕೆಂದು ಹೇಳಿದ್ದಾರೆ. ಅದನ್ನು

ನಾನು ಗಮನದಲ್ಲಿಟ್ಟುಕೊಂಡಿದ್ದೇನೆ. ಮಾನ್ಯ ಪಾಟೀಲ್‌ರವರು ತಮ್ಮ ಸಲಹೆಗಳನ್ನು ಏನು ಕೊಟ್ಟಿದ್ದಾರೆ ಅದಕ್ಕೆಲ್ಲಾ ನಾನು ಉತ್ತರವನ್ನು ಕೊಡುವಾಗ ಹೇಳುತ್ತೇನೆ. ಈ ವರ್ಷ ಸಮಗ್ರವಾದ ತಿದ್ದುಪಡಿಯನ್ನು ನಾವು ಏನು ತರುತ್ತಿದ್ದೇವೆ ಆಗ ಅವರು ಕೊಟ್ಟಿರತಕ್ಕ ಸಲಹೆಗಳನ್ನು ಅದರಲ್ಲಿ ಸೇರಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಕಳೆದ ಸಾರಿಯೇ ಇದನ್ನು ಸೇರಿಸಬೇಕೆಂದು ಹೇಳಿದಾಗ ಅದಕ್ಕೆ ರಾಷ್ಟ್ರಪತಿಗಳ ಸಹಿ ಹಾಕಬೇಕಾಗಿತ್ತು. ಅದಕ್ಕೆ ಸಮಯದ ಅಭಾವ ಇದ್ದುದರಿಂದ ಅವಶ್ಯಕವಾದ ಕೆಲವು ತಿದ್ದುಪಡಿಗಳನ್ನು ಮಾತ್ರ ಆಗ ತರಬೇಕಾಯಿತು. ಮುಂದಿನ ಅಧಿವೇಶನವೊಳಗಾಗಿ ಎಲ್ಲಾ ಪಕ್ಷದ ಸದಸ್ಯರನ್ನೂ ಕರೆದು ಅವರೊಡನೆ ಚರ್ಚೆಮಾಡಿ ಸಮಗ್ರ ತಿದ್ದುಪಡಿಯನ್ನು ಅಳವಡಿಸಿ ಅದನ್ನು ಸಭೆಯ ಮುಂದಿಡುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಆಡಿಟರ್ಸ್ ವಿಚಾರದಲ್ಲಿ ಹೇಳಬೇಕಾದರೆ, ಕಳೆದ ೨ ವರ್ಷದಿಂದ ೨೧೫ ಜನ ಆಡಿಟರ್ಸ್‌ಗೆ ಸಂದರ್ಶನ ನಡೆಸಿ ಅಷ್ಟು ಜನರಿಗೂ ನಾವು ನೇಮಕಾತಿ ಆದೇಶವನ್ನು ಕೊಟ್ಟಿದ್ದೇವೆ. ಆದರೆ ಇವರ ಪೈಕಿ ೧೯೫ ಜನರು ಕೆಲಸಕ್ಕೆ ಹಾಜರಾಗಿದ್ದಾರೆ. ಇದರಿಂದಾಗಿ ಇನ್ನುಮುಂದೆ ಆಡಿಟ್ ಕೆಲಸ ನಿಧಾನವಾಗುವುದಿಲ್ಲವೆಂದು ಭಾವಿಸಿದ್ದೇನೆ.

ಇನ್ನು ಸೆಕ್ಷನ್ ೧೨ (ಎ) ಇದನ್ನು ತಿದ್ದುಪಡಿ ಮಾಡಿದ್ದುದು ಸರಿಯಲ್ಲವೆಂದು ಮಾನ್ಯ ಸದಸ್ಯರಾದ ಆಚಾರ್‌ರವರು ಹೇಳಿದರು. ಮಾನ್ಯ ಕೆ. ಹೆಚ್. ಪಾಟೀಲ್‌ರವರ ಸಮಿತಿ ಏನಿತ್ತು ಅದರಲ್ಲಿ ಹೇಳಿರುವ ಪ್ರಕಾರ ಮಾಡ ಬೇಕಾಯಿತು. ಆದರೆ ಅದರಲ್ಲಿರುವುದು ೧೨ (ಎ) ಎಂದು ಅಲ್ಲ. ಸೆಕ್ಷನ್ ೧೨, ಸಬ್ ಸೆಕ್ಷನ್ ೫ ಮತ್ತು ೬ ಎಂದು ಇದರಲ್ಲಿ ಹೇಳಿದ್ದಾರೆ. ಅದನ್ನು ಇಲ್ಲಿ ಅಳವಡಿಸಿದ್ದೇವೆ. ಇದಕ್ಕೆ ಕಾರಣ ಏನೆಂದು ಮಾನ್ಯ ಆಚಾರ್‌ರವರಿಗೆ ಇತ್ತು ಪಿ. ಎಲ್. ಡಿ. ಬ್ಯಾಂಕ್‌ನಲ್ಲಿ ರಾತ್ರೋರಾತ್ರಿ ಸದಸ್ಯರನ್ನು ಸೇರಿಸಿಕೊಂಡು ಚುನಾವಣೆಯಲ್ಲಿ ಮೋಸ ಮಾಡುತ್ತಾರೆಂದು ಹೇಳಿದರು. ಅದು ನನಗೂ ಗೊತ್ತಿತ್ತು. ಇದರ ಜೊತೆಗೆ ಬಹಳಷ್ಟು ವ್ಯವಸಾಯ ಸಹಕಾರ ಸಂಘಗಳಿಂದ ತಾಲ್ಲೂಕು ಬ್ಯಾಂಕ್‌ಗೆ. ಒಬ್ಬೊಬ್ಬರಿಗೆ ಒಂದೊಂದು ಪ್ರಾತಿನಿಧ್ಯವನ್ನು ಕೊಡಬೇಕು. ಡಿಫಾಲ್ಟರ್ ಎಂದರೆ ೫ ರೂಪಾಯಿಗಳನ್ನು ನಿಲ್ಲಿಸಿಕೊಂಡರೂ ಡಿಫಾಲ್ಟರ್ಸ್, ೧೦೦ ರೂಪಾಯಿಗಳನ್ನು ನಿಲ್ಲಿಸಿಕೊಂಡರೂ ಡಿಫಾಲ್ಟರ್ಸ್. ಇಂಥವರು ಅಲ್ಲಿ ಬರುವುದಕ್ಕೆ ಅವಕಾಶ ಇಲ್ಲದಿರುವುದರಿಂದ ಹಾಲಿನ ಸಹಕಾರಿ ಸಂಘಗಳ ಪ್ರತಿನಿಧಿಗಳು ಆ ಬೋರ್ಡ್‌ನಲ್ಲಿ ಬಂದರು. ಇದರಿಂದಾಗಿ ಜಿಲ್ಲಾ ಬ್ಯಾಂಕ್‌ನ ಕ್ಯಾರೆಕ್ಟರೇ ಹೋಯಿತು. ನಮ್ಮ ಬ್ಯಾಂಕ್‌ಗೆ ಒಂದು ಪತ್ರವನ್ನು ಬರೆದು ನೀವು ನಿಯಮವನ್ನು ಸರಿಯಾಗಿ ತಿದ್ದುಪಡಿ ಮಾಡಿಕೊಳ್ಳಿ, ಪ್ರತಿಯೊಂದು ತಾಲ್ಲೂಕಿಗೂ ವ್ಯವಸಾಯ ಸಹಕಾರ ಸಂಘಗಳಿಂದ ಒಂದು ಪ್ರಾತಿನಿಧ್ಯ ಕೊಡಬೇಕೆಂದು ತಿಳಿಸಿದ್ದೇನೆ. ಇದರ ಬಗ್ಗೆ ಜನರಲ್ ಬಾಡಿ ಮೀಟಿಂಗ್‌ನ್ನು ಕರೆದು ಅಲ್ಲಿ ಅವರು ಇದನ್ನು ರೆಫ್ಯೂಸ್ ಮಾಡಿದರು. ಇದನ್ನು ಯಾವುದೇ ಒಂದು ರಾಜಕೀಯದಿಂದ ತಂದಿದ್ದಲ್ಲ. ಸಂಸ್ಥೆಗಳ ಕಾರ್ಯಚಟುವಟಿಕೆಗಳನ್ನು ಸುಗಮಗೊಳಿಸುವುದಕ್ಕಾಗಿ ತಂದಿದ್ದೇವೆ. ಇದು ಮಾನ್ಯ ಪಾಟೀಲ್‌ರವರಿಗೂ ಗೊತ್ತಿದೆ. ೪ ಜಿಲ್ಲಾ ಬ್ಯಾಂಕ್‌ಗಳಲ್ಲಿ ಅವರ ಅಧಿಕಾರಿಗಳಿದ್ದಾರೆ. ನಾವು ಇನ್‌ಸ್ಪೆಕ್ಷನ್‌ಗೆ ಹೋದರೆ ಏನೂ ಸಿಕ್ಕುವುದಿಲ್ಲ. ಸೆಕ್ಷನ್ ೬೪ರ ಪ್ರಕಾರ ಎನ್‌ಕ್ವೈರಿ ಮಾಡಲುಹೋದರೆ ಅವರು ಸಂಬಂಧಪಟ್ಟ ದಾಖಲಾತಿಗಳನ್ನು ಕೊಡುವುದಿಲ್ಲ. ಆರ್. ಬಿ. ಐ. ನವರು ಹೋದರೂ ಕೂಡ ಅದರೆ ಅವರಿಗೂ ಕೊಡುವುದಿಲ್ಲ ಇದಕ್ಕೆ ಒಂದು ವ್ಯವಸ್ಥಿತವಾದ ರೀತಿಯಲ್ಲಿ ತಿದ್ದುಪಡಿಯನ್ನು ತಂದಿದ್ದೇವೆ. ಅದು ಬಿಟ್ಟು ಇದರಲ್ಲಿ ಬೇರೆ ಯಾವ ಉದ್ದೇಶವೂ ಇಲ್ಲ.

ಇನ್ನು ನಾಮಿನೇಷನ್ ಬಗ್ಗೆ ಮಾನ್ಯ ಸದಸ್ಯರಾದ ಕೆ. ಎಚ್. ಪಾಟೀಲ್‌ರವರೂ ಮತ್ತು ಆಚಾರ್‌ರವರೂ ಮಾತನಾಡಿದ್ದಾರೆ. ಇದು ಬಹಳ ಕಾಲದಿಂದ ನಡೆದುಕೊಂಡು ಬಂದಿದೆ. ವಿಧಿಯಿಲ್ಲದೆ ನಾವು ನಾಮಿನೇಷನ್ ಮಾಡಬೇಕಾಗಿದೆ. ಇದಕ್ಕೆ ನಾನು ಏನೂ ಮಾಡುವುದಕ್ಕೆ ಸಾಧ್ಯವಿಲ್ಲ. ರಾಜಕೀಯವಾಗಿ ಇದನ್ನು ಹಲವಾರು ಸಾರಿ ಉಪಯೋಗಿಸಿಕೊಳ್ಳಬೇಕಾಗುತ್ತದೆ. ಉದಾಹರಣೆಗೆ ಹೇಳುವುದಾದರೆ ಮಂಡ್ಯ ಜಿಲ್ಲಾ ಬ್ಯಾಂಕ್ ಹಿಂದೆ ಒಂದು ಕಾಲದಲ್ಲಿ ಬಹಳ ಉತ್ತಮವಾಗಿತ್ತು. ಒಳ್ಳೆಯ ಹೆಸರು ಇದಕ್ಕೆ ಇತ್ತು. ಆದರೆ ಕಳೆದ ೩-೪ ವರ್ಷದಿಂದ ಸುಮಾರು ೩೦-೪೦ ಪರ್ಸೆಂಟ್ ರಿಕವರಿಗೆ ಬಂತು. ಇಂಥ ಕಡೆಯಲ್ಲಿ ನಾವು ಪ್ರವೇಶ ಮಾಡಬೇಕಾಗುತ್ತದೆ. ಗುಲ್ಬರ್ಗಾದಲ್ಲಿ ನಾವು ಒಬ್ಬ ವ್ಯಕ್ತಿಯನ್ನು ನಾಮಿನೇಟ್ ಮಾಡಬೇಕಾಗಿ ಬಂತು. ಆದರೆ ಆ ವ್ಯಕ್ತಿಯ ಮೇಲೆ ದೂರುಗಳು ಇದ್ದುವು, ಅಂಥ ವ್ಯಕ್ತಿಯನ್ನು ಅಲ್ಲಿಗೆ ನಾಮಿನೇಟ್ ಮಾಡಿದ್ದುದು ಸರಿಯಲ್ಲವೆಂದು ಕೆಲವರು ಹೇಳಿದರು. ಆಮೇಲೆ

ಆ ವ್ಯಕ್ತಿಯನ್ನು ಮೊದಲು ನಾಮಿನೇಟ್ ಮಾಡುವಂತೆ ನಿಮ್ಮ ಪಕ್ಷದವರೇ ಬಂದು ನನ್ನ ಮೇಲೆ ಒತ್ತಾಯ ತಂದಿದ್ದರು. ಇನ್ನು ಮುಂದೆ ನಾಮಿನೇಟ್ ಮಾಡತಕ್ಕಂಥ ಸಂದರ್ಭದಲ್ಲಿ ಯಾವುದೇ ವ್ಯಕ್ತಿಯಾಗಲಿ ಅವನ ಬಯೋಡಾಟಾ ತೆಗೆದುಕೊಂಡು ಮಾಡಬೇಕೆಂದು ಹೇಳಿದ್ದೇನೆ. ಆದರೆ ಸದ್ಯಕ್ಕೆ ಈ ನಾಮಿನೇಷನ್ ಪದ್ಧತಿಯನ್ನು ನಿಲ್ಲಿಸುವುದು ಕಷ್ಟವಾಗುತ್ತದೆಂದು ಹೇಳಬಯಸುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್.—ತಮ್ಮ ಪಕ್ಷದವರನ್ನೇ ನಾಮಿನೇಟ್ ಮಾಡಿ. ಅದಕ್ಕೆ ನಮ್ಮ ಅಭ್ಯಂತರವಿಲ್ಲ. ಆದರೆ ಮಾಡುವಾಗ ಕಾನೂನನ್ನು ಮೀರಿ ಮಾಡಬೇಡಿ. ಕೆಲವು ಸಂದರ್ಭದಲ್ಲಿ ೬–೭ ನಾಮಿನೇಷನ್ ಮಾಡಿದ್ದೀರಿ. ಕಾನೂನು ರೀತಿ ಮಾಡಿದರೆ ನಾವು ಯಾರೂ ಕೂಡ ಅಡ್ಡ ಬರುವುದಿಲ್ಲ.

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಕೆ. ಹೆಚ್. ಪಾಟೀಲ್‌ರವರ ತಿದ್ದುಪಡಿ ಬರಲಿ ಎನ್ನುವ ದೃಷ್ಟಿಯಿಂದ ಚುನಾವಣೆಯನ್ನು ಮುಂದೂಡಿದ್ದರು. ನಾವು ಅಧಿಕಾರಕ್ಕೆ ಬಂದಮೇಲೆ ಎ.ಪಿ.ಎಂ.ಸಿ, ಜಿಲ್ಲಾ ಬ್ಯಾಂಕ್, ಪಿ.ಎಲ್.ಡಿ ಬ್ಯಾಂಕ್ ಮುಂತಾದ ಕಡೆಗಳಲ್ಲಿ ಚುನಾವಣೆಯನ್ನು ಮಾಡಿದ್ದೇವೆ. ಉಳಿದ ಕಡೆಗಳಲ್ಲೂ ಚುನಾವಣೆಯನ್ನು ಮಾಡಬೇಕೆಂದು ನಾವು ಹೇಳಿದ್ದೇವೆ. ಇನ್ನು ೬ ವರ್ಷಗಳ ನಿಯಮವನ್ನು ಏತಕ್ಕೆ ಹಾಕಿದ್ದೀರಿ ಎಂದು ಕೇಳಿದರು. ಈ ೬ ವರ್ಷದ ನಿಯಮವನ್ನು ನಾವು ಹಾಕದೇ ಇದ್ದಿದ್ದರೆ ಬಹಳ ಕಷ್ಟವಾಗುತ್ತಿತ್ತು. ನನಗೂ ಅಲ್ಲಿ ಬರುವುದಕ್ಕೆ ಅವಕಾಶ ಇರುತ್ತಿರಲಿಲ್ಲ. ೧೦–೨೦ ವರ್ಷವಾದರೂ ಇದ್ದವರೇ ಇರುತ್ತಿದ್ದರು. ೬ ವರ್ಷ ನಿಯಮವನ್ನು ಮೊದಲನೆಯದಾಗಿ ನಾನು ತಂದಿದ್ದದು ಅಲ್ಲ. ಹಿಂದಿನ ಸರ್ಕಾರದವರು ತಂದಿದ್ದುದು. ೫ ವರ್ಷ ೯ ತಿಂಗಳು ಅಧಿಕಾರದಲ್ಲಿದ್ದು ಇನ್ನು ೩ ತಿಂಗಳ ಕಾಲ ಇರುವಾಗ ರಾಜೀನಾಮೆಯನ್ನು ಕೊಟ್ಟು ಮತ್ತೆ ಚುನಾವಣೆಯಲ್ಲಿ ಅವರೇ ಗೆದ್ದು ಬರುತ್ತಿದ್ದರು. Therefore, I made the amendment as "either continuously or intermittently" ಇದನ್ನು ನಾನು ಹೊಸದಾಗಿ ತಂದಿದ್ದುದು ಏನೂ ಅಲ್ಲ. ನಾನು ಒಂದು ಮಾತನ್ನು ಸಂತೋಷದಿಂದ ಹೇಳುತ್ತೇನೆ. ಈ ನಿಯಮವನ್ನು ಮಾಡಿದ ಮೇಲೆ ಕೇಂದ್ರ ಸಹಕಾರ ಇಲಾಖೆಯವರು ಒಂದು ತಿದ್ದುಪಡಿಯನ್ನು ಮಾಡಿದ್ದಾರೆ. ನಾವು ೯–೧ ೧೯೮೫ರಲ್ಲಿ ಆರ್ಡಿನೆನ್ಸ್ ಪಾಸ್ ಮಾಡಿದೆವು. ೩೦–೩–೧೯೮೫ರಲ್ಲಿ ಬಿಲ್ ಪಾಸ್ ಆಯಿತು. ನಾವು ಇಲ್ಲಿ ಏನು ಮಾಡಿದ್ದೇವೆ ಇದನ್ನು ನೋಡಿಕೊಂಡು ಕೇಂದ್ರ ಸಹಕಾರ ಸಂಘದವರು ಅದನ್ನೇ ಅಳವಡಿಸಿಕೊಂಡಿದ್ದಾರೆ. ವೆಸ್ಟೆಡ್ ಇಂಟರೆಸ್ಟ್‌ನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಇದರಲ್ಲಿ ಬೇರೆ ಯಾವ ಉದ್ದೇಶವೂ ಇಲ್ಲವೆಂದು ನಾನು ಹೇಳಬಯಸುತ್ತೇನೆ. ನಾವು ಏನು ಕ್ರಿಮಿನಲ್ ಕೇಸುಗಳನ್ನು ಹಾಕುತ್ತಿದ್ದೇವೆ ಅವುಗಳ ಪೈಕಿ ಬಹಳಷ್ಟು ಕೋರ್ಟಿನಲ್ಲಿ ನಿಲ್ಲುತ್ತಿಲ್ಲ. ಇದಕ್ಕೆ ಕಾರಣಗಳು ಬೇರೆ ಬೇರೆ ಇರಬಹುದು. ಪೋಲೀಸರು ಸರಿಯಾದ ರೆಕಾರ್ಡ್ಸ್‌ನ್ನು ಒದಗಿಸದೇ ಇರಬಹುದು, ಅಥವಾ ಹೆಚ್ಚು ಆಸಕ್ತಿಯನ್ನು ತೆಗೆದುಕೊಳ್ಳದೇ ಇರಬಹುದು. ಆದ್ದರಿಂದ ಪೋಲೀಸ್ ಇಲಾಖೆಯಿಂದಲೇ ಕೆಲವರ ಸೇವೆಯನ್ನು ಎರವಲು ಪಡೆದುಕೊಂಡು ನಮ್ಮಲ್ಲಿಯೇ ಏತಕ್ಕೆ ಅವರನ್ನು ಇಟ್ಟುಕೊಳ್ಳಬಾರದು ಎಂದು ಮಾಡಿದ್ದೇವೆ. ಒಂದು ಜಿಲ್ಲೆಯಲ್ಲಿ ೨೬ ಕ್ರಿಮಿನಲ್ ಕೇಸುಗಳನ್ನು ಹಾಕಿದ್ದೇವೆ. ಇವುಗಳ ಪೈಕಿ ೨೪ ಕೇಸುಗಳು ಅಕ್ವಿಟ್ ಆಗಿವೆ, ಒಂದು ಕೇಸ್ ಕನ್ವಿಕ್ಟ್ ಆಗಿದೆ. ಈ ದಿಸೆಯಲ್ಲಿ ಏನಾದರೊಂದು ವ್ಯವಸ್ಥೆಯನ್ನು ಮಾಡಬೇಕೆಂದು ನಾವು ಯೋಚನೆ ಮಾಡುತ್ತಿದ್ದೇವೆ.

೧೧–೩೦ ಎ.ಎಂ.,

ಜಮೀನುಗಳನ್ನು ಹರಾಜು ಮಾಡುವುದರ ಬಗ್ಗೆ ಹೇಳಿದರು. ಸಂಸ್ಥೆಗಳಿಗೆ ಅವುಗಳನ್ನು ಬಿಟ್ಟುಕೊಡಬಾರದೆಂದು ಹೇಳಿದರು. ಹರಾಜು ಹಾಕಿದರೆ ಜಮೀನನ್ನು ಬಿಡಿಸುವುದಕ್ಕೆ ಆಗುವುದಿಲ್ಲ. ಹಣ ಕೂಡ ನಮಗೆ ಬರುವುದಿಲ್ಲ. ಜಮೀನು ದೊಡ್ಡ ರೈತರದೇ ಇರಲಿ, ಸಣ್ಣ ರೈತರದೇ ಇರಲಿ ಅದನ್ನು ಅವರಿಂದ ಬಿಡುವುದಕ್ಕೆ ಆಗುವುದೇ ಇಲ್ಲ.

ಶ್ರೀ ಕೆ. ಎಚ್. ಪಾಟೀಲ್.—ಜಮೀನಿನ ವಿಷಯದ ಬಗ್ಗೆ ಡೆಪ್ಯುಟಿ ಕಮೀಷನರ್‌ರವರಿಗೇ ಅಧಿಕಾರವನ್ನು ಕೊಟ್ಟಿರತಕ್ಕಂಥದ್ದಕ್ಕೆ ನಾನು ಸ್ವಾಗತ ಮಾಡುತ್ತೇನೆ. ಇದರ ಬಗ್ಗೆ ಅನೇಕ ಜನ ಮಾನ್ಯ ಸದಸ್ಯರೂ ಕೂಡ ತಮ್ಮ ತಮ್ಮ ಅಭಿಪ್ರಾಯಗಳನ್ನೂ ಕೂಡ ವ್ಯಕ್ತಮಾಡಿದ್ದಾರೆ. ಡೆಪ್ಯುಟಿ ಕಮೀಷನರ್‌ರವರು ಎಲ್ಲಾ ಕೆಲಸವನ್ನು ಮಾಡಬೇಕೆಂದರೆ ಅವರಿಗೆ ತೊಂದರೆಯಾಗುತ್ತದೆ. ಅವರಿಗೆ ಅನೇಕ ಕೆಲಸಗಳು ಇರುತ್ತವೆ. ಸಹಕಾರಿ ಸಂಘಗಳದ್ದು ಎಲ್ಲವನ್ನು ತೆಗೆದುಕೊಳ್ಳಬೇಕೆಂದರೆ ಲ್ಯಾಂಡ್ ರಿಫಾರ್ಮ್ ಬಿಲ್ ಅಡ್ಡಿ ಬರುತ್ತದೆ. ಆದ್ದರಿಂದ ಬಿಲ್ಲನ್ನು ಅಮೆಂಡ್‌ಮೆಂಟ್ ಮಾಡುವುದಕ್ಕೆ ಪ್ರಯತ್ನ ಮಾಡಿ.

Co-operative society may hold and continue the lease. ಎಂದು ಮಾಡಿ. ಮೆಂಬರ್ಸ್ ದುಡ್ಡು ಕೊಡುವುದಕ್ಕೆ ಶಕ್ತಿಬಂದಾಗ ಕೊಡಲಿಕ್ಕೆ ಆಗುತ್ತದೆ. ಬಾಂಬೆ ಆಕ್ಟ್ ೪೯ (ಎ)ರಲ್ಲಿ ಇದನ್ನು ಅಳವಡಿಸಿದ್ದಾರೆ. ಅದೇರೀತಿಯಲ್ಲಿ ಇಲ್ಲೂ ಕೂಡ ಆಕ್ಟ್‌ನ್ನು ತಂದರೆ ಬಹಳ ಉಪಯೋಗ ವಾಗುತ್ತದೆಂದು ನನ್ನ ಅಭಿಪ್ರಾಯ.

ಶ್ರೀ ಆರ್.ಎಲ್. ಜಾಲಪ್ಪ — ಈಗಾಗಲೇ ಸಹಕಾರಿ ಸಂಘಗಳ ಜಮೀನುಗಳನ್ನು ಹರಾಜು ಮಾಡಿ ಇಟ್ಟುಕೊಳ್ಳಬೇಕು ಎನ್ನುವ ವಿಷಯವಿದ್ದರೂ ಅದರಿಂದ ಏನು ಉಪಯೋಗವಾಗುವುದಿಲ್ಲ. ಜಮೀನುಗಳನ್ನು ಬಿಡಿಸುವುದಕ್ಕೋಸ್ಕರವಾಗಿ ಇದನ್ನು ಜಿಲ್ಲಾಧಿಕಾರಿಗಳಿಗೆ ವಹಿಸಿದ್ದೇವೆಯೇ ವಿನಃ ಬೇರೆ ಯಾವ ಕಾರಣಕ್ಕೂ ಅಲ್ಲ, ಮಾನ್ಯ ಕೆಂಪೇರೇಗೌಡರು, ಮತ್ತು ಮಾನ್ಯ ಜಿ.ಎಸ್. ಆಚಾರ್‌ರವರು ಸಿ.ಸಿ.ಎ ಬಗ್ಗೆ ಹೇಳಿದರು, ಸಿ.ಸಿ.ಎ ೧೨೯ (ಎ) ಲಾಸ್ಟ್ ಟೈಮ್ ಅಮೆಂಡ್‌ಮೆಂಟ್ ಆಯಿತು ಇದಕ್ಕೆ ಕಾರಣವಾದರೂ ಇಷ್ಟೆ. ಸಿ.ಸಿ.ಎ. ಮಾಡುವಾಗ ಬಹಳ ಜವಾಬ್ದಾರಿಯಿಂದ ಮಾಡಬೇಕಾಗುತ್ತದೆ. ಬಹಳ ಒತ್ತಡಗಳು ಬರುತ್ತವೆ. ಆ ಒತ್ತಡಗಳಿಗೆ ಒಪ್ಪಿಕೊಳ್ಳಬೇಕಾಗುತ್ತದೆ, ಇದು ನನ್ನ ಅನುಭವ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಂದರೆ ತಾವು ಒತ್ತಡಗಳಿಗೆ ಒಪ್ಪಿಕೊಳ್ಳುತ್ತೀರಿ ಎಂದು ಆಯಿತು.

ಶ್ರೀ ಆರ್.ಎಲ್, ಜಾಲಪ್ಪ.—ನಾನು ನಿಜ ಹೇಳುತ್ತೇನೆ. ಇಲ್ಲವೆಂದು ಹೇಳುತ್ತಿಲ್ಲ. ಒತ್ತಡಕ್ಕೆ ಮಣಿಯುವುದಿಲ್ಲವೆಂದು ಸತ್ಯಕ್ಕೆ ದೂರುವಾದ ಮಾತು ಹೇಳುವುದಿಲ್ಲ. ಆಗ ಮಾನ್ಯ ರಂಗನಾಥರವರೂ ಇದ್ದರೂ. ಅವರ ಕಾಲದಲ್ಲಿ ಆದು ಮಾಡಿದ್ದುದು ಕೆಲಸ ಮಾಡುವವರು ಎಲ್ಲಿದ್ದಾರೆ. ಈಗ ಅಧ್ಯಕ್ಷರ ಮಾತನ್ನೇ ಕೇಳುವುದಿಲ್ಲ. ಸಿ.ಸಿ.ಎ. ಅವರು ರಿಕವರಿಗೆ ಹೋಗುತ್ತಲೇ ಇರಲಿಲ್ಲ ಭೂ ಅಭಿವೃದ್ಧಿ ಬ್ಯಾಂಕ್ ಬಹಳ ಕಡಿಮೆ ಮಟ್ಟಕ್ಕೆ ಬಂದಾಗ ನಾವು ಈ ರೀತಿ ಯೋಚನೆ ಮಾಡಿದೆವು. ಸೆಕ್ರೆಟರಿ ಮತ್ತು ಅಕೌಂಟೆಂಟ್ ಇವರುಗಳನ್ನು ಮಾತ್ರ ನಮ್ಮ ಸುಪರ್ದಿನಲ್ಲಿಟ್ಟುಕೊಂಡು ಮಿಕ್ಕವರನ್ನೆಲ್ಲ ಅವರಿಗೆ ಕೊಡ ಬೇಕೆಂದು ಯೋಚನೆ ಮಾಡಿದೆವು. ಮೆಂಬರುಗಳಿಗೆ ನಾವೇ ಬರೆದು ಕಳುಹಿಸಿದರು ರಿಕವರಿ ಮಾಡುವುದಿಲ್ಲ ನಾನ್‌ಅಫಿಶಿಯಲ್ ಬಾಡಿ ಆದ್ದರಿಂದ ಸೂಪರ್‌ಸೀಡ್ ಮಾಡಬೇಕಾಗುತ್ತದೆ. ಆದ್ದರಿಂದ ೧೨೪ (ಎ) ಅಮೆಂಡ್‌ಮೆಂಟ್ ಮಾಡಿ ಪೈನಲ್ ಸ್ಟೇಜಿಗೆ ಬಂದಿದೆ. ಜಿಲ್ಲಾ ಬ್ಯಾಂಕ್‌ಗಳು, ಮತ್ತು ಕೆಲವು ಸೊಸೈಟಿ ಗಳನ್ನೂ ಲಿಕ್ವಿಡೇಟ್ ಮಾಡಬೇಕಾಗುತ್ತದೆ. ಇನ್ನು ಹದಿನೈದು ದಿವಸಗಳಲ್ಲಿಯೇ ಅದನ್ನು ಪೈನಲೈಸ್ ಮಾಡಿಕೊಡುತ್ತೇವೆಂದು ಸದನದ ಗಮನಕ್ಕೆ ತರಬಯಸುತ್ತೇನೆ. ಇದಕ್ಕಾಗಿ ಒಂದು ಕನ್‌ಸಾಲಿಡೇಷನ್ ಕಮಿಟಿ ಎಂದು ಇದೆ ಹಿಂದೆಯೂ ಕೂಡ ಇತ್ತು, ಈಗಲೂ ಕೂಡ ಆ ರೀತಿ ಮಾಡಬೇಕಾಗಿದೆ. ಅವರಲ್ಲಿ ಹತ್ತಾರು ಜನ ಪರಿಣತರು ಇದ್ದಾರೆ, ಬಹಳಷ್ಟು ಕೆಲಸ ನಡೆಯುತ್ತಿದೆ. ಇದರಲ್ಲಿ ಯಾರು ಸಂಘ ಸಂಸ್ಥೆಗಳಲ್ಲಿ ಕೆಲಸ ಮಾಡಿದ್ದಾರೋ ಅವರ ಒಂದು ಸಲಹೆಯನ್ನು ತೆಗೆದುಕೊಳ್ಳಲು ಪ್ರಯತ್ನಪಡುತ್ತೇನೆ ಏತಕ್ಕೆಂದರೆ ಸಂಘಸಂಸ್ಥೆಗಳಲ್ಲಿ ಕೆಲಸ ಮಾಡುವವರೆಲ್ಲರೂ ಭ್ರಷ್ಟರು ಎಂದು ಹೇಳುವುದಿಲ್ಲ ಪಾಪ ಅವರು ಒಳಗಡೆ ನೋಡಲು ಕೂಡ ಅವಕಾಶವಿರುವುದಿಲ್ಲ. ಸಂಘ ಸಂಸ್ಥೆಗಳಲ್ಲಿ ಕೆಲಸಮಾಡಿ ಸಂಘ ಸಂಸ್ಥೆಗಳನ್ನು ಕಟ್ಟತಕ್ಕಂಥವರು ಅವರು ಕೊಡತಕ್ಕಂಥ ಉತ್ಕೃಷ್ಟ ಸಲಹೆಗಳನ್ನು ತೆಗೆದುಕೊಳ್ಳುತ್ತೇನೆ ಯಾರು ರಾಜ್ಯದಲ್ಲಿ ಉತ್ತಮವಾಗಿ ಕೆಲಸಮಾಡಿ ಅನುಭವ ಹೊಂದಿರುತ್ತಾರೆ ಅವರು ಯಾವುದೇ ಪಕ್ಷದಲ್ಲಿರಲಿ, ಈ ಪಕ್ಷ ಆ ಪಕ್ಷವೆಂದು ಬೇದಭಾವವನ್ನು ವ್ಯಕ್ತಪಡಿಸದೆ ಅವರು ಕೊಡತಕ್ಕಂಥ ಸಲಹೆ ಗಳನ್ನೆಲ್ಲವನ್ನು ತೆಗೆದುಕೊಂಡು ಒಂದು ವ್ಯವಸ್ಥೆಯನ್ನು ಮಾಡುತ್ತೇನೆಂದು ಈ ಸಂದರ್ಭದಲ್ಲಿ ನಾನು ಭರವಸೆಯನ್ನು ಕೊಡುತ್ತೇನೆ.

ಇನ್ನು ಕೇರಳದಲ್ಲಿ ಮೂರುವರ್ಷಗಳಿಂದ ಎನ್.ಸಿ.ಎಸ್. ಎಂದು ಮಾಡಿರುತ್ತಾರೆ ಅದನ್ನು ತರಿಸಿ ಎಂದು ಹೇಳಿದ್ದಾರೆ. ಎಷ್ಟು ಸುಲಭವಾಗಿ ರೈತರಿಗೆ ಸಾಲ ಸಿಗಬೇಕೋ ಅಷ್ಟು ಸುಲಭವಾಗಿ ಸಾಲ ಸಿಗುವಂತಹ ವ್ಯವಸ್ಥೆಯನ್ನು ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆಂದು ಭರವಸೆಯನ್ನು ಕೊಡುತ್ತೇನೆ. ಆದರೆ ನಮ್ಮ ಆಚಾರ್ಯರವರು ಒಂದು ಮಾತನ್ನು ಹೇಳಿದರು. ಇಲ್ಲಿ ಬಡ್ಡಿ ರಿಯಾಯತಿಯನ್ನು ಕೊಡು ತ್ತೇವೆಂದು ಬ್ಯಾಂಕ್ ಟೇಕ್ ಓವರ್ ಮಾಡಿದಿರಿ, ಆದ್ದರಿಂದ ಇಳಿಮುಖವಾಯಿತೆಂದು ಹೇಳಿದರು. ಮೊನ್ನೆ ಶ್ರೀ ಕೆ.ಎಚ್. ಪಾಟೀಲ್‌ರವರೂ ಕೂಡ ಮಾತನಾಡುವಾಗ ಹೇಳಿದರು, ನಮ್ಮನ್ನು ಏತಕ್ಕೆ ಸುಮ್ಮನೆ ಉಪಯೋಗಿಸಿಕೊಳ್ಳುತ್ತೀರಾ, ನಾವು ಹೇಳಿದ್ದನ್ನು ಏನು ಕಾರ್ಯಗತ ಮಾಡಲಿಲ್ಲ ನಾವಿದ್ದಾಗ ೫ ಪರ್ಸೆಂಟ್ ಸಬ್‌ಸಿಡಿ ಕೊಟ್ಟಿರುತ್ತೇವೆಂದು ಹೇಳಿದರು. ನೀವಿದ್ದಾಗ ಸಬ್‌ಸಿಡಿ ನಾಲ್ಕೂವರೆ

ಪರ್ಸೆಂಟ್ ಕೊಟ್ಟಿದ್ದೇವೆ, ನಾವು ೨ ಪರ್ಸೆಂಟ್ ಕೊಟ್ಟಿದ್ದೇವೆ. ಇಷ್ಟಾದರೂ ಹಣ ಬರಲಿ ಎಂದು ಮಾಡಿದರೆ ಅದೂ ಕೂಡ ಬರಲಿಲ್ಲ. ಹಣ ತೆಗೆದುಕೊಂಡರೇ ಹೊರತು ವಾಪಸ್ ಕೊಟ್ಟವರು ಯಾರೂ ಇಲ್ಲ. ಮತ್ತೆ ಲಿಂಕಿಂಗ್ ಮಾರ್ಕೆಟಿಂಗ್ ಮಾಡಿದ್ದೀರಾ ಎಂದು ಕೇಳಿದರು, ಅದನ್ನೂ ಕೂಡ ಮಾಡಿದ್ದೇವೆ. ಯಾರು ನಮ್ಮಲ್ಲಿ ಸಹಕಾರಿ ಸಂಘದಲ್ಲಿ ಹಣವನ್ನು ತೆಗೆದುಕೊಳ್ಳುತ್ತಾರೆ ಅವರು ವಸ್ತುಗಳನು ಬೆಳೆದು ಪುನಃ ಸಾಲದ ಹಣ ಮತ್ತು ಬಡ್ಡಿಗೆ ವಸ್ತುಗಳನ್ನು ಕೊಟ್ಟರೆ ಉದಾಹರಣೆಗೆ ಕಬ್ಬು, ರಾಗಿ, ಹತ್ತಿ ಮತ್ತು ಕಾಫಿ ಇವುಗಳನ್ನು ಬಿಟ್ಟು ಏಕ್ಕ ಬೆಳೆಗಳನ್ನು ವಾಪಸ್ ಕೊಟ್ಟರೆ ಅದಕ್ಕೆ ಮಾರ್ಕೆಟ್ ರೇಟಿಗಿಂತಲೂ ಜಾಸ್ತಿ ರೇಟ್ ಕೊಡುತ್ತೇವೆಂದು ಹೇಳಿರುತ್ತೇವೆ. ಕಳೆದ ವರ್ಷ ಒಂದು ಕೋಟಿ ರೂಪಾಯಿಗಳನ್ನು ಇದಕ್ಕಾಗಿ ಇಟ್ಟಿದ್ದರೆ ಇದರಲ್ಲಿ ಹದಿನಾರು ಸಾವಿರ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿರುತ್ತಾರೆ, ಏತಕ್ಕೆ ಇದನ್ನು ಉಪಯೋಗಿಸಿಕೊಳ್ಳಲಿಲ್ಲವೋ ಗೊತ್ತಾಗಲಿಲ್ಲ.

ಶ್ರೀ ಕೆ.ಎಚ್, ಪಾಟೀಲ್.—ಹಳೇ ಮೈಸೂರು ಭಾಗದಲ್ಲಿ ಮಾರ್ಕೆಟಿಂಗ್ ಫೆಡರೇಷನ್ ಎಂದು ಇದೆ. ರೈತ ಮಾಲನ್ನು ತೆಗೆದುಕೊಂಡು ಹೋದರೆ ಅದಕ್ಕೆ ಒಂದು ಮಾರಾಟವಾಗುವಂಥ ವ್ಯವಸ್ಥೆಯನ್ನು ಮಾಡುವುದಿಲ್ಲ ಮಾರ್ಕೆಟಿಂಗ್ ಫೆಡರೇಷನ್ ಎಂದು ಏತಕ್ಕೆ ಇಟ್ಟಿರುತ್ತಾರೋ ಗೊತ್ತಿಲ್ಲ ಈಗಲಾದರೂ ಅವುಗಳನ್ನು ಸರಿಪಡಿಸಿ, ಇಲ್ಲವಾದರೆ ಆ ಮಾರ್ಕೆಟಿಂಗ್ ಸೊಸೈಟಿಗಳನ್ನು ಕನ್‌ಸ್ಯೂಮರ್ಸ್ ಸೊಸೈಟಿಗಳೆಂದು ಬದಲಾವಣೆ ಮಾಡಿ,

ಶ್ರೀ ಆರ್.ಎಲ್, ಜಾಲಪ್ಪ.—ಮಾರ್ಕೆಟಿಂಗ್ ಫೆಡರೇಷನ್‌ಗಳನ್ನು ಬಹಳಷ್ಟು ಬದಲಾವಣೆಯನ್ನು ಮಾಡಬೇಕೆಂದಿದ್ದೇವೆ, ವರ್ಷಕ್ಕೆ ಅವರು ಇಂತಿಷ್ಟು ಮಾಲನ್ನು ಮಾರಲೇಬೇಕೆಂದು ಒಂದು ಅಮೆಂಡ್‌ಮೆಂಟ್ ಕೂಡ ತರಬೇಕೆಂದು ಯೋಚನೆ ಮಾಡುತ್ತಿದ್ದೇವೆ.

ಇನ್ನು ಬಡ್ಡಿ ರಿಯಾಯತಿ ಕೊಟ್ಟಿರತಕ್ಕಂಥದ್ದು ೧೯೮೦-೮೧ಕ್ಕೆ ೮,೯೦,೮೭೨ ಇದರಲ್ಲಿ ಬಡ್ಡಿ ರಿಯಾಯತಿ ಪಡೆದುಕೊಂಡವರು ೮೧,೧೦೨ ಸಣ್ಣ ರೈತರು ೯೮,೩,೮೭೩ ಬಾಕಿ ಇದ್ದಾರೆ. ಇದರಲ್ಲಿ ಸಣ್ಣ ರೈತರು ಉಪಯೋಗ ಮಾಡಿ ಕೊಂಡಿರುವವರು ೫,೧೯,೪೮೦ ಜನಬಡ್ಡಿ ರಿಯಾಯಿತಿಯನ್ನು ಪಡೆದುಕೊಂಡಿದ್ದಾರೆ. ಅಂದರೆ ಸಂಖ್ಯೆಯಲ್ಲಿ ಸಣ್ಣ ರೈತರು. ಬಹಳ ಜನರು ಇದರ ಅನುಕೂಲ ಪಡೆದುಕೊಂಡಿದ್ದಾರೆ. ಆದರೂ ಕೂಡ ಹಣದ ಮೊತ್ತದಲ್ಲಿ ದೊಡ್ಡ ರೈತರು ಸರಿಯಾಗಿ ಉಪಯೋಗ ಮಾಡಿಕೊಂಡಿಲ್ಲ ಅದಕ್ಕಾಗಿ ಮೊನ್ನೆ ತಾನೆ ಒಂದು ಕಾನೂನನ್ನು ತಂದೆವು. ಇಲ್ಲದಿದ್ದರೆ ಬೇರೆ ಹಣ ಎಲ್ಲಿಂದ ಬರಬೇಕು. ನಬಾರ್ಡ್‌ನವರು ಹಾಕಿಕೊಂಡಿರತಕ್ಕಂಥ ಡಿಸಿಪ್ಲೈನ್ ಏನು ಇದೆ ಅದನ್ನು ನಾವು ಹಾಕಿಕೊಳ್ಳದೆ ಇದ್ದರೆ ಹಣಕಾಸಿನ ವ್ಯವಸ್ಥೆಯನ್ನು ಮಾಡುವುದು ಹೇಗೆ. ನಾನು ಅವರನ್ನು ದೂರುತ್ತಿಲ್ಲ. ರಿಸರ್ವ್ ಬ್ಯಾಂಕ್ ಡಿಸಿಪ್ಲೈನ್ ಹಾಕುವುದು ಇದೆ. ನಮ್ಮ ರಾಜ್ಯದ ಹಣಕಾಸಿನ ಸ್ಟ್ರಕ್ಚರ್‌ನಲ್ಲಿ ವ್ಯವಸ್ಥಿತ ಕೆಲಸ ಮಾಡುವುದಕ್ಕೆ ನಬಾರ್ಡ್‌ನವರು ಸಹಾಯ ಮಾಡಿದ್ದಾರೆ ಅವರ ಡಿಸಿಪ್ಲೈನ್‌ನ್ನು ಮೇಂಟೈನ್ ಮಾಡುವುದು ನಮ್ಮ ಕರ್ತವ್ಯ. ಹಾಗೆ ಮಾಡದಿದ್ದರೆ ರೈತರಿಗೆ ಸಾಲ ಸಿಗುವುದಿಲ್ಲ. ಕಟ್ಟುನಿಟ್ಟಾದ ಕಾರ್ಯಕ್ರಮವನ್ನು ಕೈಗೊಳ್ಳುವುದು ಬಹಳ ಅವಶ್ಯಕವೇ ಹೊರತು ಬೇರೆ ಏನೂ ಇಲ್ಲವೆಂದು ಹೇಳಬಯಸುತ್ತೇನೆ.

ಬೆಂಗಳೂರಿನಲ್ಲಿ ನಾವು ಏನೂ ಇಂಪ್ರೂವ್‌ಮೆಂಟ್ ಮಾಡಿಲ್ಲವೆಂದು ಹೇಳಿದರು. ೧೯೮೪ ಕ್ಕೆ ೪೯ ಪರ್ಸೆಂಟ್ ೧೯೮೫ಕ್ಕೆ ೯೫ ಪರ್ಸೆಂಟ್, ಹಾಸನದಲ್ಲಿ ೧೯೮೭ ಕ್ಕೆ ೩ ಪರ್ಸೆಂಟ್ ನಾವು ಟೇಕ್ ಓವರ್ ಮಾಡಿಕೊಂಡಮೇಲೆ ಹೋದವರ್ಷ ೨೮ ಪರ್ಸೆಂಟ್ ಈ ವರ್ಷ ೨೩ ಪರ್ಸೆಂಟ್ ಮಾಡಿದ್ದೇವೆ. ಬಿಜಾಪುರ ೧೯೮೪ ರಲ್ಲಿ ೩೮ ಪರ್ಸೆಂಟ್ ಆಗಿದೆ. ಕಳೆದವರ್ಷ ಎಂದರೆ ೧೯೮೫ ರಲ್ಲಿ ೪೮ ಪರ್ಸೆಂಟ್, ಧಾರವಾಡದಲ್ಲಿ ೧೯೮೪ ಕ್ಕೆ ೪೧ ಪರ್ಸೆಂಟ್ ವಸೂಲು ಮಾಡಲಾಗಿದೆ. ಧಾರವಾಡ ೧೯೮೪ ಕ್ಕೆ ೪೧ ಪರ್ಸೆಂಟ್ ಹೋದ ವರ್ಷ ಮಾಡಿದ್ದರೆ ಈ ವರ್ಷ ೪೯ ಪರ್ಸೆಂಟ್ ವಸೂಲು ಮಾಡಿದ್ದರೆ ಈ ವರ್ಷ ೪೯ ಪರ್ಸೆಂಟ್ ವಸೂಲು ಮಾಡಿದ್ದೇವೆ. ಸುಮಾರು ಹತ್ತು ಹದಿನೈದು ವರ್ಷಗಳಿಂದ ಅಡ್ಜಸ್ಟ್‌ಮೆಂಟ್ ಮೇಲೆ ಇದು ನಡೆಯುತ್ತಿದೆ. ಕೆಲವು ಕಡೆ ಚಲನೆ ಇಲ್ಲದೇ ಅಡ್ಜಸ್ಟ್‌ಮೆಂಟ್ ಮೇಲೆ ಬರೆದುಕೊಂಡಿದ್ದಾರೆ. ಅವರೆಲ್ಲಾ ಸಿಕ್ಕಿಹಾಕಿಕೊಂಡಿದ್ದಾರೆ. ಇದೆಲ್ಲಾ ನೋಡಿಯೇ ನಾವು ಅವುಗಳನ್ನು ಸೂಪರ್‌ಸೀಡ್ ಮಾಡಿದ್ದು. ಅದು ಬಿಟ್ಟರೆ ಇದರಲ್ಲಿ ಬೇರೆ ಯಾವ ರಾಜಕೀಯವೂ ಇಲ್ಲ. ರಿಸರ್ವ್‌ಬ್ಯಾಂಕ್ ರಿಪೋರ್ಟ್ ನನ್ನ ಹತ್ತಿರ ಇದೆ. ಅದರಲ್ಲಿ ಹೇಳಿರುವ ಪ್ರಕಾರ ಈ ಬ್ಯಾಂಕುಗಳಲ್ಲಿ ಡಿಪಾಸಿಟ್ಸ್ ಜಾಸ್ತಿ ಇದೆ. ಡಿಪಾಸಿಟ್ಸ್ ಅನ್ನು ಸೇಫ್‌ಗಾರ್ಡ್ ಮಾಡುವುದು ನಮ್ಮ ಸರ್ಕಾರದ ಕರ್ತವ್ಯ. ಇಂಡಿವಿಜ್ಯುಯಲ್ ಡಿಪಾಸಿಟ್ ೧೨೫

ಕೋಟಿ ಇದೆ. ಅಪೆಕ್ಸ್ ಬ್ಯಾಂಕ್ ಜಿಲ್ಲಾಬ್ಯಾಂಕುಗಳಲ್ಲಿ ಇದು ಇದ್ದು, ಈ ಉದ್ದೇಶದಿಂದ ತಂದಿದ್ದೇವೆ ವಿನಹ...

ಶ್ರೀ ಕೆ. ಎಚ್. ಪಾಟೀಲ್.—ಈ ವಿಷಯವನ್ನು ನೀವು ಹೇಳಿರಲಿಲ್ಲ. ನೀವು ಮಾಡಿದ್ದುದು ಯೋಗ್ಯವಾದದ್ದಿದೆ. ನಾನು ಹೇಳುವುದು ಏನೆಂದರೆ ನೀವು ಒಬ್ಬ ಸ್ಪೆಷಲ್ ಆಫೀಸರ ನನ್ನು ಹಾಕಿದ ನಂತರ, ಆತ ಕೆಲವರ ಮಾತುಗಳನ್ನು ಕೇಳಿ ತನಗೆ ಬೇಕಾದಂಥವರ ಚುನಾವಣೆಯ ಸಲುವಾಗಿ ಅಸಲು ಮತ್ತು ಬಡ್ಡಿ ಕೂಡಿ ತಿರುಗಿ ಕ್ರೆಡಿಟ್ ಲೆವಿ ಎಂದು ತೋರಿಸಿದ್ದಾರೆ ಎಂದು ವರದಿ ಇದೆ. ಇದು ಸರಿಯೋ ತಪ್ಪೋ ಗೊತ್ತಿಲ್ಲ. ಇದನ್ನು ವಿಚಾರಿದರೆ ಒಳ್ಳೆಯದು.

ಶ್ರೀ ಆರ್. ಎಲ್. ಜಾಲಪ್ಪ.—ಇದನ್ನು ನಾನು ಬೆಂಗಳೂರಿನಿಂದ ಯಾರನ್ನಾದರೂ ಕಳುಹಿಸಿ ವೆರಿಫೈ ಮಾಡಿಸುತ್ತೇನೆ. ಎಲೆಕ್ಷನ್ ಬಗ್ಗೆ ನಾನು ಈಗಾಗಲೇ ಸೂಚನೆ ಕೊಟ್ಟಿದ್ದೇನೆ. ಯಾವುದಾದರೂ ದೂರು ಬಂದರೆ ಮ್ಯಾನೇಜಿಂಗ್ ಡೈರೆಕ್ಟರ್‌ನ್ನೇ ಹೊಣೆಗಾರರನ್ನಾಗಿ ಮಾಡಲಾಗುತ್ತದೆ. ಮತದಾರರ ಪಟ್ಟಿ, ಚುನಾವಣೆ ನಡೆಸುವ ಬಗ್ಗೆ ಎಲ್ಲವೂ ನ್ಯಾಯಬದ್ಧವಾಗಿ ನಡೆಯಬೇಕೆಂದು ಆದೇಶ ನೀಡಲಾಗಿದೆ. ತಮಗೆ ಬೇಕಾದರೆ ಒಂದು ಪ್ರತಿಯನ್ನು ಕಳಿಸಿಕೊಡುತ್ತೇನೆ ಇನ್ನು, ಪಿ ಎಲ್. ಡಿ. ಬ್ಯಾಂಕುಗಳು ನಷ್ಟದಲ್ಲಿವೆ ಎಂದು ಹೇಳಿದ್ದೀರಿ ೧೭೫ ಬ್ಯಾಂಕುಗಳು ಬಹಳ ಕೆಟ್ಟ ಸ್ಥಿತಿಯಲ್ಲಿದ್ದವು. ಇದನ್ನು ಟೇಕ್‌ಓವರ್ ಮಾಡಿ ಕಳೆದ ಎರಡು ವರ್ಷಗಳಿಂದ ಇಂಪ್ರೂವ್ ಮಾಡಿದ್ದೇವೆ. ಅಲ್ಲಿ ಈಗ ಈ ಹಣಕಾಸು ವಗ್ಯೆರೆ ಸರಿಯಾದ ಸಿಗುತ್ತಿದೆ. ಆದರೆ ಅಲ್ಲಿ ಇಗಿರುವಷ್ಟು ಅಪಚಾರ ಬೇರೆ ಎಲ್ಲೂ ಕೂಡ ಆಗಿರಲಿಕ್ಕಿಲ್ಲ. ಇವುಗಳ ಪೈಕಿ ೬೪ ರದ್ದು ಮಾಡಿ ತನಿಖೆ ಮಾಡಿಸುತ್ತಿದ್ದೇನೆ. ಆಮೇಲೆ, ಫ್ರುಟ್ ಪ್ರೊಸೆಸಿಂಗ್ ಸೊಸೈಟಿಸ್. ನಾನು ಬರುವ ಹೊತ್ತಿಗೆ ಅವರು ಬಾಗಿಲು ಮುಚ್ಚಿದ್ದರು. ಇದಕ್ಕೆ ಕಾರಣ ಪ್ರೊಸೆಸಿಂಗ್‌ಗೆ ಒಳ್ಳೆಯ ಹಣ್ಣು ಸಿಕ್ಕುತ್ತಿರಲಿಲ್ಲ ಎಂಬುದು. ದೊಡ್ಡದೊಡ್ಡ ಕಿತ್ತಲೆಹಣ್ಣುಗಳನ್ನು ಅಲ್ಲಿಂದ ತರುವುದು ಇಲ್ಲಿ ಇನ್‌ಕಮ್‌ಟ್ಯಾಕ್ಸ್ ಲೆಕ್ಕ ಬರುತ್ತದೆ ಅಂತ ಸಣ್ಣ ಸಣ್ಣ ಹಣ್ಣುಗಳನ್ನು ಕೊಡುವುದು ನಡೆದಿತ್ತು ಎಂದು ಕೇಳಿದ್ದೇನೆ. ಈ ಸಂಸ್ಥೆ ಈಗ ನಡೆಯುತ್ತಿಲ್ಲ. ಯಾವುದಾದರೂ ಸಹಕಾರ ಸಂಸ್ಥೆಯವರು ಮುಂದೆ ಬಂದರೆ ಸರಿ. ಇಲ್ಲದಿದ್ದರೆ ಖಾಸಗಿಯವರಿಗಾದರೂ ಇದನ್ನು ಬಾಡಿಗೆ ಆಧಾರದ ಮೇಲೆ ಕೊಡಬೇಕೆಂದು ಯೋಚನೆ ಮಾಡುತ್ತಿದ್ದೇವೆ. ಇದರ ಬಗ್ಗೆ ಈಗಾಗಲೇ ಕ್ರಮತೆಗೆದುಕೊಂಡಿದ್ದೇನೆ. ಮಾರ್ಕೆಟಿಂಗ್ ಬಗ್ಗೆ ನಾನು ಹೇಳಿದ್ದೇನೆ. ಇನ್ಶೂರೆನ್ಸ್ ಬಗ್ಗೆ ಶ್ರೀಮಾನ್ ಆಚಾರ್ಯ ಅವರು ಮಾತನಾಡಿ ಅನ್ಯಾಯವಾಗಿ ದಂಡ್ದು ಕಳೆದುಕೊಳ್ಳುತ್ತಿದ್ದೇವೆ ಎಂದು ಹೇಳಿದ್ದಾರೆ ಇದು ನಮ್ಮ ಸ್ಕೀಮ್ ಅಲ್ಲ. ಕೇಂದ್ರಸರ್ಕಾರದ ಸ್ಕೀಮ್. ನಾವು ಇದನ್ನು ನಡೆಸುತ್ತಿದ್ದೇವೆ, ಅಷ್ಟೇ. ಪುತ್ತೂರು ಮತ್ತು ಉಡುಪಿಯಲ್ಲಿ ಬಿಲ್ಡಿಂಗ್ ಬಗ್ಗೆ ಹೇಳಿದರು. ಈಗಾಗಲೇ ಅದರಬಗ್ಗೆ ನೋಟಿಫೈ ಮಾಡಿದ್ದೇವೆ, ಸೆಪ್ಟೆಂಬರ್‌ನಲ್ಲಿ ಶಿಫ್ಟ್ ಮಾಡಬೇಕೆಂದು ಎಕ್ಸಿಸ್ಟಿಂಗ್ ಮಾರ್ಕೆಟ್ ಅನ್ನು ಡಿನೋಟಿಫೈ ಮಾಡಿದ್ದೇವೆ. ಮಾನ್ಯ ಶ್ರೀ ಕೆ. ಎಚ್. ಪಾಟೀಲರು ಒಳ್ಳೆಯ ಸಲಹೆ ಕೊಟ್ಟಿದ್ದಾರೆ. ಆದರೆ ಒಂದು ಅಂಶವನ್ನು ಅವರು ಕನ್‌ಫ್ಯೂಷನ್ ಮಾಡಿಕೊಂಡಿದ್ದಾರೆ ಎಂದು ತಿಳಿದುಕೊಂಡಿದ್ದೇನೆ. ೨೫-೩೦ ಸಾವಿರ ಹಳ್ಳಿಗಳಲ್ಲಿ ೬೨೦೦ ಸಹಕಾರ ಸಂಘಗಳಿವೆ. ಹೀಗಿದ್ದರೂ ಸೆಂಟ್‌ಪರ್ಸೆಂಟ್ ಎಂದು ಹೇಗೆ ಹೇಳುತ್ತೀರಿ ಎಂದು ಕೇಳಿದ್ದಾರೆ...

ಶ್ರೀ ಕೆ. ಎಚ್. ಪಾಟೀಲ್.—ನಾನು ಹಾಗೆ ಹೇಳಿದುದ್ದು ಅಲ್ಲ. ವಾಸ್ತವವಾಗಿ ನೋಡಿದರೆ ಒಂದು ಊರಿಗೆ ಇಬ್ಬರು ಮೂವರು ಹೊರಗಿನವರು ಬರುತ್ತಾರೆಯೋ ಹೊರತು ಎಲ್ಲರೂ ಮೆಂಬರುಗಳು ಆಗಿರುವುದಿಲ್ಲ. ನನ್ನ ಸ್ವಂತ ಊರನ್ನೇ ತೆಗೆದುಕೊಂಡರೆ ವಿಶ್ವ ಪ್ರಯತ್ನ ಮಾಡಿದರೂ ಪ್ರತಿಯೊಂದು ಫ್ಯಾಮಿಲಿಯನ್ನೂ ಇವುಗಳಲ್ಲಿ ಅಳವಡಿಸುವುದಕ್ಕೆ ಆಗಲಿಲ್ಲ. ನೂರಾರು ಫ್ಯಾಮಿಲಿಗಳು ಇನ್ನೂ ಹೊರಗೇ ಉಳಿದಿವೆ. ಪ್ರತಿಯೊಂದು ಹಳ್ಳಿಯಲ್ಲೂ, ಎಷ್ಟು ಗ್ರಾಮಪಂಚಾಯತಿಗಳು ಇವೆಯೋ, ಆ ಗ್ರಾಮಪಂಚಾಯತಿ ಏರಿಯಾದಲ್ಲಿ ಒಂದೇ ಸಹಕಾರಿ ಬ್ಯಾಂಕು ಇರಬೇಕು. ಅದನ್ನು ಮಾಡಿ ಎಂದು ನಾನು ಹೇಳುವುದು.

ಶ್ರೀ ಆರ್.ಎಲ್. ಜಾಲಪ್ಪ —ಈಗಾಗಲೇ ನಾನ್ ವಿಯಬಲ್ ಇನ್ಸ್ಟಿಟ್ಯೂಟ್ಸ್ ಎಂದು ಐಡೆಂಟಿಫೈ ಮಾಡುವುದಕ್ಕೆ ಆಯಿತು. ಪುನಃ ಛೈಫರ್‌ಕೇಟ್ ಮಾಡಿದರೆ ಏನೇನು ತೊಂದರೆ ಇದೆ ಎಂದು ನಾರ್ತ್ ಕೆನರಾ, ಸೌತ್‌ಕೆನರಾ, ಕೊಡಗು ಬಳ್ಳಾರಿಯಲ್ಲಿ ಎರಡು ಮತ್ತು ನಿಮ್ಮ ಜಿಲ್ಲೆಯಲ್ಲಿ ಎರಡು ಇನ್ಸ್ಟಿಟ್ಯೂಷನ್‌ಗಳನ್ನು ಛೈಫರ್‌ಕೇಟ್ ಮಾಡಿದ್ದೇವೆ. ಧಾರವಾಡ ಜಿಲ್ಲೆಯಲ್ಲೂ ಆರೀತಿ ಮಾಡಬೇಕಾಗುವುದು ಎಂದು ಕಾಣುತ್ತದೆ.

ಶ್ರೀ ಕೆ. ಎಚ್. ಪಾಟೀಲ್.—ಧಾರವಾಡ ಜಿಲ್ಲೆಯೊಳಗೆ ೮೦ ವರ್ಷಗಳಿಂದ ಉತ್ತಮ ರೀತಿಯಿಂದ ನಡೆದುಕೊಂಡು ಬಂದಂಥ ಸಹಕಾರ ಚಳುವಳಿ ಇದೆ. ಎಲ್ಲಿಯಾದರೂ ಕೆಟ್ಟದ್ದು ಇದ್ದರೆ ಹಿಡಿದು ಹಾಕಿರಿ. ಆದರೆ ಅದು ಬಿಟ್ಟು ಇರುವುದನ್ನು ಒಡೆದು ಹಾಕುವುದಕ್ಕೆ ನೋಡಿದರೆ ಸಹಕಾರಿಗಳೆಲ್ಲರೂ ಒಟ್ಟಿಗೆ ಸೇರಿ ಪ್ರತಿಕಾರ ಮಾಡಬೇಕಾಗುತ್ತದೆ. ಮತ್ತು ಕೋರ್ಟಿನಿಂದ ಏನು ಸಹಾಯ ಪಡೆಯ ಬಹುದೋ ಪಡೆಯಬೇಕಾಗುತ್ತದೆ. ಈ ಹವ್ಯಾಸಕ್ಕೆ ದಯವಿಟ್ಟು ತಾವು ಹೋಗಬೇಡಿ.

ಶ್ರೀ ಆರ್. ಎಲ್. ಜಾಲಪ್ಪ.—ತಾವು ಹೇಳಿದಿರಿ ಅಪೆಕ್ಸ್ ಬ್ಯಾಂಕ್‌ಗೆ ಅರ್ಧ ಪರ್ಸೆಂಟ್ ಏಕೆ ಬೇಕು ಎಂದು ಅವರು ಗೆಸ್ಟ್‌ಹೌಸ್ ಕಟ್ಟಿಕೊಳ್ಳುತ್ತಾರೆ. ಮಜಾ ಮಾಡುತ್ತಾರೆ ಎಂದು ಹೇಳಿದಿರಿ. ನಾನೂ ಕೂಡ ಮೊದಲು ನಿಮ್ಮ ಹಾಗೆ ಮಾತನಾಡುತ್ತಾ ಇದ್ದೆ. ನಾನು ಅಪೆಕ್ಸ್ ಬ್ಯಾಂಕ್ ಸದಸ್ಯನಾಗಿ ಎಂಟು ವರ್ಷ ಕೆಲಸ ಮಾಡಿದಮೇಲೆ ಅರ್ಧಪರ್ಸೆಂಟ್ ಏಕೆ ಬೇಕು ಎಂದು ತಿಳಿದುಕೊಂಡೆ. ನಾವು ನಬಾರ್ಡ್‌ನಿಂದ ಸಾಲ ಮಾಡಿರುವುದು ೬೪ ಕೋಟಿ ರೂಪಾಯಿಗಳು, ೭ ಪರ್ಸೆಂಟಿನ ಬಡ್ಡಿಯ ಹಾಗೆ. ನಮ್ಮದೇ ಹಣದಲ್ಲಿ ಸಾಲ ಕೊಟ್ಟಿರುವುದು ೧೫ ಕೋಟಿ. ಇದೇನು ಡಿಪಾಸಿಟ್ ತೆಗೆದು ಕೊಂಡಿದ್ದೇವೆ, ಅದರ ಕಾಸ್ಟ್ ಆಫ್ ಡಿಪಾಜಿಟ್ ೧೦.೫ ಪರ್ಸೆಂಟ್. ಸಹಕಾರ ಸಂಘಗಳಿಗೆ ಕೊಡು ತ್ತಿರುವುದು ೭ ಪರ್ಸೆಂಟ್ ಲೆವಿ. ಇದರಿಂದ ನಮಗೆ ನಷ್ಟವಾಗುತ್ತಿರುವುದು ೩.೪ ಪರ್ಸೆಂಟ್‌ನಷ್ಟು. ೬೪ ಕೋಟಿಗೆ ಅರ್ಧ ಪರ್ಸೆಂಟ್ ಹಣ ಬಂದರೆ ೩೨ ಲಕ್ಷ ಆಗುತ್ತದೆ. ಆದರೆ ನಾವು ೧೦.೫ ಪರ್ಸೆಂಟ್ ಮಾಡಿ ೭ ಪರ್ಸೆಂಟ್ ಕೊಡುತ್ತೇವೆ. ಇದರಿಂದ ಐದೂವರೆ ಲಕ್ಷ ರೂಪಾಯಿಗಳು ಅಪೆಕ್ಸ್ ಬ್ಯಾಂಕ್‌ಗೆ ನಷ್ಟ ಆಗುತ್ತದೆ. ಕೃಷಿ ಸಾಲದಿಂದ ಅಪೆಕ್ಸ್ ಬ್ಯಾಂಕ್‌ಗೆ ಯಾವ ಪ್ರಯೋಜನವೂ ಇಲ್ಲ. ನಮಗೆ ಇನ್ನೊಂದು ಕಷ್ಟ ಬಂದಿದೆ. ಅದೇನೆಂದರೆ ಈ ವರ್ಷ ನಬಾರ್ಡ್‌ನವರು ೬೪ ಕೋಟಿ ಸ್ಯಾಂಕ್ಷನ್ ಮಾಡಿದ್ದಾರೆ. ಆದರೆ ಅದನ್ನು ಉಪಯೋಗಿಸಿಕೊಳ್ಳಲಿಕ್ಕೆ ನಮಗೆ ಆಗುತ್ತಿಲ್ಲ. ಆದಕ್ಕೆ ಏನು ಯೋಚನೆ ಮಾಡುತ್ತಿದ್ದೇವೆ ಎಂದರೆ, ಎಕ್ಸಸ್ ಇರುವ ಹಣವನ್ನು ಬೇರೆ ಯಾವುದಾದರೂ ಇಂಡಸ್ಟ್ರೀಸ್ ನಲ್ಲಿ ತೊಡಗಿಸುವುದಕ್ಕೆ ಸಾಧ್ಯವೇ ಎಂದು ಯೋಚಿಸುವ ತೀರ್ಮಾನಕ್ಕೆ ಬಂದಿದ್ದೇವೆ. ಕೆಲವು ಸಲಹೆ ಗಳನ್ನು ಶ್ರೀಮಾನ್ ಕೋಳಿವಾಡ್ ಅವರು ಕೊಟ್ಟರು. ಮಹಾರಾಷ್ಟ್ರದಲ್ಲಿ 'They are not depending upon NCDC for everything' ಎಂದು ಹೇಳಿದರು. ಇದರ ಬಗ್ಗೆ ಏನಾದರೂ ಮಾಡುವುದಕ್ಕೆ ಸಾಧ್ಯವೇ ಎಂದು ಯೋಚನೆ ಮಾಡುತ್ತಿದ್ದೇನೆ ನಾಮಿನೇಷನ್ ಬಗ್ಗೆ ಈಗಾಗಲೇ ಹೇಳಿದ್ದೇನೆ. ಈ ಕಾಯಿದೆ ಬಗ್ಗೆ ಹೇಳಬೇಕೆಂದರೆ, ಸ್ವಾಮಿ ನೀವು ೮೧ರ ಸೆಪ್ಟೆಂಬರ್‌ನಲ್ಲೋ ಅಕ್ಟೋಬರ್‌ನಲ್ಲೋ ತಮ್ಮ ರಿಪೋರ್ಟ್‌ನ್ನು ಕೊಟ್ಟಿರಿ. ಸುಮಾರು ಹದಿನಾರು ತಿಂಗಳು ಎಲ್ಲಿತ್ತು ಸ್ವಾಮಿ ಅದು ? ನಿಮ್ಮದೇ ಸರ್ಕಾರ ಇತ್ತು.

ಶ್ರೀ ಕೆ. ಎಚ್. ಪಾಟೀಲ್.—ಅನೇಕ ಸಂದರ್ಭದೊಳಗೆ ನಮ್ಮ ಸರ್ಕಾರದವರೂ ತಪ್ಪು ಮಾಡಿ ದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ನೀವು ಏಕೆ ತಪ್ಪು ಮಾಡುತ್ತೀರಿ ? ಒಳ್ಳೆ ಕೆಲಸ ಮಾಡಿ ಕೀರ್ತಿ ಪಡೆಯಿರಿ,

ಶ್ರೀ ಆರ್, ಎಲ್. ಜಾಲಪ್ಪ.—ತಮ್ಮ ಗಮನಕ್ಕೆ ಒಂದು ವಿಷಯ ತರುವುದಕ್ಕೆ ಇಚ್ಛೆಪಡುತ್ತೇನೆ. ಸೆಕ್ಷನ್ ೧೨(೫–೬) ಎಂದು ನೀವು ಏನು ಮಾಡಿದ್ದೀರಿ, ಅದನ್ನು ಸೆಕ್ಷನ್ ೧೨ (೧) ಎಂದು ನಾವು ಮಾಡಿದ್ದೇವೆ. ಸೆಕ್ಷನ್ ೨೮ನ್ನು ಮತ್ತು ಸೆಕ್ಷನ್ ೩೦ನ್ನು ಉಪಯೋಗಿಸಿಕೊಂಡಿದ್ದೇನೆ.

ಶ್ರೀ ಕೆ. ಎಚ್. ಪಾಟೀಲ್.—ಕನ್ಯಾ ಚಲೋ ಇದ್ದಾಳೆ. ಆದರೆ ಮೂಗು ಒಂದು ಸರಿ ಇಲ್ಲಾ ಅಂಪ ಹಾಗಾಯ್ತು. ಅದನ್ನು ಪೂರಾ ಉಪಯೋಗ ಮಾಡಿಕೊಂಡಿದ್ದರೆ ಸರಿ ಎನ್ನಬಹುದಿತ್ತು. ಆ ಸಮಿತಿಗೆ ನಜೀರಸಾಬ್‌ರು ಮೆಂಬರ್ ಆಗಿದ್ದರು. ವಿರೋಧಪಕ್ಷದವರಿಗೂ ಹೆಚ್ಚು ಪ್ರಾಮುಖ್ಯತೆ ಕೊಟ್ಟು ಸಮಿತಿ ಮಾಡಿದ್ದುದು, ಅದು ಕೊಟ್ಟ ರಿಪೋರ್ಟ್ ಇದೆ ಎಂದು ಏನು ಹೇಳುತ್ತಿದ್ದೀರಿ, ಅದು ಬಿಟ್ಟು ಪುನರಾಲೋಚನೆ ಮಾಡಿ ಕನ್ಸಾಲಿಡೇಟೆಟ್ ಆ್ಯಕ್ಟ್ ತರುತ್ತೇವೆ ಎಂದು ಹೇಳಿದರೆ ನಮಗೆ ಸಂತೋಷವಾಗುತ್ತದೆ.

ಶ್ರೀ ಆರ್. ಎಲ್. ಜಾಲಪ್ಪ.— ಕನ್ಯೆಯ ಮೂಗು ಸ್ವಲ್ಪ ಮೊಂಡಾಗಿದ್ದರೆ ಏನು, ಗುಣ ಚೆನ್ನಾಗಿದ್ದರೆ ಸಾಕು, ಅದನ್ನು ಅಳವಡಿಸಿದ್ದೇನೆ ಅಷ್ಟೇ.

ಶ್ರೀ ಜೆ. ಹೆಚ್. ಪಟೇಲ್.—ಮೂಗು ಮೊಂಡಾಗಿದ್ದರೂ ಅದರಲ್ಲಿ ಸೌಂದರ್ಯ ಕಂಡಿದ್ದಾರಲ್ಲ.

ಶ್ರೀ ಆರ್. ಎಲ್. ಜಾಲಪ್ಪ.—ಕ್ಲಿಯೋಪಾತ್ರಾಳ ಮೂಗು ಸ್ವಲ್ಪ ಮೊಂಡಾಗಿತ್ತಂತೆ. ಇರಲಿ. ನೂಲಿನ ಗಿರಣಿಗಳ ಬಗ್ಗೆ ತಾವು ಏನು ಹೇಳಿದಿರಿ ಅದರ ಬಗ್ಗೆ ಈಗಾಗಲೇ ಜಾಯಿಂಟ್ ರಿಜಿಸ್ಟ್ರಾರ್ ಅವರಿಗೆ ಹೇಳಿದ್ದೇನೆ. ಈ ಗಿರಣಿಗಳಲ್ಲಿ ಹರಿಜನರು ಗಿರಿಜನರು ಹಿಂದುಳಿದವರು ಎಷ್ಟು ಜನ ಇದ್ದಾರೆ ತಿಳಿಸಬೇಕೆಂದು ಹೇಳಿದ್ದೇನೆ. ಮತ್ತು ಹುಬ್ಬಳ್ಳಿ ಜನತಾ ಬಜಾರ್ ನಮ್ಮ ಕಾಲದಲ್ಲಿ ಆಗಿರಲಿಲ್ಲ. ಅದು ೮೧ರಲ್ಲಿ ಲಿಕ್ವಿಡೇಟ್ ಆಗಿತ್ತು, ಆದರೂ ಏನು ವ್ಯವಹಾರ ಇದೆ, ಕೊಡಿ ಎಂದು ಕೇಳಿದ್ದೇನೆ.

ಶ್ರೀ ಪಂಪಾಪತಿ.- ಕೆಲಸ ಮಾಡುತ್ತಿರುವ ಮಿಲ್‌ನಲ್ಲಿ ನೋಡುವುದಕ್ಕೆ ಹೇಳಿದ್ದೀರೋ ಇಲ್ಲ ಬಂದ್ ಆಗಿರೋ ಮಿಲ್‌ನಲ್ಲಿ ನೋಡುವುದಕ್ಕೆ ಹೇಳಿದ್ದೀರೋ ?

ಶ್ರೀ ಆರ್. ಎಲ್. ಜಾಲಪ್ಪ.—ಎಲ್ಲದರಲ್ಲೂ ನೋಡಬೇಕು.

ಶ್ರೀ ಕೆ ಹೆಚ್. ಪಾಟೀಲ್.—ಹೊಸದಾಗಿರುವ ಮಿಲ್‌ನಲ್ಲಿ ತಾವು ಹೊಸದಾಗಿ ಈಗ ಏನು ಅಮೌಂಟ್ ಕೊಟ್ಟಿದ್ದೀರಿ. ಅದಕ್ಕೆ ಎನ್‌ಸಿಡಿಸಿಯವರು ಒಂದು ಕಂಡೀಷನ್ ಹಾಕಿದ್ದಾರೆ. ಮಿಲ್‌ಗಳು ಈಗ ಇರುವುದು ಮೂರು, ರಾಣೆಬೆನ್ನೂರು, ಲಕ್ಷ್ಮೇಶ್ವರಕ್ಕೆ ತಾವು ಕೊಟ್ಟಿದ್ದು, ಉಳಿದಿದ್ದಕ್ಕೆ ಕೊಟ್ಟಿಲ್ಲ. ಎಕ್ಸಾಮಿನ್ ಮಾಡಿಸಿ. ನಮ್ಮ ತಪ್ಪಿದ್ದರೆ ನಾವು ತಿದ್ದಿಕೊಳ್ಳುತ್ತೇವೆ.

ಶ್ರೀ ಆರ್. ಎಲ್. ಜಾಲಪ್ಪ.—ಗದಗ ಬೆಟಗೇರಿದು ಹೇಳಿದಿರಿ. ಅದಕ್ಕೂ ನಮಗೂ ಸಂಬಂಧವಿಲ್ಲ. ಆಗ ೭೯ರಲ್ಲಿ ಸೂಪರ್‌ಸೀಡಾಗಿ ೮೧ರಲ್ಲಿ ರೀಕನ್‌ಸ್ಟಿಟ್ಯೂಟ್ ಆಗಿದೆ. ಸಣ್ಣ ಪುಟ್ಟ ಮಿಸ್ ಅಪ್ರೋಪ್ರಿಯೇಷನ್ ಇದೆಯೆಂದು ಕೇಳಿದ್ದೇನೆ.

ಶ್ರೀ ಕೆ. ಎಚ್. ಪಾಟೀಲ್.—ನಾನು ಆಗಲೇ ನಮ್ಮ ಕರ್ನಾಟಕದ ದುರ್ದೈವ ಎಂದು ಹೇಳಿದೆನೇ ಹೊರತು ಅದು ಜಾಲಪ್ಪನವರದು ಎಂದು ಹೇಳಲಿಲ್ಲ. ನಾವೆಲ್ಲರೂ ಕೂಡಿ ಈ ಮೂವ್‌ಮೆಂಟನ್ನು ಬೆಳೆಸಬೇಕೆಂದು ಹೇಳಿದೆ.

ಶ್ರೀ ಆರ್. ಎಲ್. ಜಾಲಪ್ಪ.—ಆಮೇಲೆ ಒಂದು ಹೇಳಿದಿರಿ. ಈ ಡಿಸ್ಟ್ರಿಕ್ಟ್ ಬ್ಯಾಂಕ್ ಬ್ರಾಂಚಸ್‌ಗಳನ್ನು ಯದ್ವಾತದ್ವಾ ಬೆಳೆಸಿಕೊಂಡು ಬಂದಿರಿ ಅವರು ಸುಮ್ಮನೆ ಮಜಾ ಮಾಡಿಕೊಂಡು ಹರಟೆ ಹೊಡೆದುಕೊಂಡು ಇದ್ದಾರೆ ಎಂದು, ಧಾರವಾಡ್ ಬ್ಯಾಂಕಿನಿಂದ ನಿನ್ನೆ ತಾನೇ ರಿಪೋರ್ಟ್ ಬಂದಿದೆ. ಆ ಪ್ರಕಾರ ೧೨ ಬ್ಯಾಂಕ್‌ಗಳು ಲುಕ್ಸಾನಿನಲ್ಲಿ ನಡೆಯುತ್ತಿವೆ. ಈಗಾಗಲೇ ಇನ್ನೂ ಎಷ್ಟು ಇವೆಯೋ ಗೊತ್ತಿಲ್ಲ. ನಾನೂ ಕೂಡ ಧಾರವಾಡ್ ಬ್ಯಾಂಕ್‌ನಲ್ಲಿ ಸೂಪರ್‌ಸೀಡ್ ಆದಮೇಲೆ ಆಕ್ಟೀವ್ ಆಗಿ ಹೆಚ್ಚು ಕೆಲಸ ಮಾಡಲಿಲ್ಲವೆಂದು ಒಪ್ಪಿಕೊಳ್ಳುತ್ತೇನೆ. ಅದನ್ನು ಮಾಡಬೇಕಾಗಿತ್ತು. ಸೆಟ್ ರೈಟ್ ಮಾಡುವುದಕ್ಕೆ ಏನು ಮಾಡಬೇಕೋ ಅದನ್ನು ಮಾಡುತ್ತೇನೆ,

ಸನ್ಮಾನ್ಯ ಕೆಂಪೀರೇಗೌಡರು ಅಧಿಕಾರಿಗಳಿಗೆ ಸಾಕಷ್ಟು ಅಧಿಕಾರ ಬೇಕೆಂದು ಹೇಳಿ ಡೀಸೆಂಟ್ರಲೈಜೇಷನ್ ಆಫ್ ಪವರ್ಸ್ ಎಂದು ಕೇಳಿದರು. ಈಗಾಗಲೇ ಸ್ವಲ್ಪ ಅಧಿಕಾರಗಳನ್ನು ಡೀಸೆಂಟ್ರಲೈಸ್ ಮಾಡಿದ್ದೇವೆ. ಆದರೂ ಇನ್ನೂ ಸ್ವಲ್ಪ ಅವರಿಗೆ ಅಧಿಕಾರ ಕೇಳಿದರೆ ನಾವು ಕೊಡುವುದಕ್ಕೆ ಸಿದ್ಧವಿದ್ದೇವೆ. ತಾವು ಹೇಳಿದ ಹಾಗೆ ಹಳೆಯ ಮೈಸೂರಿನಲ್ಲಿ ವ್ಯವಸ್ಥೆ ಸರಿಯಾಗಿಲ್ಲ, ಟಿ.ಎ.ಪಿ.ಸಿ.ಎಂ.ಎಸ್.ಗಳು ಕೂಡ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಅವುಗಳನ್ನು ರಿವೈಂಡ್ ಮಾಡಲಿಕ್ಕೆ ಸಾಧ್ಯವೇ ಎಂದು ನೋಡುತ್ತಿದ್ದೇನೆ. ತರಬೇತಿ ಇಲ್ಲದ ನೌಕರರನ್ನು ನೇಮಕ ಮಾಡಲಾಗುತ್ತಿದೆ ಎಂದು ಒಂದನ್ನು ಮಾತ್ರ ನಾನು ಒಪ್ಪಿಕೊಳ್ಳುತ್ತೇನೆ. ಈಗ ಏನು ನಡೆಯುತ್ತಿದೆ ಎಂದರೆ ಬಟ್ಟೆ ಚೆನ್ನಾಗಿ ಹಾಕಿರುವವನಿಗೆ ಸ್ಪಿನ್ನಿಂಗ್ ಮಿಲ್‌ಗಳಿಗೆ ಎಂ.ಡಿ ಆಗಿ ಕಳಿಸುವುದು, ಸಕ್ಕರೆ ತಿನ್ನುವುದು ಗೊತ್ತಿರುವವನಿಗೆ ಶುಗರ್ ಫ್ಯಾಕ್ಟರಿಗೆ ಎಂ.ಡಿ. ಮಾಡಿ ಕಳಿಸುವುದು, ಸಿಗರೇಟ್ ಸೇದೋಕೆ ಬರೋ ಅಧಿಕಾರಿಯನ್ನು ಕಸ್ಟಮರ್ಸ್‌ಗೆ ಕಳಿಸುವುದು ಇವೆಲ್ಲ ಮಾಡುತ್ತಿದ್ದೇವೆ. ನಮ್ಮಲ್ಲಿ ಕೇಡರ್ ಬೇಸಡ್ ಆಫಿಶಿಯಲ್ಸ್ ಇಲ್ಲ. ಅದಕ್ಕೆ ವ್ಯವಸ್ಥೆ ಮಾಡಬೇಕಾದದು ಬಹಳ ಮುಖ್ಯ ಅದರ ಕಡೆಗೆ ಗಮನಕೊಡುತ್ತೇನೆಂದು ಭರವಸೆ ಕೊಡುತ್ತೇನೆ. ಮಾರ್ಕೆಟಿಂಗ್ ಡಿಪಾರ್ಟ್‌ಮೆಂಟ್ ಬಗ್ಗೆ ಆಡಿಟ್ ಬಗ್ಗೆ ಈಗಾಗಲೇ ಏನು ಹೇಳಿದ್ದಾರೆ, ಒಂದು ಒಳ್ಳೆಯ ವಿಚಾರ ಹೇಳಿದ್ದಾರೆ. ಮಾರ್ಕೆಟ್ ಫೀ ಹೇಗೆ ವಸೂಲಾಗಿದೆ ಎಂದು ತಮ್ಮ ಗಮನಕ್ಕೆ ತರುತ್ತೇನೆ. ೧೯೮೦–೮೧ರಲ್ಲಿ ೮.೬೦ ಲಕ್ಷ ೮೧–೮೨ರಲ್ಲಿ ೭.೮೩ ಕೋಟಿ ೮೨–೮೩ರಲ್ಲಿ ೧೩.೨ ಕೋಟಿ ವಸೂಲಾಯಿತು. ೮೩–೮೪ರಲ್ಲಿ ೧೭.೭೯ ಕೋಟಿ ರೂಪಾಯಿಗಳು. ಇದೆಲ್ಲಾ ನಾವು ಏನು ೨ ಪರ್ಸೆಂಟಿನಂತೆ ಮಾರ್ಕೆಟ್ ಫೀ ವಸೂಲು ಮಾಡುತ್ತಿದ್ದೇವೆಯೋ ಅದರಿಂದ ಅಷ್ಟು ವಸೂಲಾಗಿತ್ತು. ೮೪–೮೫ರಲ್ಲಿ

ಕೇವಲ ೧ ಪರ್ಸೆಂಟ್ ಮಾತ್ರ ಹಣ ವಸೂಲಾಗಿರುವುದು ಒಟ್ಟು ೧೩ ಕೋಟಿ ರೂಪಾಯಿಗಳು ಇದರ ಜೊತೆಗೆ ಎಷ್ಟೊಂದು ಕೆಲಸಕಾರ್ಯಗಳು ಮಾರ್ಕೆಟಿಂಗ್ ಡಿಪಾರ್ಟ್‌ಮೆಂಟ್‌ನಲ್ಲಿ ನಡೆಯುತ್ತಿದೆ ಎಂದರೆ ಹಿಂದೆ ಹನ್ನೆರಡು ಕೋಟಿ ರೂಪಾಯಿಗಳ ಸಾಲ ಮಾಡಿ ವರ್ಲ್ಡ್ ಬ್ಯಾಂಕ್‌ನಿಂದ ಹಣ ಪಡೆದು ನಾವು ಮಾರ್ಕೆಟ್ ಯಾರ್ಡ್ ಇಂಪ್ರೂವ್ ಮಾಡಿದೆವು. ಈಚೆಗೆ ೮೨-೮೩, ೮೩-೮೪, ೮೪-೮೫ರಲ್ಲಿ ನಮಗೆ ಏನೊಂದು ಬಂಡವಾಳ ೧೫ ಕೋಟಿ ೮೭ ಲಕ್ಷ ಇದೆ. ಇದರಲ್ಲಿ ಈಗ ಎಲ್ಲಾ ಮಾರ್ಕೆಟ್ ಯಾರ್ಡ್‌ಗಳಲ್ಲೂ ನಡೆಯುತ್ತಿದೆ. ಇದರ ಜೊತೆಗೆ ನಾವು ಕೆ.ಹೆಚ್. ಪಾಟೀಲರು, ಗುರುಪಾದಪ್ಪ ಮುಂತಾದವರು ಮಾತ ನಾಡಿದ್ದಾರೆ. ಈ ಮಾರ್ಕೆಟಿಂಗ್ ಬಗ್ಗೆ ರಶೀತಿ ಮುಂದುಗಡೆ ಒಂದು ಬರೆದುಕೊಟ್ಟರೆ ಹಿಂದುಗಡೆ ಒಂದು ಬರೆದುಕೊಡುತ್ತಾರೆ. ಇದು ಶೇಕಡ ೬೦ರಷ್ಟು ನಿಜ. ಇದರಲ್ಲಿ ಮುಚ್ಚುಮರೆ ಇಲ್ಲ, ಆದಕ್ಕಾಗಿ ಕೆಲವು ಬದಲಾವಣೆಗಳನ್ನು ಮಂಡಿಸುತ್ತಿದ್ದೇವೆ. ಅದು ಈಗಾಗಲೇ ಲಾ ಡಿಪಾರ್ಟ್‌ಮೆಂಟ್‌ಗೆ ಹೋಗಿದೆ. ಅದರಲ್ಲಿ ಅದರಲ್ಲಿ ಬಹಳ ಮುಖ್ಯವಾದ ಒಂದು ಒಂದು ಕ್ರಾಂತಿಕಾರಕವಾದ ಬದಲಾವಣೆ ಏನೆಂದರೆ ಮೊದಲಿಗೆ ಇದಕ್ಕೆ ತಮ್ಮ ಸಂಪೂರ್ಣ ಸಹಕಾರ ಬೇಕಾಗಿದೆ. ಇವೊತ್ತು ವ್ಯವಸಾಯಗಾರ ಮಾರುಕಟ್ಟೆಗೆ ತನ್ನ ಮಾಲನ್ನು ಒಯ್ದಾಗ ಕಮಿಷನ್ ಏಜೆಂಟ್ ಅದನ್ನು ಮಾರಿದಾಗ ಅವನು ವ್ಯವಸಾಯಗಾರನ ಹತ್ತಿರ ೨ ಪರ್ಸೆಂಟ್ ಕಮಿಷನ್ ತೆಗೆದುಕೊಳ್ಳಬೇಕೆಂದು ಕಾನೂನು ಇದೆ. ಆದರೆ ಕೆಲವರು ಈಗ ೬ ಪರ್ಸೆಂಟ್ ೮ ಪರ್ಸೆಂಟ್ ತೆಗದುಕೊಳ್ಳುತ್ತಿದ್ದಾರೆ ಅಲ್ಲದೆ ಇವರು ಹೋದಾಗ ಅವರು ಸಿಗುವುದಿಲ್ಲ. ಇನ್ನು ಮೇಲೆ ತಿದ್ದುಪಡಿಯ ಪ್ರಕಾರ ರೈತ ಕಮಿಷನ್ ಕೊಡಬೇಕಾದ್ದಿಲ್ಲ. ಏಜೆಂಟ್ ಪರ್ಚೆಸರ್‌ನಿಂದ ವಸೂಲು ಮಾಡಿಕೊಳ್ಳಬಹುದು. ಯಾರು ಮಾಲನ್ನು ಕೊಂಡುಕೊಳ್ಳುತ್ತಾರೋ ಅವರಿಂದ ಎರಡು ಪರ್ಸೆಂಟ್ ಕಮೀಷನ್ ತೆಗೆದುಕೊಳ್ಳಬೇಕು. ರೈತನಿಂದ ಒಂದು ಕಾಸೂ ತೆಗೆದುಕೊಳ್ಳಬೇಕಾಗಿಲ್ಲ. ಇದರ ಜೊತೆಗೆ ಇನ್ನು ಮೇಲೆ ಈ ಮಾರ್ಕೆಟ್ ಫೀಯನ್ನು ಯಾರು ಕದಿಯುತ್ತಾರೋ ಅವರು ಸಿಕ್ಕಿಹಾಕಿಕೊಂಡಾಗ ಅವರ ಮಾಲನ್ನು ಲಾರಿಗಳನ್ನು ಮುಟ್ಟುಗೋಲು ಹಾಕಿಕೊಳ್ಳತಕ್ಕಂಥ ತಿದ್ದುಪಡಿ ತರುತ್ತೇವೆ. ಜೊತೆಯಲ್ಲಿ ವಿಜಿಲೆನ್ಸ್ ಸೆಲ್‌ಗಳನ್ನು ಜಿಲ್ಲೆಗೊಂದರಂತೆ ಮಾಡುತ್ತಿದ್ದೇವೆ. ಇದನ್ನು ಕಂಟ್ರೋಲ್ ಮಾಡಲಿಕ್ಕೆ ಚೆಕ್‌ಪೋಸ್ಟ್‌ಗಳನ್ನೂ ಕೂಡಹಾಕುತ್ತೇವೆ ಮತ್ತು ಮಾರ್ಕೆಟಿಂಗ್ ಅಧಿಕಾರಿಗಳಿಗೆ ಹೆಚ್ಚಿನ ಪವರ್ಸ್ ಕೊಡಬೇಕೆಂದು ಮಾಡಿದ್ದೇವೆ.

ಮಾರ್ಕೆಟಿಂಗ್ ಕಮಿಟಿಯ ಚೇರ್ಮನ್ ಏನಿದ್ದಾರೆ ಅವರಿಗೆ ೨೫೦ ರೂಪಾಯಿಗಳ ಗೌರವಧನ ಇದೆ. ಅದನ್ನು ಜಾಸ್ತಿ ಮಾಡಬೇಕೆಂದು ಯೋಚನೆ ಮಾಡಿದ್ದೇವೆ. ಮಾರ್ಕೆಟಿಂಗ್ ಬೋರ್ಡ್ ಕೆಲಸ ಮಾಡುತ್ತಿರಬೇಕಾದರೆ ಅದು ಕಾರ್ಯಕ್ರಮಗಳನ್ನು ಕೈಗೊಳ್ಳುವುದಕ್ಕೆ ಪೂರ್ತಿ ಇನ್‌ವಾಲ್ವ್‌ಮೆಂಟ್ ಆಗಬೇಕೆಂದು ಅಳವಡಿಸುತ್ತಿದ್ದೇವೆ.

ಇದರ ಜೊತೆಗೆ ಮಾರ್ಕೆಟಿಂಗ್ ಸೆಲ್‌ನಲ್ಲಿ ಇಂಜಿನಿಯರಿಂಗ್ ಸೆಲ್ ಏನಿದೆ. ಅದನ್ನು ಕೂಡ ಮಾರ್ಕೆಟಿಂಗ್ ಬೋರ್ಡ್ ಕೆಳಗಡೆಯೇ ತರಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ. ನಾನು ಕಳೆದ ಸಭೆಯಲ್ಲಿ ಹೇಳಿದ ಹಾಗೆ ಈ ಹಣ್ಣು, ತರಕಾರಿಗಳನ್ನು ನಾವು ರೆಗ್ಯುಲೇಟ್ ಮಾಡಬೇಕೆಂಬ ಬಗೆ ಈಗಾಗಲೇ ಮೈಸೂರು ಮಾರ್ಕೆಟ್‌ನಲ್ಲಿ ರೆಗ್ಯುಲೇಟ್ ಮಾಡಿದ್ದೇವೆ. ಬೆಂಗಳೂರಿನಲ್ಲಿ ಈ ವರ್ಷ ಪೂರ್ಣವಾಗಿ ರೆಗ್ಯುಲೇಟ್ ಮಾಡುವ ಯೋಚನೆ ಇದೆ. ಬಿಡಿಎ ಕೂಡ ಇದಕ್ಕೆ ಸೈಟ್ ಕೊಟ್ಟು ಸಹಕರಿಸಬೇಕೆಂದು ಕೇಳಿದ್ದೇವೆ. ಈ ಸಂದರ್ಭದಲ್ಲಿ ನಾನು ಹೇಳಬೇಕಾದರೆ ಬೆಂಗಳೂರಿನಲ್ಲಿ ಹಣ್ಣು ಮತ್ತು ತರಕಾರಿಗಳ ಸೊಸೈಟಿ ಏನಿದೆ. ಅದು ಕಳೆದ ವರ್ಷ ವಹಿವಾಟು ೩ ಕೋಟಿ ರೂಪಾಯಿಗಳು ಅವರಿಗೆ ಮೂರು ನಾಲ್ಕು ಲಾರಿಗಳನ್ನು ಒದಗಿಸಿ ಸುತ್ತಮುತ್ತಲಿಂದ ತರಕಾರಿಗಳನ್ನು ದೊಡ್ಡಬಳ್ಳಾಪುರ ದೇವನಹಳ್ಳಿ ಆನೇಕಲ್ ನೆಲಮಂಗಲಗಳಂತಹ ಜಾಗಗಳಿಗೆ ಹೋಗಿ ರೈತನಿಂದ ನೇರವಾಗಿ ಕೊಂಡು ತಂದು ಇಲ್ಲಿ ಮಾರ್ಕೆಟ್ ಮಾಡತಕ್ಕಂಥ ವ್ಯವಸ್ಥೆ ಮಾಡುತ್ತಿದ್ದೇವೆ, ಕಾರಣ ಬಹಳಷ್ಟು ಸಲ ಕೂಲಿಯವರ ಸಮಸ್ಯೆ ಮತ್ತು ಬಸ್‌ಗಳಲ್ಲಿ ಸಾಗಾಣಿಕೆ ಸಮಸ್ಯೆ ಇರುವುದರಿಂದ ಈ ಪರ್ಯಾಯ ವ್ಯವಸ್ಥೆ ಮಾಡುತ್ತಿದ್ದೇವೆ.

ಮತ್ತು ಕಳೆದ ವರ್ಷ ನಾನು ಹೇಳಿದ್ದೆ ಈ ಮಾರ್ಕೆಟ್ ಕಮಿಟಿ ತನ್ನ ಆಡಳಿತ ವ್ಯಾಪ್ತಿಯಲ್ಲಿ ಬರುವ ಸಂತೆಗಳನ್ನು ಅಭಿವೃದ್ಧಿಗೊಳಿಸಬೇಕೆಂದು. ಈ ವರ್ಷ ೧೧ ಸಂತೆಗಳನ್ನು ನಾವು ಅಭಿವೃದ್ಧಿಗೊಳಿಸಿದ್ದೇವೆ. ಅಲ್ಲದೆ ಇನ್ನೂ ೨೫ ಸಂತೆಗಳನ್ನು ಅಭಿವೃದ್ಧಿಗೊಳಿಸುತ್ತಿದ್ದೇವೆ. ಮತ್ತು ಈ ಮೊದಲು ಕಮಿಟಿ ಕೆಲಸ ಮಾಡುತ್ತಿರುವ ನೌಕರರನ್ನು ಸರ್ಕಾರಿ ನೌಕರರೆಂದು ನೇಮಕ ಮಾಡಿದ್ದೇವೆ. ಈಗಾಗಲೇ

ಎರಡು ತಿಂಗಳಾಗಿದೆ. ಸಿ. ಅಂಡ್ ಆರ್ ರೂಲ್ಸ್ ಆಗಿರಲಿಲ್ಲ, ಅದನ್ನು ಈ ವರ್ಷ ಫೈನಲೈಸ್ ಮಾಡುತ್ತಿದ್ದೇವೆ. ಈಗಾಗಲೇ ಗದಗ ಸಿರಸಿಯಲ್ಲಿ ವಾಹನಗಳನ್ನು ಕೊಟ್ಟು ರೈತರಿಗೆ ಸಾಮಾನುಗಳನ್ನು ಅಗ್ಗವಾದ ಬೆಲೆಯಲ್ಲಿ ಸಾಗಾಣಿಕೆ ಮಾಡಲು ವ್ಯವಸ್ಥೆ ಮಾಡುತ್ತಿದ್ದೇವೆ,

ಶ್ರೀ ಕೆ. ಹೆಚ್. ಪಾಟೀಲ್.— ಅವರು ಏನು ಮಾಡುತ್ತಾರೆ ಎಂದರೆ, ಗದಗ ಎ.ಪಿ.ಎಂ.ಸಿ. ಆಗಲೀ, ಬೇರೆ ಎ.ಪಿ ಎಂ.ಸಿ.ಯಾಗಲೀ ರೆಗ್ಯುಲೇಟೆಡ್ ಮಾರ್ಕೆಟ್‌ಗಳಿಗೆ ಮಾಲು ಬರುವಾಗ ದಲ್ಲಾಳಿಗಳು ಸೇರಿ ಜಾರಿ ಮಾಡುತ್ತಾರೆ.

12-00 Noon

In an institution where it is not developed to market through co operative your help will give an incentive and turn that will help the farme/s to sell their goods.

ಶ್ರೀ ಆರ್. ಎಲ್. ಜಾಲಪ್ಪ.— ಈ ವರ್ಷ ಕೂಡ ನಾಲ್ಕೈದು ವಾಹನಗಳನ್ನು ಕೊಡಬೇಕೆಂದು ಯೋಚನೆ ಮಾಡಿದ್ದೇವೆ, ಇದರ ಜೊತೆಗೆ, ರಾಯಚೂರು ಮತ್ತು ಗದಗ್ ಮಾರ್ಕೆಟ್ಟುಗಳಲ್ಲಿ ಕಂಪ್ಯೂಟರೈಸ್ ಮಾಡಿದ್ದೇವೆ. ಮೊದಲು ಫೈನ್‌ಲೈಸ್ ಮಾಡಬೇಕಾದರೆ, ಗಂಟೆಗಟ್ಟಲೆ ಕಾಯಬೇಕಾಗಿತ್ತು. ಅದನ್ನು ತಪ್ಪಿಸುವುದಕ್ಕಾಗಿ ಕಂಪ್ಯೂಟರೈಸ್ ವ್ಯವಸ್ಥೆಯನ್ನು ಮಾಡಿದ್ದೇವೆ. ಇನ್ನೂ ಕೆಲವು ಜಾಗಗಳಲ್ಲಿ ಕಂಪ್ಯೂಟರೈಸ್ ವ್ಯವಸ್ಥೆಯನ್ನು ಮಾಡತಕ್ಕಂಥ ಪ್ರಯತ್ನ ಮತ್ತು ಸ್ಕೀಂಗಳನ್ನು ಹಾಕಿಕೊಂಡಿದ್ದೇವೆ, ಮಾನ್ಯ ಸದಸ್ಯರಾದ ಶ್ರೀ ಯಡಿಯೂರಪ್ಪನವರು ರೈತರು ನಿಜವಾಗಿಯೂ ಸಾಲ ತೆಗೆದಿದ್ದಾರೆಯೋ, ಇಲ್ಲವೇ ಎಂಬುದನ್ನು ನೋಡಬೇಕೆಂದು ಅಣ್ಣಿಗೇರಿ ಸಹಕಾರಿ ಸಂಘದ ಉದಾಹರಣೆಯನ್ನು ಕೊಟ್ಟಿದ್ದಾರೆ ಈಗಾಗಲೇ ಅಧಿಕಾರಿಗಳಿಗೆ ಈ ವಿಚಾರದಲ್ಲಿ ಸೂಚನೆ ಕೊಟ್ಟಿದ್ದೇನೆ. ಈಗ ಕೆಲಸ ಜಾಸ್ತಿ ಇರುವುದಿಲ್ಲ. ಪ್ರತಿಯೊಂದು ಮನೆಗೂ ಹೋಗಿ ಎಷ್ಟು ಸಾಲ ತೆಗೆದಿದ್ದಾನೆ. ಅವನಿಗೆ ಜಮೀನು ಎಷ್ಟಿದೆ. ಅವನು ಕೊಡುವುದಕ್ಕೆ ಶಕ್ತಿಯಿದೆಯೇ ಇಲ್ಲವೇ, ಅವನು ಡಿಫಲ್ಟರ್ ಏತಕ್ಕಾದ? ಎಲ್ಲವನ್ನೂ ನೋಡಿ, ಸಿಗ್ನೇಚರ್ ತೆಗೆದುಕೊಂಡು ಬರಬೇಕೆಂದು ಇನ್‌ಸ್ಟ್ರಕ್ಷನ್ ಕೊಟ್ಟಿದ್ದೇನೆ ನಮ್ಮ ಉದ್ದೇಶ ಇಷ್ಟೇ. ಬೇನಾಮಿ ಸಾಲ ಎಷ್ಟಿದೆ ಎಂಬುದನ್ನು ಕಂಡುಹಿಡಿಯಬೇಕಾಗಿದೆ. ಸಾಲ ತೆಗೆದುಕೊಂಡು ನಿಜವಾಗಿಯೂ ವಾಪಸ್ಸು ಕೊಡದೇ ಇರತಕ್ಕಂಥ ರೈತರಿಗೆ ಅವರ ಸಾಲವನ್ನು ಐದು ಅಥವಾ ಏಳು ವರ್ಷಗಳ ಕಂತುಗಳಾಗಿ ಪರಿವರ್ತಿಸಿ, ಮತ್ತೆ ಸಾಲ ಕೊಡುವುದು ಸಾಧ್ಯವೇ ಎಂಬುದನ್ನು ಕೂಡ ಯೋಚನೆ ಮಾಡುತ್ತಿದ್ದೇವೆ. ಅದು ಇನ್ನು ಕೆಲವು ತಿಂಗಳೊಳಗಾಗಿ ಬರಬಹುದೆಂದು ಅಂದುಕೊಂಡಿದ್ದೇನೆ. ಮಾನ್ಯ ಸದಸ್ಯರಾದ ಶ್ರೀ ಕೋಳಿವಾಡ್‌ರವರು ಸ್ಪಿನ್ನಿಂಗ್ ಮಿಲ್‌ಗಳನ್ನು ಎನ್.ಸಿ ಡಿಸಿಯವರು ಹೆಚ್ಚಿಗೆ ಮಹಾರಾಷ್ಟ್ರಕ್ಕೆ ಕೊಟ್ಟಿದ್ದಾರೆಂದು ಹೇಳಿದರು. ನಾವು ಬರುವಷ್ಟರಲ್ಲೆ ಓನೇ ಯೋಜನೆಯಲ್ಲಿ ಇದ್ದಂತಹ ಹಣವನ್ನು ಪೂರ್ಣವಾಗಿ ಖರ್ಚು ಮಾಡಿದರು. ನಾವು ಬಂದ ಮೇಲೆ ಸ್ಪಿನ್ನಿಂಗ್ ಮಿಲ್‌ಗೆ ಸಂಬಂಧಪಟ್ಟಂತಹ ಒತ್ತಡ ಜಾಸ್ತಿಯಾದ್ದರಿಂದ. ಎನ್.ಸಿ ಡಿ ಸಿ.ಯವರನ್ನು ಇದರ ಬಗ್ಗೆ ಪರಿಶೀಲನೆ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಂಡ ಮೇರೆಗೆ, ಅವರು ಇದರ ಬಗ್ಗೆ ಸೂಕ್ತ ಕ್ರಮ ತಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ ಅದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ.

ಶ್ರೀ ಕೆ.ಹೆಚ್. ಪಾಟೀಲ್.—ಮಹಾರಾಷ್ಟ್ರದೊಳಗೆ ಹ್ಯಾಂಡ್‌ಲೂಂ ಮತ್ತು ಪವರ್‌ಲೂಂಗಳನ್ನು ಇಲ್ಲೀಗಲ್ ಆಗಿ ಅಲೋ ಮಾಡುತ್ತಾರೆ. ನಮ್ಮಲ್ಲಿ ಹಾಗೆ ಮಾಡುವುದಿಲ್ಲ. ನಾವು ಬಹಳ ಮಡಿವಂತರಾಗುತ್ತೇವೆ. ನೀವು ಲಕ್ಷ್ಮೇಶ್ವರಕ್ಕಾಗಲೀ, ರಾಣೆಬೆನ್ನೂರಿಗಾಗಲೀ ಹಣ ಕೊಟ್ಟಿದ್ದೀರಿ. ಅದೇರೀತಿ ಬೇರೆಬೇರೆ ಕಡೆ ಹತ್ತು, ಹತ್ತು ಲಕ್ಷ ರೂಪಾಯಿಗಳನ್ನು ಬಿಲ್ಡಿಂಗ್ ಕಟ್ಟಲಿಕ್ಕೆ ಕೊಟ್ಟು ಕಮಿಟಿ ಮಾಡಿದರೆ, ಎನ್‌ಸಿಡಿಸಿಯವರು ಸಾಲವನ್ನು ಕೊಡುತ್ತಾರೆ. ನಾನು ಮೊನ್ನೆ ಬೂಟಾಸಿಂಗ್‌ರವರನ್ನು ಭೇಟಿ ಮಾಡಿದಾಗ, ಈ ವಿಷಯವನ್ನು ಹೇಳಿದ್ದೇನೆ. ಅವರೂ ನಿಮ್ಮ ಸರ್ಕಾರದವರು ಕಮಿಟಿ ಮಾಡಿಕೊಂಡು ಕಳಿಸಿ ಕೊಟ್ಟರೆ, ಅಡ್ಡಿಯೇನಿಲ್ಲ, ನಾನು ಮಂಜೂರು ಮಾಡಿಕೊಡುತ್ತೇನೆಂದು ಹೇಳಿದ್ದಾರೆ.

ಶ್ರೀ ಆರ್.ಎಲ್. ಜಾಲಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಶ್ರೀ ಗುರು ಪಾದಪ್ಪನವರು ಅಪೆಕ್ಸ್ ಬ್ಯಾಂಕ್‌ಗಳಲ್ಲಿ ಐಎಸ್ ಅಧಿಕಾರಿಗಳನ್ನು ಹಾಕುವುದು, ಸರಿಯಾದುದಲ್ಲವೆಂದು ಹೇಳಿದ್ದಾರೆ, ಇದು ಒಳ್ಳೆಯ ಸಲಹೆ. ಇದರ ಬಗ್ಗೆ ಯೋಚನೆ ಮಾಡೋಣ. ಐ.ಎ.ಎಸ್. ಅಧಿಕಾರಿ

ಗಳಿಗೆ ಅನುಭವ ಇರುವುದಿಲ್ಲವೆಂದು ಹೇಳಿದ್ದಾರೆ. ಅಪೆಕ್ಸ್ ಬ್ಯಾಂಕಿಗೆ ಐ.ಎ.ಎಸ್ ಅಧಿಕಾರಿಗಳನ್ನು ಹಾಕಿಲ್ಲ. ಕನ್ಸ್ಯೂಮರ್ಸ್ ಫೆಡರೇಷನ್‌ಗೆ ಐ.ಎ.ಎಸ್. ಅಧಿಕಾರಿಗಳನ್ನು ಹಾಕಿಲ್ಲ. ಸಹಕಾರಿ ಇಲಾಖೆಯ ಅಧಿಕಾರಿಗಳನ್ನೇ ಹಾಕಲಾಗಿದೆ. ಇನ್ನು ಮುಂದೆ ಎಲ್ಲೆಲ್ಲಿ ಸಾಧ್ಯವೋ ಅಲ್ಲಿ ಸಹಕಾರಿ ಇಲಾಖೆಯ ಅಧಿಕಾರಿಗಳನ್ನೇ ಹಾಕಬೇಕೆಂಬ ತೀರ್ಮಾನ ತೆಗೆದುಕೊಂಡಿದ್ದೇವೆ. ಮಾನ್ಯ ಸದಸ್ಯರಾದ ಭೂಪತಿಯವರು ಕೊಟ್ಟಿರತಕ್ಕಂತಹ ಸಲಹೆ ಚೆನ್ನಾಗಿದ್ದರೂ ಕೂಡ, ಸ್ವಲ್ಪ ಒರಟಾಗಿದೆ. ಅವರು ಈ ಮನೆಗೆ ಹೊಸದಾಗಿ ಬಂದಿದ್ದಾರೆ. ಪ್ರಾಥಮಿಕ ಭೂಅಭಿವೃದ್ಧಿ ಬ್ಯಾಂಕುಗಳಲ್ಲಿ ಚುನಾವಣಾ ಸಮಯದಲ್ಲಿ ಮೋಸ ನಡೆಯುತ್ತಿದೆ ಎನ್ನುವ ಮಾತನ್ನು ಹೇಳಿದ್ದಾರೆ. ಇದು ನೂರಕ್ಕೆ ತೊಂಭತ್ತೈದು ಭಾಗ ನಿಜ ಎಂಬುದನ್ನು ಒಪ್ಪಿಕೊಂಡಿದ್ದೇನೆ,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸಹಕಾರ ಬ್ಯಾಂಕುಗಳಲ್ಲಿ ಬುಕ್ ಅಡ್ಜಸ್ಟ್‌ಮೆಂಟ್ ಬಿಟ್ಟರೆ, ಆದಾಯವೇನೂ ಇಲ್ಲ.

ಶ್ರೀ ಆರ್.ಎಲ್. ಜಾಲಪ್ಪ.—ಆ ರೀತಿ ಏನೂ ಇಲ್ಲ, ಕೆಲವು ಚೆನ್ನಾಗಿ ಕೆಲಸಮಾಡತಕ್ಕಂಥ ಬ್ಯಾಂಕುಗಳೂ ಇವೆ. ತಾವು ಯಾವ ಬ್ಯಾಂಕಿನಲ್ಲೂ ಕೆಲಸಮಾಡಿದ ಅನುಭವ ಇಲ್ಲವೆಂದು ಕಾಣುತ್ತದೆ. ಮೋಸ ನಡೆಯುವುದನ್ನು ತಪ್ಪಿಸುವುದಕ್ಕಾಗಿ ಹೋದವರ್ಷವೇ ನಾವು ಒಂದು ಅಮೆಂಡ್‌ಮೆಂಟ್ ತಂದು ಬಿಟ್ಟೆವು. ಚುನಾವಣಾ ಸಮಯದಲ್ಲಿ ತಮಗೆ ಬೇಕಾದ ಐನೂರು, ಸಾವಿರ ಜನ ಮೆಂಬರ್ಸ್‌ಗಳನ್ನು ಮಾಡಿಸಿ, ಚುನಾವಣೆಯಲ್ಲಿ ಗೆದ್ದು ಬರುವಂಥಾದ್ದು ನಡೆಯುತ್ತಿತ್ತು. ಎಷ್ಟು ಜನ ಮೆಂಬರ್ಸ್ ಮಾಡಿಸಿದರೂ ಒಬ್ಬರಿಗೇ ವೋಟು ಮಾಡತಕ್ಕಂತಹ ಅಮೆಂಡ್‌ಮೆಂಟ್ ತಂದಿದ್ದೇವೆ. ನಾವು ಇನ್ನೂ ಯೋಚನೆ ಮಾಡಿದ್ದೇವೆ, ಕಬ್ಬಿಣದ ಅಂಗಡಿಯೊಳಗೆ ನೊಣಕ್ಕೆ ಏನು ಕೆಲಸ ಎಂಬಂತೆ, ನಾನ್ ಬರೋಯರ್ಸ್‌ಗಳನ್ನು ಪೂರ್ತಿ ತೆಗೆದುಹಾಕುವಂತಹ ಯೋಚನೆ ಕೂಡ ಇದೆ. ೮ ಜನ ಬಾರೋಯರ್ಸ್‌ಗೆ ಒಬ್ಬರೇ ಒಬ್ಬರು ನಾನ್-ಬಾರೋಯರ್ಸ್ ಬರುತ್ತಾರೆ. ಇನ್ನು, ಸಹಕಾರಿ ರಂಗದಲ್ಲಿ ೭ ಕೋಟಿ ರೂಪಾಯಿಗಳವರೆಗೆ ಮಿಸ್ ಅಪ್ರಾಪ್ರಿಯೇಷನ್ ಆಗಿದೆ. ವರ್ಕಿಂಗ್ ಕ್ಯಾಪಿಟಲ್ ೨,೧೧೪ ಕೋಟಿ ರೂಪಾಯಿಗಳು, ಇದನ್ನು ಹೋಲಿಸಿ ನೋಡಿದಾಗ, ೦.೨೧ ಪರ್ಸೆಂಟ್ ಮಿಸ್ ಅಪ್ರೋಪ್ರಿಯೇಷನ್ ಆಗಿದೆ. ಇದು ಜಾಸ್ತಿಯಾಯಿತು ಎನ್ನುವುದೇ ನಮ್ಮ ವಾದ. ಇದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಇದು ನಾನ್ ಅಫಿಷಿಯಲ್ ಮೂವ್‌ಮೆಂಟ್ ಆದ್ದರಿಂದ, ಪ್ರತಿಯೊಂದು ಸಹಕಾರ ಸಂಘಕ್ಕೂ ಪೋಲೀಸ್‌ನವರನ್ನು ಹಾಕುವುದಕ್ಕಾಗುವುದಿಲ್ಲ,

26 you compare Gadag with other markets other market-institutions have not developed to that extent. ಅವರು ತಿಳುವಳಿಕೆಗೆ ಬರಬೇಕು. ಆಗ ಮಾತ್ರ ಇದು ಅಭಿವೃದ್ಧಿಯಾಗುತ್ತದೆ. ಇಲ್ಲದಿದ್ದರೆ ಆಗುವುದಿಲ್ಲ ಎಂಬ ಮಾತನ್ನು ತಮ್ಮ ಗಮನಕ್ಕೆ ತರುತ್ತೇನೆ. ನಾವು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಯೋಚನೆಮಾಡಿದ್ದೇವೆ. ಯಾರೇ ಸದಸ್ಯರಾಗಿರಲಿ, ಸದಸ್ಯರಾದ ಒಂದು ವರ್ಷದೊಳಗೆ ಮತದಾನ ಮಾಡುವಂತಹ ಅಧಿಕಾರವನ್ನು ಕೊಡಬಾರದು, ಒಂದು ವರ್ಷದ ಮೇಲೆ ಮತದಾನ ಮಾಡುವಂತಹ ಅಧಿಕಾರವನ್ನು ಕೊಡುವುದರಿಂದ ಮೋಸ, ದಗಾ ನಡೆಯುವುದು ತಪ್ಪಬಹುದು.

ಶ್ರೀ ಧರ್ಮಸಿಂಗ್.—ನಾಮಿನೇಟೆಡ್ ಮೆಂಬರ್ಸ್ ಬಗ್ಗೆ ಹೇಳಿ.

ಶ್ರೀ ಆರ್.ಎಲ್. ಜಾಲಪ್ಪ.—ಇದು ನಾಮಿನೇಟೆಡ್ ಮೆಂಬರ್ಸ್‌ಗೆ ಸಂಬಂಧಪಟ್ಟಿದ್ದಲ್ಲ. ಹತ್ತು, ಹತ್ತು ರೂಪಾಯಿಗಳನ್ನು ಕೊಟ್ಟು ಮೆಂಬರ್ಸ್‌ಗಳನ್ನು ಮಾಡಿಸುತ್ತಾರೆ. ಮತ್ತೆ ಗೃಹನಿರ್ಮಾಣ ಸಹಕಾರ ಸಂಘಗಳಿಗೆ ಸಂಬಂಧಪಟ್ಟಂತೆ ಹಾಗೂ ವಿಶ್ವಭಾರತಿ ಹೌಸಿಂಗ್ ಸೊಸೈಟಿಗೆ ಸಂಬಂಧಪಟ್ಟ ಜಾಹಿರಾತಿನ ಬಗ್ಗೆ ಮಾನ್ಯ ಸದಸ್ಯರುಗಳು ಹೇಳಿದ್ದಾರೆ. ಈಗಾಗಲೇ ಇವುಗಳ ಬಗ್ಗೆ ಪರಿಶೀಲನೆ ನಡೆಸಲು ೩ ಜನರ ಸಮಿತಿಯನ್ನು ನೇಮಕಮಾಡಲಾಗಿದೆ. ಸಂಬಂಧಪಟ್ಟ ಗೃಹನಿರ್ಮಾಣಗಳ ಬೇಡಿಕೆಗಳು ಅವರ ಮುಂದೆ ಹೋಗಬೇಕು. ೬೦-೭೦ ಸೊಸೈಟಿಗಳನ್ನು ಬಿಟ್ಟರೆ, ಉಳಿದವರೆಲ್ಲರೂ ಬಿಡಿಎ ಮೂಲಕ ಜಮೀನು ತೆಗೆದುಕೊಳ್ಳಬೇಕು.

ಶ್ರೀ ಕೆ.ಹೆಚ್. ಪಾಟೀಲ್.—ಅವರ ಮೇಲೆ ಕೇಸ್ ಇದೆ. ಅದನ್ನು ವಾಪಸ್ ತೆಗೆದುಕೊಳ್ಳಿ.

ಮಾಡಿದಾಗ ಅವರ ಆಸ್ತಿಯನ್ನು ಅಟ್ಯಾಚ್‌ಮೆಂಟ್ ಮಾಡಿದ್ದು, ಕೋರ್ಟಿನಲ್ಲಿ ತೀರ್ಮಾನವಾಗಿ ೯,೭೨೪ ರೂಪಾಯಿಗಳ ಮತ್ತು ೩೦,೨೦೦ ಸಾವಿರ ರೂಪಾಯಿಗಳಿಗೆ ಶೇಕಡ ೧೨ ಪರ್‌ಸೆಂಟನಂತೆ ಬಡ್ಡಿ ಸಮೇತ ಅವರಿಂದ ಬಾಕಿ ಬರಬೇಕು. ಮತ್ತೆ ಅವರನ್ನು ರೀ ಇನ್‌ಸ್ಟೇಟ್ ಮಾಡಿ ಹಿಂದಿನ ಅಧಿಕಾರಿಯನ್ನು ತೆಗೆದುಕೊಂಡು ಹೋಗಿ ಹಾಲ್‌ಕುರಿಕೆ ಸೊಸೈಟಿಗೆ ಹಾಕಿದ್ದಾರೆ. ಶಿವಣ್ಣ ಎಂಬುವರು ಮಿಸ್ ಅಪ್ರೋಪ್ರಿಯೇಷನ್ ಮಾಡಿದ ಎಂದು ಹೇಳಿ ಇವನನ್ನು ತೆಗೆದುಕೊಂಡು ಹೋಗಿ ಇನ್ನೊಬ್ಬ ಕಳ್ಳನ ಜಾಗದಲ್ಲಿ ಹಾಕಿದ್ದಾರೆ ಆ ಕಳ್ಳನನ್ನು ತೆಗೆದುಕೊಂಡು ಬಂದು ಈ ಕಳ್ಳನ ಜಾಗದಲ್ಲಿ ಹಾಕಿದ್ದಾರೆ. ಈ ರೀತಿ ಮಾಡಿರುವುದು ತಪ್ಪು. ಯಾರು ಈ ರೀತಿ ಮಾಡಿದ್ದಾರೆ, ಆ ಅಧಿಕಾರಿಯನ್ನು ಎಕ್ಸ್‌ಪ್ಲನೇಷನ್‌ಗಾಗಿ ಕರೆಯಿಸಿ ಎಂದು ಹೇಳಿದ್ದೇವೆ. ತಾರೀಖು ೨೯–೯–೧೯೬೮ ರಲ್ಲಿ ಶಿವಣ್ಣ ಎಂಬುವನು ೧೮,೬೦೦ ರೂಪಾಯಿಗಳನ್ನು ತೆಗೆದುಕೊಂಡು ಬಂದು ಆನಂದಮೂರ್ತಿಗೆ ಕೊಟ್ಟಿದ್ದಾನೆ. ತಾರೀಖು ೩೦–೯–೧೯೬೮ ರಂದು ೯,೩೦೭ ರೂಪಾಯಿಗಳನ್ನು ಕೊಟ್ಟಿದ್ದಾನೆ. ಶಿವಣ್ಣನು ತಾರೀಖು ೩೦–೯–೧೯೬೮ರ ರಾತ್ರಿಯಿಂದ ಪತ್ತೆ ಇಲ್ಲ, ಎನ್ನುವ ವರದಿ ಬಂದಿದೆ. ಇದರ ಬಗ್ಗೆ ಮಾನ್ಯ ಗೃಹ ಸಚಿವರು ಈಗಾಗಲೇ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ನಾನು ಹೆಚ್ಚಿಗೆ ಹೇಳಬೇಕಾಗಿಲ್ಲ. ಈ ಎಲ್ಲಾ ವಿಚಾರಗಳಿಂದ ತಮ್ಮ ಅಭಿಪ್ರಾಯ ಸರಿಯಿಲ್ಲ ಎಂದು ಹೇಳುತ್ತೇನೆ. This man is a habitual offender.

ಶ್ರೀ ಯು. ಭೂಪತಿ.—ಹೆಬಿಚ್ಯುಯಲ್ ಅಫೆಂಡರ್ ಇರಬಹುದು, ಇಲ್ಲಾ ಎಂದು ಹೇಳುವುದಿಲ್ಲ. ನಾನು ಅವರನ್ನು ಡಿಫೆಂಡ್ ಮಾಡುತ್ತಿಲ್ಲ. ಪ್ರಶ್ನೆ ಏನೆಂದರೆ ಅವನು ಕಾಣೆಯಾಗಿದ್ದಾನೆ ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಷಯ. ಅವನ ಹೆಂಡತಿಯು ನನ್ನ ಗಂಡನ ಕೊಲೆ ಆಗಿದೆ ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾಳೆ ಸಿ.ಬಿ.ಐ. ನಿಂದ ತನಿಖೆ ನಡೆಸಿ, ಅವನು ಮಿಸ್ ಅಪ್ರೋಪ್ರಿಯೇಷನ್‌ನಿಂದ ಕಾಣೆಯಾಗಿದ್ದಾನೋ ಅಥವಾ ಸತ್ತಿದ್ದಾನೋ ಎಂದು ತಿಳಿಯುತ್ತದೆ.

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಗೃಹ ಸಚಿವರ ಹೇಳಿಕೆಯಲ್ಲಿ ಮೊದಲ ವಾಕ್ಯದಲ್ಲೋ ಅಥವಾ ಕೊನೆಯ ವಾಕ್ಯದಲ್ಲೋ ಪೋಲೀಸರು ಸಹಾ ತನಿಖೆ ನಡೆಸುತ್ತಿದ್ದಾರೆ ಎಂದು ಹೇಳಿದ್ದಾರೆ. ವ್ಯಕ್ತಿ ಕೆಟ್ಟವನಾಗಿರಲಿಕ್ಕೆ ಸಾಕು ಪೋಲೀಸರು ತನಿಖೆ ನಡೆಸುತ್ತಿದ್ದಾರೆ.

ಶ್ರೀ ಯಂ. ಭೂಪತಿ.—ವ್ಯಕ್ತಿ ಕೆಟ್ಟವನಾದರೆ ಕೊಲೆ ಮಾಡಬೇಕು ಎಂದು ಕಾನೂನು ಇದೆಯೇ?

ಶ್ರೀ ಆರ್. ಎಲ್. ಜಾಲಪ್ಪ.—ಕೊಲೆ ಮಾಡಿ ಎಂದು ನಾನು ಏಕೆ ಹೇಳಲಿ. ವ್ಯಕ್ತಿ ಕೆಟ್ಟವನಾದರೆ ಕೊಲೆ ಆಗಬೇಕು ಎಂದೂ ಏನೂ ಇಲ್ಲ. ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತಾರೆ. ಪೋಲೀಸರು ಅವನನ್ನು ಹುಡುಕುತ್ತಿದ್ದಾರೆ. ಇನ್ನು ಸನ್ಮಾನ್ಯ ವೆಂಕಟರಾಮಯ್ಯನವರು ಈ ಗೌರಿಬಿದನೂರು ಸಹಕಾರಿ ಸಕ್ಕರೆ ಕಾರ್ಖಾನೆಯ ಬಗ್ಗೆ ಹೇಳಿದ್ದಾರೆ. ಡಿಸ್ಟಿಲರಿ ಬಗ್ಗೆ ಹೇಳಿದ್ದಾರೆ. ಹಲವಾರು ಸಾರಿ ಈ ಸದನದಲ್ಲಿ ನಾನು ಇದರ ಬಗ್ಗೆ ಉತ್ತರ ಕೊಟ್ಟಿದ್ದೇನೆ. ಅಲ್ಲಿ ಅರೆಯುವುದಕ್ಕೆ ಕಬ್ಬು ಇಲ್ಲ. ಆ ಫ್ಯಾಕ್ಟರಿ ದುರ್ವ್ಯವಹಾರದಿಂದ ಅರ್ಧ ಹಾಳಾಗಿದೆ, ಇನ್ನು ಅರ್ಧ ಕಬ್ಬು ಇಲ್ಲದೆ ಹಾಳಾಗಿದೆ ಕೆಲವರು ನೌಕರರು ಮತ್ತು ಮ್ಯಾನೇಜ್‌ಮೆಂಟ್‌ನವರು ಇದಕ್ಕೆ ಕಾರಣರು. ಕಬ್ಬು ಬರದೇ ಇದ್ದರೆ ನಾವು ಏನೂ ಮಾಡುವುದಕ್ಕಾಗುವುದಿಲ್ಲ. ಈಗ ಆ ಫ್ಯಾಕ್ಟರಿಯನ್ನು ರೆಂಟ್ ಮೇಲೆ ಅಥವಾ ಅದನ್ನು ಪರ್‌ಚೇಸ್ ಮಾಡಲಿಕ್ಕೆ ಆಗಲೀ ಯಾರಾದರೂ ಮುಂದೆ ಬಂದರೆ ಕೊಟ್ಟುಬಿಡುತ್ತೇವೆ ಎಂದು ಪೇಪರ್‌ನಲ್ಲಿ ಅಡ್ವರ್‌ಟೈಸ್‌ಮೆಂಟ್ ಮಾಡಿದ್ದೇವೆ. ಯಾರಾದರೂ ಮುಂದೆ ಬಂದರೆ ಅದನ್ನು ಕೊಡಲಿಕ್ಕೆ ತಯಾರಾಗಿದ್ದೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಕಬ್ಬು ಇಲ್ಲದೇ ಅವರು ತಾನೇ ಏನು ಮಾಡುತ್ತಾರೆ ?

ಶ್ರೀ ಆರ್. ಎಲ್. ಜಾಲಪ್ಪ.—ಮಿಷಿನರಿ ಎಲ್ಲವನ್ನು ಬೇರೆ ಕಡೆ ತೆಗೆದುಕೊಂಡು ಹೋಗುತ್ತಾರೆ ಮೈನ್ಸ್ ಅಂಡ್ ಜಿಯಾಲಜಿ ಇಲಾಖೆಯವರು ಡಾರ್ಕ್ ಏರಿಯಾ, ಗ್ರೇ ಏರಿಯಾ ಎಂದು ಮಾಡಿದ್ದಾರೆ. ನಮ್ಮದು ಡಾರ್ಕ್ ಏರಿಯಾ ಎಂದು ಮಾಡಿಬಿಟ್ಟಿದ್ದಾರೆ. ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಮಾನ್ಯ ಸದಸ್ಯರು ಹೇಳಿದರು. ಸನ್ಮಾನ್ಯ ಗಂಗಾಧರಪ್ಪನವರು ತಮ್ಮ ಜಿಲ್ಲೆಯ ಬಗ್ಗೆ ಹೇಳಿದರು. ಹಾಸನ ಜಿಲ್ಲೆಯ ಸಹಕಾರ ಸಂಘದ ಬಗ್ಗೆಯೂ ಹೇಳಿದರು. ಅಧ್ಯಕ್ಷರೇ, ನಾನು ಬಹಳ ಸಂಕಟದಿಂದ ಹೇಳುತ್ತಿದ್ದೇನೆ. ಹಾಸನ ಜಿಲ್ಲೆಯಷ್ಟು ಕೆಟ್ಟಿರುವ ಸಹಕಾರಿ ಸಂಸ್ಥೆಗಳು ಈ ರಾಜ್ಯದ ಯಾವ ಮೂಲೆ

ಶ್ರೀ ಆರ್.ಎಲ್. ಜಾಲಪ್ಪ.—ಅದರಲ್ಲಿ ಹಿಂದೆಮುಂದೆ ನೋಡುವುದಿಲ್ಲ, ವಿಶ್ವಭಾರತಿ ಹೌಸಿಂಗ್ ಸೊಸೈಟಿಯವರ ಹತ್ತಿರ ಹೇರಳವಾಗಿ ಹಣವಿರುವುದರಿಂದ ಜಾಹಿರಾತು ಕೊಡುತ್ತಿದ್ದಾರೆ ಬೇಕಾದಷ್ಟು ಕೇಸುಗಳು ಹೈಕೋರ್ಟಿನಲ್ಲಿ ಇವೆ. ಇನ್ನು ಮೇಲೆ ಯಾರೂ ಕೂಡ ಅವರಿಗೆ ದುಡ್ಡು ಕೊಡಲಾರರೆಂದು ಕಾಣುತ್ತದೆ. ದುಡ್ಡು ಮುಗಿದಮೇಲೆ ಜಾಹಿರಾತು ನಿಲ್ಲಿಸುತ್ತಾರೆ.

ಶ್ರೀ ಯು. ಭೂಪತಿ.—ಇವೊತ್ತು ಹೌಸಿಂಗ್ ಸೊಸೈಟಿಗಳನ್ನು ಮಾಡಿಕೊಂಡು ಲಕ್ಷಾಂತರ ರೂಪಾಯಿಗಳ ದುರ್ವ್ಯವಹಾರ ಮಾಡಿ, ಜನತೆಗೆ ಮೋಸ ಮಾಡಿದ್ದಾರೆ ಇದರ ಬಗ್ಗೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಆರ್.ಎಲ್. ಜಾಲಪ್ಪ.—೫ ಜನರ ಸಮಿತಿಯಲ್ಲಿ ನಗರಾಭಿವೃದ್ಧಿ ಯೋಜನೆ ಇಲಾಖೆಯ ಹಿರಿಯ ಅಧಿಕಾರಿ, ರೆವಿನ್ಯೂ ಇಲಾಖೆಯ ಹಿರಿಯ ಅಧಿಕಾರಿ ಹಾಗೂ ಜಿಲ್ಲಾಧಿಕಾರಿಯವರು ಇರುತ್ತಾರೆ, ಅವರ ಮುಂದೆ ಗೃಹ ನಿರ್ಮಾಣ ಸಹಕಾರ ಸಂಘಗಳ ಬೇಡಿಕೆಗಳು ಹೋಗಿ ಪ್ರೋಸೆಸ್ ಆಗುತ್ತವೆ. ಅವರು ಎಷ್ಟು ಎಕರೆ ಹೇಳಿದರೆ, ಅಷ್ಟು ಕೊಡಬೇಕು. ಅದಕ್ಕಿಂತ ಹೆಚ್ಚಿಗೆ ಕೊಡುವಂತಿಲ್ಲ. ಯಾವ ಉದ್ದೇಶಕ್ಕಾಗಿ ಗೃಹ ನಿರ್ಮಾಣಸಹಕಾರ ಸಂಘಗಳು ಇರುತ್ತವೆಯೋ, ಆ ಉದ್ದೇಶವನ್ನು ಕಾರ್ಯಗತ ಮಾಡಬೇಕು. ಸದಸ್ಯರುಗಳು ಅಫಿಡವಿಟ್ ಕೊಡಬೇಕು, ಅವರು ಯಾವ ರೀತಿಯಲ್ಲಿಯೂ ನಿವೇಶನ ಗಳನ್ನು ಹೊಂದಿರಬಾರದು, ಅವ್ಯವಹಾರಗಳು ನಡೆದಿರಬಾರದು. ಈ ಒಂದು ಸಂಬಂಧವನ್ನು ಪಾಕಿ. ಮೋಸವನ್ನು ಮಿನಿಮೈಸ್ ಮಾಡುವುದಕ್ಕೆ ಪ್ರಯತ್ನಮಾಡಿದ್ದೇವೆ, ಇದರಲ್ಲಿ ಮುಚ್ಚುಮರೆ ಏನೂ ಇಲ್ಲ. ಬಿಜಾಪುರ ಸ್ಪಿನ್ನಿಂಗ್ ಮಿಲ್‌ನ ಬಗ್ಗೆ ಇದೇ ಸದನದಲ್ಲಿ ಎರಡು ಸಾರಿ ಉತ್ತರ ಕೊಡುವಾಗ ಹೇಳಿದ್ದೇನೆ. ೫೨ ಲಕ್ಷ ರೂಪಾಯಿಗಳು ಕೆ-ಟೆಕ್ಸ್ ರೆಡಿಯಾಗಿದೆ. ೮೨ ಲಕ್ಷ ರೂಪಾಯಿಗಳ ಹತ್ತಿಯನ್ನು ಮಾರ್ಕೆಟಿಂಗ್ ಫೆಡರೇಷನ್ ನವರು ಕೊಂಡುಕೊಳ್ಳುವುದಕ್ಕೆ ತೀರ್ಮಾನಮಾಡಿದ್ದಾರೆ. ನನ್ನ ಬೇಡಿಕೆ ಇಷ್ಟೆ. ಅಲ್ಲಿನ ನೌಕರರು ಟೆಕ್ನಿಕಲ್ ಪೀಪಲ್ ವರ್ಕ್ ಲೋಡ್ ಏನು ಕೊಡುತ್ತಾರೆ, ಅದನ್ನು ಒಪ್ಪಿ ಕೊಳ್ಳಬೇಕು. ಈ ಮಿಲ್‌ನಲ್ಲಿ ಕೊಡುವಷ್ಟು ಸಂಬಳ ಬೇರೆ ಯಾವ ಮಿಲ್ ಕೊಡುತ್ತಿಲ್ಲ. ಈಗ ೧೨ ಸಾವಿರ ಸ್ಪಿಂಡ್ಲಿಂಗ್ಸ್ ಇವೆ. ಅದನ್ನು ೨೫ ಸಾವಿರಕ್ಕೆ ಜಾಸ್ತಿಮಾಡಲಾಗುವುದು. ಇರತಕ್ಕ ನೌಕರರನ್ನು ಹೆಚ್ಚಿಗೆ ಮಾಡುವುದಕ್ಕಾಗುವುದಿಲ್ಲ, ಟೆಕ್ನಿಕಲ್ ಪೀಪಲ್ ಕೊಟ್ಟಂತಹ ವರ್ಕ್‌ಲೋಡನ್ನು ಒಂದೆರಡು ವರ್ಷ ಮಾಡಿಕೊಂಡು ಹೋಗಲಿ. ನಂತರ ಯೋಚನೆ ಮಾಡೋಣ ಎಂದು ಹೇಳಿದ್ದೇವೆ. ಆ ಒಪ್ಪಂದಕ್ಕೆ ಕೆಲವರು ತಯಾರಿದ್ದಾರೆ, ಇನ್ನು ಕೆಲವರು ತಯಾರಿಲ್ಲ. ಅಗ್ರಿಮೆಂಟ್ ಆದರೆ ಕೂಡಲೇ ಕೆಲಸ ಪ್ರಾರಂಭಮಾಡುತ್ತೇವೆ.

† ಶ್ರೀ ಯು. ಭೂಪತಿ.—ನಾವು ಇಲ್ಲಿ ಹೇಳುವುದೇನೆಂದರೆ ಕಾರ್ಮಿಕ ಸಚಿವರು ಮತ್ತು ತಾವು ಇಬ್ಬರೂ ಸೇರಿ ಮ್ಯಾನೇಜ್‌ಮೆಂಟ್‌ನವರನ್ನು ವರ್ಕರ್ಸ್ ಪ್ರತಿನಿಧಿಗಳನ್ನು ಕರೆಯಿಸಿ ಕುಳಿತುಕೊಂಡು ಮಾತನಾಡಿದರೆ ಡೆಫನೇಟ್ ಆಗಿ ಇದು ಸೆಟ್ಲ್ ಆಗುತ್ತದೆ ಅಲ್ಲಿ ಮಿಸ್ ಅಂಡರ್‌ಸ್ಟಾಂಡಿಂಗ್ ಬಂದಿದೆ. ಸರ್ಕಾರದವರು ಹಣವನ್ನು ಕೊಟ್ಟಿದ್ದಾರೆ. ಕೈಗಾರಿಕೆಯನ್ನು ಸ್ಟಾರ್ಟ್ ಮಾಡಿಲ್ಲ ಎನ್ನತಕ್ಕಂಥ ಅಭಿಪ್ರಾಯ ಬಂದಿದೆ. ಆದ್ದರಿಂದ ಈ ಕಾರ್ಯದಲ್ಲಿ ಇಬ್ಬರು ಸೇರಿ ಪ್ರತಿನಿಧಿಗಳನ್ನು ಕರೆಯಿಸಿ ಮಾತನಾಡಿದರೆ ಈ ಸಮಸ್ಯೆ ನಿಜವಾಗಿಯೂ ಬಗೆಹರಿಯುತ್ತದೆ. ಇದನ್ನು ತಾವು ಯಾವಾಗ ಮಾಡುತ್ತೀರಿ ?

ಶ್ರೀ ಆರ್. ಎಲ್. ಜಾಲಪ್ಪ.—ಇದರ ಬಗ್ಗೆ ನಮ್ಮ ಅಧಿಕಾರಿಗಳಿಗೆ ಈಗಾಗಲೇ ಸೂಚನೆ ಕೊಟ್ಟಿದ್ದೇನೆ, ಇನ್ನೊಂದು ಅವರನ್ನು ಕರೆಯಿಸಿ ಮಾತಾಡಿ ಎಂದು ಹೇಳಿದ್ದೇನೆ. ನೀವೂ ಸ್ವಲ್ಪ ಇನ್‌ಫ್ಲೂಯೆನ್ಸ್ ಯೂಸ್ ಮಾಡಿ ವರ್ಕರ್ಸ್ ರೆಪ್ರಸೆಂಟಟೀವ್ಸ್ ಏನು ಇದ್ದಾರೆ, ಅವರು ಯೂನಿಯನ್ ಅಧ್ಯಕ್ಷರುಗಳು ಮತ್ತು ಕಾರ್ಯದರ್ಶಿಗಳು ಬಂದರೆ ಟೆಕ್ನಿಕಲ್ ಪೀಪಲ್ ಇಬ್ಬರು ಸೇರಿ ಇದನ್ನು ತೀರ್ಮಾನ ಮಾಡಬಹುದು. ಆಮೇಲೆ ಸಿಂಧನೂರು ಟಿ.ಎ.ಪಿ.ಎಂ.ಸಿ.ನಲ್ಲಿ ಏನು ಅವ್ಯವಹಾರ ನಡೆದಿದೆ, ಅದು ನಿಜ ಇದರ ಬಗ್ಗೆ ನಾನು ಇವೊತ್ತು ಹೇಳುತ್ತೇನೆ. ಮೊನ್ನೆ ಮಾನ್ಯ ಸದಸ್ಯರು ಇದರ ಬಗ್ಗೆ ಪ್ರಶ್ನೆ ಮಾಡಿದ್ದರು. ಆಗ ಉತ್ತರ ಕೊಡುವಾಗ ಸದಸ್ಯರು ಬಂದಿರಲಿಲ್ಲ. ಈಗಾಗಲೇ ಕ್ರಮ ತೆಗೆದುಕೊಂಡಿದ್ದೇವೆ ಎಂದು ನಾನು ಈ ಸಭೆಯಲ್ಲಿ ಹೇಳುವುದಕ್ಕಾಗುವುದಿಲ್ಲ. ತಿಪಟೂರಿನ ಹಾಲ್‌ಕುರಿಕೆ ಸಹಕಾರ ಸಂಘದ ಆನಂದಮೂರ್ತಿಯವರ ಬಗ್ಗೆ ಹೇಳಿದ್ದಾರೆ. ಆನಂದಮೂರ್ತಿಯವರು ಸತವಳ್ಳಿಯ ಸಹಕಾರ ಸಂಘದಲ್ಲಿ ಸುಮಾರು ಮೂವತ್ತು ಸಾವಿರ ರೂಪಾಯಿಗಳನ್ನು ದುರುಪಯೋಗ

ಯತೂ ಕೆಟ್ಟಿಲ್ಲ. ಆ ಜಿಲ್ಲಾ ಬ್ಯಾಂಕ್‌ನಿಂದ ಮೂರು ಪರ್ಸೆಂಟ್ ರಿಕವರಿ ಆಗಿತ್ತು. ಟೇಕ್ ಓವರ್ ಮಾಡಿದಾಗ ೨೮ ಪರ್ಸೆಂಟ್ ಇದ್ದಿದ್ದು ಇನ್ನೊಂದು ಸಾರಿ ೨೩ ಪರ್ಸೆಂಟ್‌ನಷ್ಟು ರಿಕವರಿ ಆಗಿತ್ತು. ಎಲ್ಲಾ ಸಹಕಾರ ಸಂಘಗಳು ಸಹಾ ಡಿಫಾಲ್ಟ್ ಆಗಿವೆ. ಅಲ್ಲಿ ಸುಮಾರು ೫ ಟಿ.ಎ.ಪಿ.ಎಂ.ಸಿ.ಯಲ್ಲೂ ಮಿಸ್ ಅಪ್ರೋಪ್ರಿಯೇಷನ್ ಆಗಿದೆ, ನಾಲ್ಕೈದು ಪಿ.ಎಲ್.ಡಿ.ಬಿ. ಮಿಸ್ ಅಪ್ರೋಪ್ರಿಯೇಷನ್ ಆಗಿವೆ. ಅದನ್ನು ಸೂಪರ್‌ಸೀಡ್ ಮಾಡಿದ್ದೇವೆ. ಅರಸೀಕೆರೆ ಜಿನ್ನಿಂಗ್ ಫ್ಯಾಕ್ಟರಿ ಇದೆ. ಅದು ಲಿಕ್ವಿಡೇಷನ್ ಸ್ಥಿತಿಗೆ ಬಂದಿದೆ. ಅದೂ ಸಹಾ ಹಾಳಾಗಿದೆ. ಡಿಸ್ಟ್ರಿಕ್ಟ್ ಮಾರ್ಕೆಟಿಂಗ್ ಸೊಸೈಟಿ ಅದು ಹಾಳಾಗಿದೆ ಅದರಲ್ಲೂ ಏನೂ ಇಲ್ಲ. ಈಗ ಅದನ್ನು ಕೋಲ್ಡ್ ಸ್ಟೋರೇಜ್ ಸೊಸೈಟಿ ಎಂದು ಹೇಳುತ್ತಾರೆ. ಇದಕ್ಕೆ ಬಹಳ ದೊಡ್ಡ ಮೇಜರ್ ಆಪರೇಷನ್ ಆಗ ಬೇಕು. ನಾನು ಬಹಳ ದೀರ್ಘವಾಗಿ ವಿಚಾರಣೆ ಹೋದಾಗ ಹಾಸನ ಜಿಲ್ಲಾ ಬ್ಯಾಂಕ್ ಲಿಕ್ವಿಡೇಟ್ ಮಾಡಬೇಕಾಗಿ ಬಂದರೂ ಬರಬಹುದು ಎಂದು ಮಾನ್ಯ ಗಂಗಾಧರಪ್ಪನವರ ಗಮನಕ್ಕೆ ಈ ವಿಷಯವನ್ನು ತರುವುದಕ್ಕೆ ಇಚ್ಛೆಪಡುತ್ತೇನೆ ಅರಸೀಕೆರೆಯಲ್ಲಿ ಒಂದು ಕಾಯರ್ ಸೊಸೈಟಿ ಇತ್ತು, ಅಲ್ಲಿ ಕಾರ್ಬನ್ ಮಾಡುತ್ತೇವೆ ಎಂದು ಹೇಳಿ ಐವತ್ತು ಲಕ್ಷ ಮುಳುಗಿ ಹೋಗಿದೆ. ಇಷ್ಟು ಹಾಸನ ಜಿಲ್ಲೆಯು ಒಂದು ಷಮಂಗ್ರವಾದ ಇತಿಹಾಸ ಇದನ್ನು ಸರಿ ಮಾಡುವುದು ಅಷ್ಟು ಸುಲಭವಲ್ಲ. ಕ್ಯಾನ್ಸರ್ ಮೂರನೆಯ ಸ್ಟೇಜ್‌ನಲ್ಲೋ ನಾಲ್ಕನೇ ಸ್ಟೇಜ್‌ನಲ್ಲೋ ಹಬ್ಬಿರುವ ರೀತಿಯಲ್ಲಿ, ಆ ಸೊಸೈಟಿಗಳ ಪರಿಸ್ಥಿತಿ ಇದೆ.

SRI MALLIKARJUN KHARGE.—Hassan District is worst in Co-operation but top in politics.

ಶ್ರೀ ಕೆ. ಎಚ್. ಪಾಟೀಲ್.—ಜಿನ್ನಿಂಗ್ ಫ್ಯಾಕ್ಟರಿಯ ಛೇರ್ಮನ್ ಡೆಪ್ಯುಟಿ ಕಮಿಷನರ್ ಆದ್ದರಿಂದ ಅವರಿಗೆ ಏನು ಮಾಡಲಿಕ್ಕೆ ಬರಲಿಲ್ಲ. ಬೇರೆ ಯಾರಾದರೂ ಆಗಿದ್ದರೆ ಕೂಡಲೇ ಸಸ್ಪೆಂಡ್ ಮಾಡುತ್ತಿದ್ದೀರಿ. ಅವರನ್ನು ಹತ್ತು ವರ್ಷಗಟ್ಟಲೇ ಅಲ್ಲೇ ಇಟ್ಟಿದ್ದೀರಿ. ಒಬ್ಬ ಸಿಪಾಯಿ ಈ ಫ್ಯಾಕ್ಟರಿಯನ್ನು ನಡೆಸುತ್ತಾನೆ.

ಶ್ರೀ ಆರ್ ಎಲ್ ಜಾಲಪ್ಪ.—ಜಿಲ್ಲಾಧಿಕಾರಿಗಳದು ಏನೂ ತಪ್ಪಿಲ್ಲ. ಅದನ್ನು ಟೇಕ್ ಓವರ್ ಮಾಡುವಷ್ಟರ ಹೊತ್ತಿಗೆ ಆಗಲೇ ಅದು ಮುಳುಗಿ ಹೋಗಿತ್ತು. ಆಗ ಬಂದು ಏನು ವ್ಯವಸ್ಥೆ ಮಾಡುವುದಕ್ಕಾಗುತ್ತದೆ ?

ಶ್ರೀ ಕೆ. ಎಚ್. ಪಾಟೀಲ್.—ಮಾರಾಟ ಮಾಡುತ್ತೀರಾ ?

ಶ್ರೀ ಆರ್. ಎಲ್. ಜಾಲಪ್ಪ.—ಮಾರಾಟ ಮಾಡುವುದಕ್ಕೆ ಹೋಗಿಲ್ಲ. ಇದು ಬಹಳ ಸಾಲದಲ್ಲಿದೆ. ಮೈನ್ ರೋಡಿನಲ್ಲಿರುವ ಇದರ ಸೈಟುಗಳನ್ನು ಮಾರಿಬಿಟ್ಟು ಸಾಲಗಳನ್ನು ತೀರಿಸಬೇಕು. ಆ ರೀತಿ ಮಾಡಿದಾಗ ಅದನ್ನು ನಡೆಸಿಕೊಂಡು ಹೋಗಬಹುದು ಎಂದು ನಾನು ಹೇಳಿದ್ದೇನೆ.

ಶ್ರೀ ಕೆ. ಎಚ್. ಪಾಟೀಲ್.—ಜಿನ್ನಿಂಗ್ ಫ್ಯಾಕ್ಟರಿ ಐಡ್ಲ್ ಆಗಿದೆ. ಇದು ನ್ಯಾಷನಲ್ ವೇಸ್ಟ್. ಯಾರಾದರೂ ತೆಗೆದುಕೊಳ್ಳಲಿಕ್ಕೆ ಮುಂದೆ ಬಂದರೆ ಕೊಡುತ್ತೀರಾ ?

ಶ್ರೀ ಆರ್. ಎಲ್. ಜಾಲಪ್ಪ.—ಈಗ ಅವರು ಜಾಬ್ ವರ್ಕ್ಸ್ ತೆಗೆದುಕೊಂಡಿದ್ದಾರೆ. ವರ್ಷಕ್ಕೆ ಐವತ್ತು ಸಾವಿರ, ಅರವತ್ತು ಸಾವಿರ ದುಡಿಯುತ್ತಿದ್ದಾರೆ. ಅದರ ಸಾಲ ಏನಿದೆ ಅದನ್ನು ತೀರಿಸಲು ಮೈನ್ ರೋಡಿಗೆ ಶಿವಮೊಗ್ಗ ರಸ್ತೆಯಲ್ಲಿ ಸುಮಾರು ೫೬೦ ಅಡಿ ಜಾಗ ಇದೆ. ಅಲ್ಲಿ ಸೈಟುಗಳನ್ನಾಗಿ ಮಾಡಿಕೊಟ್ಟರೆ ಇದು ಉಳಿದುಕೊಳ್ಳುತ್ತದೆ. ಇದನ್ನು ಆಮೇಲೆ ನಡೆಸಿಕೊಂಡು ಹೋಗಬಹುದು ಎಂದು ಹೇಳುತ್ತೇನೆ. ಕಡೆಯಂದಾಗಿ ಈ ವರ್ಷದಲ್ಲಿ ಕೆಲವು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು ಎಂದು ಇದ್ದೇವೆ. ಎಸ್. ಟಿ. ಲೋನ್, ಎಂ. ಟಿ. ಲೋನ್ ಸಾಲಗಳನ್ನು ಕೆಲವು ಕಡೆ ಒಂದೇ ಕಿಟಕಿಯಲ್ಲಿ ಕೊಡುವುದಕ್ಕೆ ಸಾಧ್ಯವೇ ಎಂದು ಈ ವರ್ಷ ಪ್ರಯತ್ನ ಮಾಡುತ್ತಿದ್ದೇವೆ. ಗುಲ್ಬರ್ಗ ಜಿಲ್ಲೆಯಲ್ಲಿ ಬಹಳಷ್ಟು ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್‌ಗಳು ಕೆಲಸ ಮಾಡುತ್ತಿಲ್ಲ. ಹಾಸನ ಜಿಲ್ಲೆಯಲ್ಲಿ ಷಾರ್ಟ್ ಟರ್ಮ್ ಲೋನ್ ಇನ್‌ಸ್ಟಿಟ್ಯೂಷನ್ಸ್ ಕೆಲಸ ಮಾಡುತ್ತಿಲ್ಲ. ಅದರಲ್ಲೂ ಕೂಡ ೫ ಪಿ. ಎಲ್. ಡಿ. ಬಿ. ಕೆಟ್ಟಿದೆ. ಆದರೂ ಕೆಲವು ಕಡೆ ಏಳೆಂಟು ಕಡೆಯಿಂದ ಲಾಂಗ್ ಟರ್ಮ್ ಲೋನ್, ಷಾರ್ಟ್ ಟರ್ಮ್ ಲೋನ್ ಈ ಎರಡು ಲೋನ್‌ಗಳನ್ನು ಒಂದೇ ಕಿಟಕಿಯಲ್ಲಿ ಕೊಡುವುದಕ್ಕೆ ಸಾಧ್ಯವೇ ಎಂದು ಯೋಚಿಸಿ ಈ ವರ್ಷದಿಂದ ಅದನ್ನು ಜಾರಿಗೆ ತರುತ್ತಿದ್ದೇವೆ, ಆಮೇಲೆ ನಾನು ಹೇಳಿದ ಹಾಗೆ

ನಮ್ಮ ಇಲಾಖೆಯಲ್ಲಿ ಜಿಲ್ಲೆಗೆ ಒಬ್ಬ ಪ್ರಾಸಿಕ್ಯೂಟರ್‌ನ್ನು ಇಟ್ಟುಕೊಳ್ಳಬೇಕೆಂದು ಯೋಚನೆ ಮಾಡುತ್ತಿದ್ದೇನೆ. ಇನ್ನೊಂದು ಯೋಚನೆ ಏನೆಂದರೆ ಪ್ರೈಮರಿ ಸಹಕಾರ ಸಂಘಗಳಿಂದ ಏನು ವಸೂಲು ಮಾಡುತ್ತಿದ್ದಾರೆ ಅದು ಜಿಲ್ಲಾ ಬ್ಯಾಂಕಿನವರ ಅಸಲಿಗೆ ಅಸಲು, ಬಡ್ಡಿಗೆ ಬಡ್ಡಿ ಮಾತ್ರ ಎಂದು ತೆಗೆದು ಕೊಳ್ಳುತ್ತಿದ್ದರು. ಮೊದಲು ಬಂದ ಹಣವನ್ನು ಬಡ್ಡಿಗೆ ತೆಗೆದುಕೊಳ್ಳುವುದು ಬೇಡ ಎಂದು ಯೋಚನೆ ಮಾಡಿದ್ದೇವೆ. ಜಿಲ್ಲಾ ಬ್ಯಾಂಕ್‌ಗಳಾಗಲೀ ಅಪೆಕ್ಸ್ ಬ್ಯಾಂಕ್‌ಗಳಾಗಲೀ ಲ್ಯಾವಿಷ್ ಆಗಿ ಖರ್ಚು ಮಾಡುವುದು ಇದರಿಂದ ತಪ್ಪುತ್ತದೆ, ಮತ್ತು ಪ್ರೈಮರಿ ಸಹಕಾರಿ ಸಂಘಗಳೂ ಉಳಿಯುತ್ತವೆ ಎಂದು ಯೋಚನೆ ಮಾಡಿದ್ದೇವೆ ಆಮೇಲೆ ನಾನ್ ಅಫಿಸಿಯಲ್ಸ್ ನಾಮಿನೇಟ್ ಮಾಡುವಾಗ ಅದರಲ್ಲಿ ಒಬ್ಬ ಹರಿಜನರನ್ನು ಮತ್ತು ಒಬ್ಬ ಹಿಂದುಳಿದವರನ್ನು ಕಡ್ಡಾಯವಾಗಿ ಇದ್ದೇ ಇರಬೇಕು ಎಂದು ಮಾಡಿದ್ದೇವೆ. ಕಂಪ್ಯೂಟರೈಸ್ಡ್ ಸಿಸ್ಟಮ್‌ನ್ನು ಒಳ್ಳಾರಿ ಜಿಲ್ಲಾ ಬ್ಯಾಂಕಿನಲ್ಲಿ ತರುತ್ತಾ ಇದ್ದೇವೆ. ಇವತ್ತು ೪ ಲಕ್ಷ ರೂಪಾಯಿಗಳನ್ನು ಸಬ್ಸಿಡಿ ರೂಪದಲ್ಲಿ ಅಲ್ಲಿ ಸಾಲ ಕೊಟ್ಟಿದ್ದೇವೆ ಈ ವ್ಯವಸ್ಥೆಯನ್ನು ಅಪೆಕ್ಸ್ ಬ್ಯಾಂಕಿನಲ್ಲಿಯೂ ತರುತ್ತಾ ಇದ್ದೇವೆ. ಈಗ ನಮಗೆ ಬೇಕಾದ ವಿವರಗಳು ಸಿಕ್ಕಬೇಕೆಂದರೆ, ಯಾವುದೂ ಸಿಕ್ಕುತ್ತಿಲ್ಲ. ಅದಕ್ಕೋಸ್ಕರ ನಾವು ಕಂಪ್ಯೂಟರೈಸ್ ಸಿಸ್ಟಮ್‌ನ್ನು ಜಾರಿಗೆ ತರುತ್ತಿದ್ದೇವೆ. ಸಣ್ಣ ರೈತರಿಗೆ ಎಷ್ಟು ಸಾಲಕೊಟ್ಟಿದ್ದೇವೆ, ಹಾಗೂ ಸದಸ್ಯರ ಸಂಖ್ಯೆಯೆಷ್ಟು, ಹರಿಜನ ಗಿರಿಜನರಿಗೆ ಎಷ್ಟು ಕೊಟ್ಟಿದ್ದೇವೆ ಎಂದು ಫಿಗರ್ ಸಿಕ್ಕುತ್ತಿಲ್ಲ. ಈ ಸಮಸ್ಯೆಯನ್ನು ಬಗೆಹರಿಸುವುದಕ್ಕಾಗಿ ಕಂಪ್ಯೂಟರ್ ಸಿಸ್ಟಮನ್ನು ಜಾರಿಗೆ ತರುತ್ತಿದ್ದೇವೆ. ಮತ್ತು ಈ ವಿಚಾರ ತಮಗೂ ಗೊತ್ತಿದೆ. ಈಗ ವ್ಯವಸಾಯಗಾರನಿಗೆ ವಿದ್ಯುಚ್ಛಕ್ತಿ ಸರಿಯಾಗಿ ಸಿಕ್ಕುತ್ತಿಲ್ಲ. ವಿದ್ಯುಚ್ಛಕ್ತಿ ಅಭಾವ ಇದೆ. ರೈತರು ನೀರನ್ನು ಪಡೆದುಕೊಳ್ಳುವುದಕ್ಕೆ ಅನುಕೂಲವಾಗಲಿ ಎಂದು ಸಾಲ ಕೊಡತಕ್ಕ ತೀರ್ಮಾನ ಮಾಡಿದ್ದೇವೆ. ಫಾರಂ ಫಾರೆಸ್ಟ್ರಿಗಾಗಿ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್ ಮೂಲಕ ಸಾಲಕೊಡತಕ್ಕ ವ್ಯವಸ್ಥೆ ಮಾಡಿದ್ದೇವೆ. ಮತ್ತು ಸ್ಟೋರೇಜ್ ಬ್ಯಾಂಕ್‌ಗಳು ಇಪ್ಪತ್ತು, ಇಪ್ಪತ್ತೈದು ಸಾವಿರ ಗ್ಯಾಲನ್‌ವರೆಗೆ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಮತ್ತು ಡ್ರಿಪ್‌ಇರ್ರಿಗೇಷನ್ ಆಗಿ ಸಾಲಕೊಡಲು ಪ್ರಾರಂಭ ಮಾಡಿದ್ದೇವೆ. ರೈತರಿಗೆ ಇದು ಅನುಕೂಲವಾಗುತ್ತದೆ. ಈ ಬ್ಯಾಂಕುಗಳಲ್ಲಿ ಮತ್ತು ಸಂಸ್ಥೆಗಳಲ್ಲಿ ಪಿ. ಎಲ್. ಡಿ. ಯಾಗಲೀ, ಪಿ. ಎ. ಸಿ. ಆಗಲೀ ಜಾಬ್‌ಚಾರ್ಟ್ ಮಾಡಿ ರೆಸ್ಪಾನ್ಸಿಬಲಿಟಿ ಫಿಕ್ಸ್ ಮಾಡಿ ಡಿಸ್‌ಮಿಸ್ ಮಾಡಿದ್ದಾರೆ. ಇದರ ಬಗ್ಗೆ ಯೂನಿಫಾರಂ ಜಾಬ್‌ಚಾರ್ಟ್ ಮಾಡಿ, ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ.

ಶ್ರೀ ಕೆ. ಹೆಚ್. ಪಾಟೀಲ್.—ರೆಗ್ಯುಲೇಟೆಡ್ ಮಾರ್ಕೆಟ್‌ನೊಳಗೆ ಬರತಕ್ಕಂಥ ರೈತರಿಂದ ಯಾವುದೇ ರೀತಿಯ ದಲ್ಲಾಳಿ ಫೀಯನ್ನು ವಸೂಲು ಮಾಡಬಾರದು. ಖರೀದಿದಾರರಿಂದ ವಸೂಲು ಮಾಡಿರಿ.

ಶ್ರೀ ಆರ್. ಎಲ್. ಜಾಲಪ್ಪ.—ಇದನ್ನು ನಾನಾಗಲೇ ಒಪ್ಪಿಕೊಂಡಿದ್ದೇನೆ, ಇದರ ಬಗ್ಗೆ ಅಮೆಂಡ್‌ಮೆಂಟ್ ಲಾ ಡಿಪಾರ್ಟ್‌ಮೆಂಟ್‌ನಲ್ಲಿ ಪೆಂಡಿಂಗ್ ಇದೆ. ಅಮೆಂಡ್‌ಮೆಂಟ್ ಜಾರಿಗೆ ಬಂದ ಮೇಲೆ, ರೈತರಿಂದ ಕಮಿಷನ್ ವಸೂಲಿ ಮಾಡಬೇಕಾಗಿಲ್ಲ. ಖರೀದಿದಾರರಿಂದ ಮಾಡಬೇಕೆಂಬ ಕ್ರಾಂತಿಕಾರಕವಾದ ಬದಲಾವಣೆಯನ್ನು ನಾವು ತರುತ್ತಿದ್ದೇವೆ.

ಶ್ರೀ ಬಿ. ಬಸವಲಿಂಗಪ್ಪ.—ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ಸೊಸೈಟಿಗಳಿವೆ. ಅದನ್ನು ಸೂಪರ್‌ಸೀಡ್ ಮಾಡಿ ಆರೆಂಟು ತಿಂಗಳಾಯಿತು. ಇಲ್ಲಿ ಇದುವರೆಗೂ ಚುನಾವಣೆ ನಡೆಸದೇ ಇರುವುದಕ್ಕೆ ಕಾರಣವೇನು ? ಯಾವ ಛಾರ್ಜಿನ ಮೇಲೆ ಇವುಗಳನ್ನು ಸೂಪರ್‌ಸೀಡ್ ಮಾಡಿದ್ದೀರಿ ?

ಶ್ರೀ ಆರ್. ಎಲ್. ಜಾಲಪ್ಪ.—ತಾವು ಹೇಳತಕ್ಕಂಥಾದ್ದು ಬ್ಯಾಟರಾಯನ ಪುರ ಸೊಸೈಟಿಗೆ ಸಂಬಂಧಪಟ್ಟಿದ್ದು. ೬೦ ಪರ್ಸೆಂಟ್ ರಿಕವರಿ ಮಾಡಿದರೆ ಚುನಾವಣೆ ಮಾಡುತ್ತೇವೆ.

ಶ್ರೀ ಕೆ. ಮಲ್ಲಪ್ಪ.—ಪ್ರಾರಂಭದಲ್ಲಿ ರೆಗ್ಯುಲೇಟೆಡ್ ಮಾರ್ಕೆಟ್‌ನಲ್ಲಿ ಮಾರ್ಕೆಟ್ ಸೆಸ್ ೨೫ ಪೈಸೆ ಇತ್ತು. ಅನಂತರ ಅದು ೫೦ ಪೈಸೆಯಾಯಿತು. ಈಗ ೨ ರೂಪಾಯಿಗಳು ಆಗಿದೆ. ಅದನ್ನು ೧ ರೂಪಾಯಿಗೆ ಇಳಿಸಲಾಗಿದೆ. ಮಾರ್ಕೆಟ್ ಸೆಸ್‌ನಿಂದ ಬರತಕ್ಕಂತಹ ಹಣವನ್ನು ಗ್ರಾಮೀಣ ರಸ್ತೆಗಳನ್ನು ಸುಧಾರಣೆ ಮಾಡುವುದಕ್ಕಾಗಿ ಉಪಯೋಗ ಮಾಡುತ್ತೇವೆಂದು ತಾವು ಹೇಳಿದ್ದಿರಿ. ಯಾವ ರೆಗ್ಯುಲೇಟೆಡ್ ಮಾರ್ಕೆಟ್‌ನಲ್ಲೂ ಇದುವರೆಗೂ ೧ ಕಿಮೀ. ರಸ್ತೆಯನ್ನು ಕೂಡ ನೀವು ರಿಪೇರಿ ಮಾಡಲಿಲ್ಲ. ಈ ಹಣವನ್ನು ನೀವು ಯಾವುದಕ್ಕಾಗಿ ಉಪಯೋಗ ಮಾಡುತ್ತೀರಿ ? ರಸ್ತೆಗಳನ್ನು ಮಾಡಲಿಕ್ಕೆ ಮಾನ್ಯ

ಸಚಿವರು ವ್ಯವಸ್ಥೆ ಮಾಡುತ್ತಾರೆಂದು ನಾನು ನಂಬುತ್ತೇನೆ. ಅನೇಕ ಸಂಘಸಂಸ್ಥೆಗಳಲ್ಲಿ ದುರುಪಯೋಗ ಪಡಿಸಿಕೊಂಡ ನೌಕರರ ಮೇಲೆ ಆಡಳಿತ ಮಂಡಳಿಯವರು ಒಂದು ಶಿಸ್ತಿನ ತುರ್ತು ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಪ್ರಾಸಿಕ್ಯೂಟರ್‌ರವರ ಎರವಲು ಸೇವೆಯನ್ನು ಪಡೆಯುವ ಪ್ರಯತ್ನ ಮಾಡುತ್ತೇವೆಂದು ಹೇಳಿದ್ದಿರಿ. ಆದರೆ, ತ್ವರಿತಗತಿಯಲ್ಲಿ ಈ ಕಾರ್ಯವಮಾಡಿದರೆ, ಸಹಕಾರ ಸಂಘಗಳಲ್ಲಿ ಆಗುವ ದುರುಪಯೋಗವನ್ನು ತಡೆಗಟ್ಟಲು ಸಾಧ್ಯ. ಈ ಬಗ್ಗೆ ಸಮಜಾಯಿಷಿಯನ್ನು ಸಂಬಂಧಪಟ್ಟ ಮಂತ್ರಿಗಳು ಕೊಡಬೇಕೆಂದು ತಮ್ಮ ಮೂಲಕ ನಾನು ಕೋರುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಅಧ್ಯಕ್ಷರೆ, ಈ ರಸ್ತೆ ಮುಂತಾದವುಗಳ ಬಗ್ಗೆ ಖರ್ಚು ಮಾಡಲು ಹಿಂದೆ ಈ ಒಂದು ವ್ಯವಸ್ಥೆ ಇತ್ತು. ಆದರೆ, ಕರ್ನಾಟಕ ಹೈಕೋರ್ಟಿನಲ್ಲಿ ಕೆಲವರು ವಾದ ಮಾಡಿದಾಗ ಕೋರ್ಟಿನವರು ನೀವು ನಿಮ್ಮ ಫಂಡಿನಲ್ಲಿ ರಸ್ತೆಮಾಡುಲು ಬರುವುದಿಲ್ಲವೆಂದು ಹೇಳಿದರು. ಮಾರ್ಕೆಟ್ ಯಾರ್ಡ್‌ನಲ್ಲಿ ಬೇಕಾದರೆ ರಿಪೇರಿ ಮಾಡಬಹುದು. ಹೊರಗಡೆ ರಸ್ತೆಗಳನ್ನು ತೆಗೆದುಕೊಳ್ಳುವುದಕ್ಕೆ ಹೈಕೋರ್ಟ್ ತೀರ್ಮಾನದ ಪ್ರಕಾರ ಬರುವುದಿಲ್ಲ. ದುರುಪಯೋಗ ಮಾಡಿದವರಿಗೆ ಪ್ರಾಸಿಕ್ಯೂಟ್‌ಮಾಡುತ್ತೇವೆಂದು ಹೇಳಿದ್ದೇವೆ. ನಾನು ಆ ಬಗ್ಗೆ ಬೇಗ ವ್ಯವಸ್ಥೆಮಾಡುವ ಭರವಸೆ ಕೊಡುತ್ತೇನೆ.

(ಅಧ್ಯಕ್ಷರು ಪೀಠವನ್ನಲಂಕರಿಸಿದರು.)

ಶ್ರೀ ವಿ.ಎಸ್. ಆಚಾರ್.—ಮಾನ್ಯ ಅಧ್ಯಕ್ಷರೆ, ಆಕ್ಟಿಗೆ ಅಮೆಂಡ್‌ಮೆಂಟ್ ಮಾಡುವುದಾಗಲಿ ಅಥವಾ ಕೋರ್ಟುಗಳನ್ನು ಮಾಡುವುದಾಗಲೀ ಎಜುಕೇಷನ್ ಪ್ರೋಗ್ರಾಂನ್ನು ಒಳ್ಳೆಯ ರೀತಿಯಲ್ಲಿ ತರುವುದಾಗಲೀ ಈ ತರಹ ಒಳ್ಳೆಯ ಕಾರ್ಯಕ್ರಮಗಳ ಬಗ್ಗೆ ಘೋಷಣೆ ಮಾಡಿದ್ದಾರೆ. ಇದರ ಬಗ್ಗೆ ಕೆಲವೊಂದು ಸ್ಪಷ್ಟೀಕರಣ ಕೋರಲು ಬಯಸುತ್ತೇನೆ. ಚುನಾವಣೆಯ ಸಂದರ್ಭದಲ್ಲಿ ಎಂ.ಡಿ.ಯವರನ್ನು ರೆಸ್ಪಾನ್ಸಿಬಲ್ಲಾಗಿ ಹೋಲ್ಡ್ ಮಾಡುತ್ತೇವೆ, ವೋಟರ್‌ಲೀಸ್ಟನ್ನು ಸರಿಯಾಗಿ ತಯಾರು ಮಾಡುತ್ತೇವೆಂದು ಹೇಳಿದ್ದೀರಿ. ಈ ಚುನಾವಣೆಗೆ ವೋಟು ಮಾಡುವ ಪ್ರತಿನಿಧಿಗಳು ಯಾರು ಎಂಬುವನ್ನು ಪೂರ್ವಭಾವಿಯಾಗಿ ನಿರ್ಧಾರವಾಗಬೇಕು. ಕೆಲವೊಂದು ಸಂದರ್ಭದಲ್ಲಿ ಚುನಾವಣೆ ದಿವಸ ಇನ್ನೊಂದು ಡೆಲಿಗೇಷನ್ ತಂದು, ಆಡಳಿತ ಮಂಡಲಿಯ ಅಧಿಕೃತ ನಿರ್ಣಯವಿಲ್ಲದೆ ಮಾಡುವಂಥಾದ್ದು ತಪ್ಪಬೇಕು. ಎರಡನೆಯದು, ಬೆಳೆಯ ವಿಮೆಯನ್ನು ತರುವುದಕ್ಕೆ ಕೇಂದ್ರಸರ್ಕಾರದವರು ಹೇಳಿದ್ದಾರೆ. ಆದರೆ, ಒಂದೊಂದು ಜಿಲ್ಲೆಯಲ್ಲಿ ಹತ್ತು ಲಕ್ಷ, ಇಪ್ಪತ್ತು ಲಕ್ಷ ಅನಾವಶ್ಯಕವಾಗಿ ರೈತರು ಬೆಳೆಯ ವಿಮೆಗೆ ಪ್ರೀಮಿಯ ಕೊಡುವಂತಹ ಒಂದು ಸಂದರ್ಭ ಬರುವುದಾದರೆ, ಕೇಂದ್ರಸರ್ಕಾರಕ್ಕೂ ಕೂಡ ಈ ಒಂದು ಮಾತನ್ನು ಹೇಳಿ. ಕೆಲವು ಜಿಲ್ಲೆಗಳಿಗೆ ಎಕ್ಷೆಂಷನ್ ಮಾಡಬೇಕಾದ ಅಗತ್ಯವಿದೆ. ಸಕ್ಕರೆ ಕಾರ್ಖಾನೆ ಕುರಿತು ಒಂದು ಮಾತು. ಇವತ್ತು ರಾಜ್ಯದಲ್ಲಿ ೧೪, ೧೫ ಸಕ್ಕರೆ ಕಾರ್ಖಾನೆಗಳು ನಷ್ಟದಲ್ಲಿವೆ, ಇದರಲ್ಲಿ ಕಬ್ಬಿನ ಬೆಲೆ ನಿರ್ಣಯಕ್ಕೆ ಬಹುಶಃ ಒಂದು ಮಿತಿ ಇರಬೇಕು. ಆದರೆ, ಕಬ್ಬಿನ ಬೆಳೆ ಬೆಳೆಸುವುದಕ್ಕೆ ಏನಾದರೂ ಉತ್ತೇಜಕವಾದ ಫೈನಲ್ ಪ್ರಾಜೆಕ್ಟ್ ಮಾಡಿ ಸಹಕಾರಿ ಇಲಾಖೆಗೆ ಮತ್ತು ಕೃಷಿ ಇಲಾಖೆಗೆ ನಿರ್ದೇಶನ ಕೊಡಿ. ಆ ರೀತಿ ಏನಾದರೂ ರೈತರಿಗೆ ಉತ್ತೇಜನ ಕೊಟ್ಟು ಅಗತ್ಯವಿರುವ ಹೆಚ್ಚು ಕಬ್ಬನ್ನು ಬೆಳೆಯುವುದಕ್ಕೆ ಸಹಾಯ ಮಾಡಬೇಕೆಂದು ನಾನು ಸೂಚನೆ ಮಾಡುತ್ತೇನೆ. ಮತ್ತೊಂದು ಎಂದರೆ, ಮಂಗಳೂರಿನ ಬ್ರಹ್ಮಾವರ ಕಾರ್ಖಾನೆಯಿಂದ ಇಂಪೋರ್ಟೆಡ್ ರಾಷುಗರ್ ನಮ್ಮ ದೇಶಕ್ಕೆ ಬರುತ್ತಾ ಇದೆ. ಒಂದಷ್ಟು ಪಾಲು ಕರ್ನಾಟಕಕ್ಕೂ ಬರುತ್ತಾ ಇದೆ. ಇದನ್ನು ದಯವಿಟ್ಟು ನಿಲ್ಲಿಸಬೇಕೆಂದು ಹೇಳುತ್ತೇನೆ. ಮಾನ್ಯ ಸಹಕಾರ ಸಚಿವರು ಮಾಡಿರುವ ಸಕ್ಕರೆ ಕಾರ್ಖಾನೆ ಸಾಯಬಾರದು. ಇದಕ್ಕಾಗಿ ವಾರಾಹಿ ಯೋಜನೆಯನ್ನು ಕೈಗೆತ್ತಿಕೊಳ್ಳುವ ಕೆಲಸವನ್ನು ನಮ್ಮ ಸಹಕಾರ ಸಚಿವರು ಮಾಡಬೇಕು. ೮ ಕೋಟಿ ರೂಪಾಯಿಗಳ ಯೋಜನೆ ಅದು, ನಿರ್ನಾಮವಾಗಬಾರದು. ಇದಕ್ಕೆ ತಾವು ಪ್ರಯತ್ನಿಸಬೇಕೆಂದು ಅಧ್ಯಕ್ಷರ ಮುಖಾಂತರ ಸೂಚನೆಯನ್ನು ಮಾಡುತ್ತಾ ಇದ್ದೇನೆ.

ಇನ್ನೊಂದು ಮಾತೆಂದರೆ, ಮೀನಿನ ಕ್ಷಾಮ ಬಂದಾಗ ನೂರು, ಇನ್ನೂರು ಹೀಗೆಲ್ಲಾ ಕೆಲವು ಡಿಸ್ಟ್ರೆಸ್ ರಿಲೀಫ್ ಫಂಡ್ ಎಂದು ಮೀನುಗಾರರಿಗೆ ಕೊಟ್ಟಿತ್ತು. ತೀರ ದುರ್ಬಲವರ್ಗದ ಜನ ಅವರು. ಇದುಇಲ್ಲದೆ, ಅವರು ಈಗ ಮತ್ತೆ ಬಂಡವಾಳಶಾಹಿಗಳ, ಸಾಹುಕಾರರ ಹತ್ತಿರ ಹೋಗಬೇಕಾದ ಪರಿಸ್ಥಿತಿ ಬಂದಿದೆ. ಇದನ್ನು ವಿನಾಯಿತಿ ಮಾಡಿ ಎಂದು ನಾನು ಸೂಚನೆ ಕೊಡುತ್ತೇನೆ. ಆದರ ಕುರಿತು ಮಾನ್ಯ ಸಚಿವರು ಹೇಳಬೇಕು. ಹಾಸನ ಜಿಲ್ಲಾ ಬ್ಯಾಂಕ್ ಲಿಕ್ವಿಡೇಟ್ ಮಾಡಬೇಕೆಂದು

ಇನ್ನೊಂದು ವಿಚಾರ ಹೇಳಿದರು. ದಯವಿಟ್ಟು ಮಾನ್ಯ ಸಚಿವರು ಯಾವುದೇ ಜಿಲ್ಲಾ ಬ್ಯಾಂಕುಗಳನ್ನು ಲಿಕ್ವಿಡೇಟ್ ಮಾಡುವ ಕೆಲಸಕ್ಕೆ ಕೈಹಾಕಬಾರದು. ಒಂದು ವೇಳೆ ಹಾಗೆ ಮಾಡಿದರೆ, ಈ ರೋಗ ಹಬ್ಬಿ, ಎಲ್ಲಾ ಜಿಲ್ಲಾ ಬ್ಯಾಂಕುಗಳನ್ನು ಲಿಕ್ವಿಡೇಟ್ ಮಾಡುವ ಹಂತಕ್ಕೆ ಬರಬಹುದು. ಇದು ಆಗದೇ ಇರಲಿ, ಇದು ರೀ ವರಟಲೈಸ್ ಆಗಬೇಕು.

ಶ್ರೀ ಆರ್.ಎಲ್. ಜಾಲಪ್ಪ.—ಒಂದು ಸೊಸೈಟಿಯಲ್ಲಿ ಇಬ್ಬಿಬ್ಬರು ಡೆಲಿಗೇಟ್ಸ್ ಓಟು ಮಾಡಲು ಬಂದರೆ, ನಾನೇನು ಮಾಡುವುದಕ್ಕಾಗುತ್ತದೆ ? ಕಾನೂನು ಪ್ರಕಾರ ಕ್ರಮ ಕೈಗೊಳ್ಳಬೇಕು, ಅಷ್ಟೇ How can I prevent it? ಆಮೇಲೆ, ಇನ್‌ಷ್ಯೂರೆನ್ಸ್ ಬಗೆಗಿನ ಅವರ ಫೀಲಿಂಗ್ಸನ್ನು ಕೇಂದ್ರ ಸರ್ಕಾರದ ಗಮನಕ್ಕೆ ತರುತ್ತೇನೆ. ಮಾನ್ಯ ಸದಸ್ಯರು ಸಕ್ಕರೆ ಕಾರ್ಖಾನೆ ಬಗ್ಗೆ ಹೇಳಿದರು. ಬೆಳೆ ಬೆಳೆಸುವುದಕ್ಕೆ ಏನಾದರೂ ಏರ್ಪಾಡು ಮಾಡಿ ಎಂದು. ತಮಗೆ ಗೊತ್ತಿದೆ. ಪಿಎಲ್‌ಡಿಬಿನಲ್ಲಿ ಸಾಲಕ್ಕೆ ಕೊರತೆಯಿಲ್ಲ. ಪಿಎಲ್‌ಡಿಬಿನಲ್ಲಿ ಪಂಪ್‌ಸೆಟ್ಸ್ ಬೇಕಾದರೆ ಕೊಡಿಸುತ್ತೇನೆ. ತಾವೆಲ್ಲಾ ಸ್ವಲ್ಪ ಓಡಾಡಿ, ಕಬ್ಬು ಬೆಳೆಯಲು ಏರ್ಪಾಡುಮಾಡಿ.

೧೨-೩೦ ಪಿ. ಎಂ.

ನಾನು ೧೨, ೧೩ ದಿವಸಗಳ ಹಿಂದೆ ಡೈರೆಕ್ಟರ್ ಜೊತೆಯಲ್ಲಿ ಮಾತನಾಡಿದ್ದೇನೆ. ಅವರು ರಾ ಸಕ್ಕರೆ ಕೊಟ್ಟರೆ ಅದನ್ನು ವೈಟ್ ಸಕ್ಕರೆ ಮಾಡಿಸುವುದಕ್ಕೆ ವ್ಯವಸ್ಥೆ ಮಾಡಿಸುತ್ತೇನೆ. ವರಾಹಿ ಯೋಜನೆಯನ್ನು ಮಾನ್ಯ ದೇವೇಗೌಡರ ಗಮನಕ್ಕೆ ತರುತ್ತೇನೆ. ಹಿಂದೆ ಸಾಲ ಕೊಟ್ಟಿದ್ದನ್ನು ವಜಾ ಮಾಡಿ ಎಕ್ಸೆಂಪಷನ್ ಕೊಡಿಯೆಂದು ಕೇಳಿದ್ದೀರಿ. ನಿಮ್ಮ ನಿಮ್ಮ ಬ್ಯಾಂಕುಗಳಲ್ಲಿ ಹಣವನ್ನು ಇಟ್ಟಿದ್ದರೆ ವಜಾ ಮಾಡಿಕೊಳ್ಳಿ. ಪುನಃ ನೀವು ಸಾಲ ಕೊಡುತ್ತೇವೆಂದು ಹೇಳುವುದಾದರೆ ಅದನ್ನು ನಾವು ಯೋಚನೆ ಮಾಡಬೇಕಾಗುತ್ತದೆ. ಇದನ್ನು ನಿಮಗೆ ಬಿಟ್ಟಿದ್ದೇನೆ. ಹಾಸನ ಜಿಲ್ಲೆಯ ಬ್ಯಾಂಕ್‌ನ್ನು ಲಿಕ್‌ವಿಡೇಟ್ ಮಾಡಬಾರದೆಂದು ಹೇಳುತ್ತಿದ್ದೀರಿ. ಅದನ್ನು ಚೇರ್‌ಮೇನ್ ಯಾರಿದ್ದಾರೋ, ಅವರಿಗೆ ಬಿಡುತ್ತೇವೆ, ಅವರೇ ನಡೆಸಲಿ.

ಶ್ರೀ ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ ನಮ್ಮ ಕ್ಷೇತ್ರದ ಸಹಕಾರ ಸಕ್ಕರೆ ಕಾರ್ಖಾನೆಯ ಬಗ್ಗೆ ಒಂದು ವಿಚಾರವನ್ನು ಕೇಳಬೇಕಾಗಿದೆ. ಈ ಸಹಕಾರ ಸಕ್ಕರೆ ಕಾರ್ಖಾನೆಯನ್ನು ಮುಚ್ಚಲಾಗಿದೆ. ಇದನ್ನು ತೆರೆದು ಅಲ್ಲಿರುವ ಸುಮಾರು ಆರು ಸಾವಿರ, ಏಳು ಸಾವಿರ ಕುಟುಂಬಗಳಿಗೆ ಅನುಕೂಲ ಮಾಡಿ ಕೊಡಬೇಕೆಂದು ಮೊದಲನೆಯದಾಗಿ ಕೇಳಿಕೊಳ್ಳುತ್ತೇನೆ. ಅಲ್ಲಿನ ಸಹಕಾರ ಸಕ್ಕರೆ ಕಾರ್ಖಾನೆಯನ್ನು ಇನ್ನು ೧೦, ೨೦ ದಿವಸಗಳಲ್ಲಿ ಅಥವಾ ಒಂದು ತಿಂಗಳಲ್ಲಿ ನಾನು ತೆರೆಯಿಸುತ್ತೇನೆಂದು ಕನ್ನಡ ಪತ್ರಿಕೆಯಲ್ಲಿ ಬಂದಿದೆ. ನನ್ನ ಬಗ್ಗೆ ತಪ್ಪು ಅಭಿಪ್ರಾಯ ಬರುವ ರೀತಿಯಲ್ಲಿ ಹೇಳಿಕೆಯನ್ನು ಕೊಟ್ಟಿದ್ದಾರೆ. ಅದನ್ನು ತೆರೆಯುತ್ತೀರೋ, ಇಲ್ಲವೋ ಎಂಬುದನ್ನು ತಿಳಿಸಿ. ರೈತರಿಗೆ ಆಗಿರತಕ್ಕ ತೊಂದರೆಯನ್ನು ನಿವಾರಿಸಿ ಅವರಿಗೆ ಕಬ್ಬನ್ನು ಅರೆಯುವುದಕ್ಕೆ ಅವಕಾಶ ಮಾಡಿಕೊಡುತ್ತೀರೋ, ಅರೆಯುವುದಕ್ಕೆ ಅವಕಾಶ ಮಾಡಿಕೊಟ್ಟರೆ ಅಲ್ಲಿನ ರೈತರಿಗೆ ಅನುಕೂಲವಾಗುತ್ತದೆ. ಆಲೆಮನೆ ಆಡಬೇಕಾದರೆ ವಿದ್ಯುಚ್ಛಕ್ತಿ ಇಲಾಖೆಯಿಂದ ನೊ ಅಬ್‌ಜಕ್ಷನ್ ಸರ್ಟಿಫಿಕೇಟನ್ನು ತೆಗೆದುಕೊಳ್ಳಬೇಕಾಗಿದೆ. ಆದರೆ ಈಗ ಸಕ್ಕರೆ ಕಾರ್ಖಾನೆಯಿಂದ ಪರವಾನಗಿಯನ್ನು ತೆಗೆದುಕೊಂಡು ಬನ್ನಿಯೆಂದು ಹೇಳುತ್ತಿದ್ದಾರೆ. ಈಗ ಸಕ್ಕರೆ ಕಾರ್ಖಾನೆ ಮುಚ್ಚಿ ಹೋಗಿರುತ್ತದೆ. ಇದನ್ನು ಆದಷ್ಟು ಬೇಗ ತೆರೆಯುವುದಕ್ಕೆ ವ್ಯವಸ್ಥೆ ಮಾಡಬೇಕು. ಇದರ ಬಗ್ಗೆ ಮಂತ್ರಿಗಳು ಏನು ಹೇಳುತ್ತಾರೆ ಎಂಬುದನ್ನು ತಿಳಿಯಬಯಸುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಅಧ್ಯಕ್ಷರೇ, ನಾನು ಆಗಲೇ ಗೌರಿಬಿದನೂರು ಸಕ್ಕರೆ ಕಾರ್ಖಾನೆಯ ಬಗ್ಗೆ ಹೇಳಿದ್ದೇನೆ. ನಾವು ಕಾರ್ಖಾನೆಯನ್ನು ನಡೆಸುವುದಕ್ಕೆ ತಯಾರಿದ್ದೇವೆ. ಅಲ್ಲಿ ಕಬ್ಬು ಅರೆಯುವ ಕಾರ್ಖಾನೆ ಇಲ್ಲದೆ ಇರುವುದರಿಂದ ನಾವು ಸುಮ್ಮನೆ ಹೇಳುವುದಕ್ಕಾಗುವುದಿಲ್ಲ. ಅದಕ್ಕೋಸ್ಕರ ಟೆಂಡರನ್ನು ಕರೆದಿದ್ದೇವೆ. ಮಾನ್ಯ ಸದಸ್ಯರು ತಮ್ಮ ಕ್ಷೇತ್ರದಲ್ಲಿ ತಪ್ಪು ಅಭಿಪ್ರಾಯ ಬರುವ ರೀತಿಯಲ್ಲಿ ಅಪಪ್ರಚಾರ ಮಾಡುತ್ತಿದ್ದಾರೆಂದು ಕೇಳಿದ್ದೇನೆ. ಅದಕ್ಕೆ ನಾನು ಏನೂ ಮಾಡುವುದಕ್ಕಾಗುವುದಿಲ್ಲ. ತಾವೆ ಹೋಗಿ ಅವರಿಗೆ ಹೇಳಿ. ಸರ್ಕಾರಕ್ಕೆ ನಾಲ್ಕೂವರೆ ಲಕ್ಷ ಕೊಡಬೇಕಾಗಿರುವುದನ್ನು ಅವರು ಏಕೆ ಕೊಟ್ಟಿಲ್ಲ ? ನಿಮ್ಮ ಹಿಂದೆ ಯಾರು ಡೈರೆಕ್ಟರ್ ಆಗಿದ್ದರೂ ಅವರೆ ನಿಮ್ಮನ್ನು ಬಯ್ದುಕೊಂಡು ತಿರುಗುತ್ತಿದ್ದಾರೆ. ಅವರ ಹೆಸರನ್ನು ನಾನು ಹೇಳುವುದಿಲ್ಲ. ಅವರೇ ಹೋಗಿ ಅಲ್ಲಿ

ಬೆಲ್ಲ ಅರೆಯುವುದಕ್ಕೆ ಪರ್‌ಮಿಷನ್ ಇಲ್ಲವೆಂದು ಹೇಳಿದ್ದಾರೆ. ಕಳೆದ ಸಾರಿ ಜಿಲ್ಲಾಧಿಕಾರಿಗಳಿಗೆ ಬರೆದೆ. ಈಗ ಪರ್‌ಮಿಷನ್ ಕೊಡುವಂತೆ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಚಂದ್ರಕಾಂತಾ ಗೊರಪ್ಪ ಬೆಲ್ಲದ್.—ಮಾನ್ಯ ಅಧ್ಯಕ್ಷರೇ, ಬಿ.ಎಸ್.ಸಿ. ಅಗ್ರಿಕಲ್ಚರಲ್ ಕೋರ್ಸ್ ಪದವೀಧರರಿಗೆ ಕೋ-ಆಪರೇಟಿವ್ ಸೊಸೈಟಿಗಳಲ್ಲಿ, ಅವರಿಗೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಂಡಿದ್ದೆ, ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ.

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಅಧ್ಯಕ್ಷರೇ, ಕ್ಷಮಿಸಬೇಕು, ನಿನ್ನೆ ಅದನ್ನು ನಾನು ಬರೆದುಕೊಂಡಿದ್ದೆ ನಮ್ಮ ಇಲಾಖೆಯಿಂದ ರಿಕ್ರೂಟ್‌ಮೆಂಟ್ ಮಾಡುತ್ತೇವೆ. ಅಲ್ಲಿ ಅವರಿಗೆ ಆದ್ಯತೆ ಕೊಡಬೇಕೆಂದು ಹೇಳಿದ್ದೇನೆ. ಕೆಪಿಎಸ್‌ಸಿಯವರು ಆ ರೀತಿ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದ್ದಾರೆ. ನಮ್ಮ ಇಲಾಖೆಯಲ್ಲಿ ರಿಕ್ರೂಟ್‌ಮೆಂಟ್ ಮಾಡಿದಾಗ ಅದರಲ್ಲಿ ಅವರಿಗೆ ಆದ್ಯತೆಯನ್ನು ಕೊಡುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸ್ವಾಮಿ, ಕೆ. ಎಚ್. ಪಾಟೀಲರು ಮಾತನಾಡುವಾಗ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಅವರ ವರದಿ ಏನು ಇದೆ ಅದನ್ನು ನಾವು ಸಂಪೂರ್ಣವಾಗಿ ಜಾರಿಗೆ ತರುತ್ತೇನೆ. ಎರಡನೆಯದಾಗಿ, ಗುಲ್ಬರ್ಗ ಕಾಟನ್ ಮಾರ್ಕೆಟ್ ವಿಷಯ ಬಹಳ ದಿವಸಗಳಿಂದ ಪೇಡಿಂಗ್ ಇದೆ. ಅದು ಅಲ್ಲಿಗೆ ನಿಂತುಹೋಗಿದೆ. ಮೂರನೆಯದಾಗಿ, ಕಳೆದ ಸಾರಿ ಕೂಡ ಈ ಸದನದಲ್ಲಿ ಹೇಳಿದ್ದೆ. ಗುರ್‌ಮಿಟ್‌ಕಲ್‌ನಲ್ಲಿ ಒಂದು ಸಬ್ ಮಾರ್ಕೆಟ್ ಇದೆ. ಮೂರು ವರ್ಷಗಳ ಹಿಂದೆ ಒಂದು ರೂಂನ್ನು ಅಲ್ಲಿ ಕಟ್ಟಿಸಿ ಅಲ್ಲಿಗೆ ಕೆಲಸವನ್ನು ನಿಲ್ಲಿಸಿಬಿಟ್ಟಿದ್ದಾರೆ. ಅದನ್ನು ಹೋದ ಸಲ, ಒಂದು ವರ್ಷದಲ್ಲಿ ಕಂಪ್ಲೀಟ್ ಮಾಡಿಕೊಡುತ್ತೇವೆಂದು ಹೇಳಿದ್ದೀರಿ. ಅದನ್ನು ಕೂಡಾ ಮಾಡಿಲ್ಲ. ಈ ಮೂರು ಪ್ರಶ್ನೆಗಳಿಗೂ ತಾವು ಉತ್ತರ ಕೊಡಬೇಕು. ಅನೇಕ ಕಡೆಗಳಲ್ಲಿ ಅಂದರೆ ನಿಮ್ಮ ಜಿಲ್ಲಾ ಕೋಆಪರೇಟಿವ್ ಬ್ಯಾಂಕ್ ಮತ್ತು ಪಿ.ಎಲ್.ಡಿ. ಬ್ಯಾಂಕ್‌ಗಳಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ ಜನರಿಗೆ ಪ್ರಾತಿನಿಧ್ಯ ಕೊಡುವುದಕ್ಕೆ ಒಬ್ಬ ಡೈರೆಕ್ಟರ್‌ರನ್ನಾದರೂ ನೇಮಕ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ? ಸರ್ಕಾರದಿಂದ ನೇಮಕ ಮಾಡುವಾಗ ಈ ಬಗ್ಗೆ ಚಿಂತನೆ ಮಾಡುತ್ತೀರಾ ?

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಅಧ್ಯಕ್ಷರೇ, ಹರಿಜನರಿಗೆ ಒಂದು ಸೀಟು, ಹೆಣ್ಣು ಮಕ್ಕಳಿಗೆ ಒಂದು ಸೀಟು ಹೀಗೆ ಪ್ರೈಮರಿ ಲೆವಲಿನಲ್ಲಿ ಕೊಡಬೇಕೆಂದು ಹೇಳಿದ್ದೇನೆ. ಜಿಲ್ಲಾ ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ ಒಬ್ಬ ಹಿಂದುಳಿದ ವರ್ಗದವರಿಗೆ ಮತ್ತು ಹರಿಜನರಿಗೆ ಕೊಡಬೇಕೆಂದು ಹೇಳಿದ್ದೇನೆ.

ಶ್ರೀಮತಿ ಲೀಲಾವತಿ ಆರ್. ಪ್ರಸಾದ್.—ಮಾನ್ಯ ಅಧ್ಯಕ್ಷರೇ, ನಾಲ್ಕು ಜನರ ಪೈಕಿ ಒಂದು ಸೀಟನ್ನು ಹೆಣ್ಣು ಮಕ್ಕಳಿಗೆ ಕೊಡಬೇಕೆಂದು ಮಾನ್ಯ ಮಂತ್ರಿಗಳು ಹೇಳಬೇಕು.

ಶ್ರೀ ಆರ್. ಎಲ್. ಜಾಲಪ್ಪ.—ಬೀದರ್‌ನಲ್ಲಿ ಈಗಾಗಲೇ ಸೊಸೈಟಿಯನ್ನು ಮಾಡಿದ್ದೇವೆ. ಅಲ್ಲಿ ಬರೀ ಹೆಣ್ಣು ಮಕ್ಕಳ ಆಡಳಿತವನ್ನು ವಹಿಸಿಕೊಂಡಿದ್ದಾರೆ. ಇನ್ನು ಮಾನ್ಯ ಕೆ. ಎಚ್. ಪಾಟೀಲರ ವರದಿ ಏನು ಇದೆ ಅದನ್ನು ಪೂರ್ತಿ ಅಡಾಪ್ಟ್ ಮಾಡುತ್ತೇನೆ. ತಾವುಗಳು ಇನ್ನೂ ಒಳ್ಳೆಯ ಸಲಹೆಯನ್ನು ಕೊಟ್ಟರೆ ಅವನ್ನು ಕೂಡಾ ತೆಗೆದುಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರ ವರದಿಯನ್ನು ಅನುಷ್ಠಾನಕ್ಕೆ ತರುವುದರಲ್ಲಿ ಏನು ತೊಂದರೆ ಇದೆ ಎಂಬುದನ್ನು ಸ್ಪಡಿ ಮಾಡಬೇಕು. ಮಾನ್ಯ ಸದಸ್ಯರು ಅದರಲ್ಲಿ ಸದಸ್ಯರಾಗಿದ್ದಾರೆ. ಇದನ್ನು ಜಾರಿಗೆ ತರುವುದರಲ್ಲಿ ಏನಾದರೂ ತೊಂದರೆ ಇದ್ದರೆ ಅಥವಾ ಕ್ಯಾಬಿನೆಟ್‌ನಲ್ಲಿ ಇದಕ್ಕೆ ತೊಂದರೆ ಕೊಡುವುದಾದರೆ ಅದನ್ನು ಹೇಳಿ ?

ಶ್ರೀ ಆರ್. ಎಲ್. ಜಾಲಪ್ಪ.—ಕ್ಯಾಬಿನೆಟ್‌ನಲ್ಲಿ ಏನೂ ತೊಂದರೆ ಇಲ್ಲ. ಸಂಪೂರ್ಣ ಅಧಿಕಾರವನ್ನು ನಮಗೆ ಕೊಟ್ಟಿದ್ದಾರೆ. ಅದಕ್ಕೆ ನಾವೇ ರಾಜರು.

ಶ್ರೀ ಎಂ. ವೀರಪ್ಪ ಮೊಯಿಲಿ.—ಕ್ಯಾಬಿನೆಟ್‌ನಲ್ಲಿ ನೀವು ಕೆಲಸ ಮಾಡುತ್ತಿಲ್ಲವೆಂದು ಕಾಣಿಸುತ್ತದೆ. ನಮಗೆ ನಾವೇ ರಾಜನೆಂದು ಹೇಳಿದ್ದೀರಿ. ನಿಮ್ಮ ನಿಮ್ಮ ಇಲಾಖೆ, ನಿಮ್ಮ ನಿಮ್ಮ ಸಾಮ್ರಾಜ್ಯ ಇದ್ದರೆ ಅದನ್ನು ಹೇಳಿಬಿಡಿ.

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಸದಸ್ಯರಾದ ದೇರಪ್ಪ ಮೊಯಿಲಿಯವರು ಎಲ್ಲೆಲ್ಲೋ ಹೋಗುತ್ತಿದ್ದಾರೆ. ಏನಾದರೂ ಅಡ್ಡಿ ಇದೆಯೋ ಎಂದು ಕೇಳುತ್ತಿದ್ದಾರೆ, ನಾನು ಹೇಳುವುದು ನಮ್ಮ ಕ್ಯಾಬಿನೆಟ್‌ನಲ್ಲಿ ನಮಗೆ ಪೂರ್ಣ ಅಧಿಕಾರವನ್ನು ಕೊಟ್ಟಿದ್ದಾರೆ, ನಮ್ಮ ನಮ್ಮಲ್ಲಿ ಯಾವುದೇ ಭಿನ್ನಾಭಿಪ್ರಾಯ, ಅಡೆ ತಡೆಗಳು ಇಲ್ಲ. ಮಾನ್ಯ ಸದಸ್ಯರಾದ ಖರ್ಗೆಯವರು ಗುರ್‌ಮಿಟ್‌ಕಲ್ ವಿಚಾರದಲ್ಲಿ ಒಂದು ಪ್ರಶ್ನೆಯನ್ನು ಕೇಳಿದ್ದಾರೆ. ಅದಕ್ಕೆ ಸಂಬಂಧಪಟ್ಟ ಪೂರ್ಣ ವಿವರ ಈಗ ನನ್ನಲ್ಲಿಲ್ಲ. ಗುರ್‌ಮಿಟ್‌ಕಲ್ ವಿಚಾರದಲ್ಲಿ ನಾನು ಹಿಂದೆ ಹೇಳಿದ್ದೆ. ಈಗ ಆ ಕೆಲಸವನ್ನು ಮಾಡಿಸುತ್ತೇನೆ.

ಶ್ರೀ ಕೆ. ಎಚ್. ಪಾಟೀಲ್.—ಕೋ-ಆಪರೇಟಿವ್ ಸಂಘಗಳಲ್ಲಿ ಕೆಲಸ ಮಾಡುವಂತಹ ನೌಕರರನ್ನು ಸರ್ಕಾರಿ ನೌಕರರೆಂದು ಪರಿಗಣಿಸಿದ್ದೀರಿ ಆದರೆ ಅವರುಗಳಿಗೆ ಯಾವುದೇ ರೀತಿಯ ಭಡ್ತಿ ಇಲ್ಲಿಯವರೆಗೆ ಅವರಿಗೆ ಸಿಕ್ಕಿಲ್ಲ. ಅದನ್ನು ಯಾವಾಗ ಕೊಡುತ್ತೀರಿ ಎನ್ನುವುದನ್ನು ಖಚಿತಪಡಿಸಬೇಕು ?

ಶ್ರೀ ಆರ್. ಎಲ್. ಜಾಲಪ್ಪ.— ಸರ್ಕಾರಿ ನೌಕರರುಗಳೆಂದು ಅವರನ್ನು ಈಗಾಗಲೇ ಪರಿಗಣಿಸಿದ್ದೇವೆ. ಅವರುಗಳಿಗೆ ಭಡ್ತಿ ಕೊಡುವ ಬಗ್ಗೆ ಯೋಚನೆ ಮಾಡುತ್ತಿದ್ದೇವೆ.

ಶ್ರೀ ಬಿ. ವಿ. ತುಂಗಳ್.—ಎಷ್ಟೋ ಸಹಕಾರಿ ಸಂಘಗಳಲ್ಲಿ ಲಕ್ಷಾಂತರ ರೂಪಾಯಿಗಳನ್ನು ಲಪಟಾಯಿಸಿದವರನ್ನು ಜಾಮೀನುಗಳ ಮೇಲೆ ಹಿಡುತ್ತಿದ್ದಾರೆ. ಅಂತಹವರಿಗೆ ಉಗ್ರವಾದ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಕಾನೂನಿನಲ್ಲಿ ಏನಾದರೂ ಒಂದು ತಿದ್ದುಪಡಿಯನ್ನು ತರುತ್ತೀರಾ ಹೇಗೆ ? ಎರಡನೆಯದಾಗಿ, ಸಕ್ಕರೆ ಕಾರ್ಖಾನೆಗಳು ಮತ್ತು ಸ್ಪಿನ್ನಿಂಗ್ ಮಿಲ್‌ಗಳನ್ನು ಸಹಕಾರಿ ಕ್ಷೇತ್ರದಲ್ಲಿ ಪ್ರಾರಂಭ ಮಾಡುತ್ತಿದ್ದೀರೆಂದು ತಿಳಿದು ಬಂದಿದೆ. ಅದಕ್ಕಾಗಿ ತಾವು ಸ್ಪಷ್ಟೀಕರಣವನ್ನು ಕೊಡಬೇಕು.

ಶ್ರೀ ಆರ್. ಎಲ್. ಜಾಲಪ್ಪ.—ಅಧ್ಯಕ್ಷರೇ, ಮಿಸ್ ಅಪ್ರೊಪ್ರಿಯೇಷನ್ ಮಾಡಿದವರ ಬಗ್ಗೆ ಇಂಡಿಯನ್ ಪೀನಲ್ ಕೋಡ್ ಪ್ರಕಾರ ಕ್ರಿಮಿನಲ್ ಕೇಸ್‌ಗಳನ್ನು ಹಾಕುತ್ತೇವೆ ಕೋರ್ಟಿನಲ್ಲಿ ಇರುವಂತಹ ಸೌಲಭ್ಯಗಳಿಂದ ಜಾಮೀನಿನ ಮೇಲೆ ಅವರು ಹೊರಗೆ ಬರುತ್ತಾರೆ ಅದರ ಮೇಲೆ ನಾವು ಕಾನೂನನ್ನು ಅಮೆಂಡ್‌ಮೆಂಟ್ ಮಾಡಿದರೆ ಅದರ ಮೇಲೆ ಪರಿಣಾಮವಾಗುವುದಿಲ್ಲ, ಇನ್ನು ಎರಡನೆಯದಾಗಿ, ಈಗ ನಡೆಯುತ್ತಿರುವ ಸಕ್ಕರೆ ಕಾರ್ಖಾನೆಗಳು ಲುಕ್ಸಾನಿನಲ್ಲಿ ನಡೆಯುತ್ತಿವೆ. ಈ ಫ್ಯಾಕ್ಟರಿಗಳಲ್ಲಿ ೫ ವರ್ಷಗಳ ಕಾಲ ಎಕ್ಸೈಸ್ ಲೆವಿ ಕನ್‌ಸೆಷನ್ ಇರುತ್ತದೆ. ಈಗ ಎಲ್ಲಿ ಕಬ್ಬು ಬೆಳೆ ಜಾಸ್ತಿ ಇದೆಯೋ ಅಂತಹ ಕಡೆ ಫ್ಯಾಕ್ಟರಿಯನ್ನು ಮಾಡಲೇ ಬೇಕಾಗುತ್ತದೆ. ಬೀದರ್‌ನಲ್ಲಿ ಕಾರಂಜಾ ಪ್ರಾಜೆಕ್ಟ್ ಇರುವುದರಿಂದ ಕಬ್ಬು ಜಾಸ್ತಿ ಸಿಗುತ್ತದೆ. ಬೆಳಗಾಂ, ಧಾರವಾಡ, ಬಿಜಾಪುರ ಮುಂತಾದ ಕಡೆ ಕಬ್ಬು ಬೆಳೆಯುವುದಕ್ಕೆ ಅವಕಾಶ ಇದೆ. ಅಂತಹ ಕಡೆ ಫ್ಯಾಕ್ಟರಿಗಳನ್ನು ಸ್ಥಾಪಿಸುವ ಕಾರ್ಯವನ್ನು ನಿಲ್ಲಿಸುವುದಕ್ಕಾಗುವುದಿಲ್ಲವೆಂದು ಹೇಳುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸದಸ್ಯರಾದ ಬಾಬುರೆಡ್ಡಿಯವರು ನನ್ನ ಪ್ರಶ್ನೆಯನ್ನೇ ಕೇಳಿದ್ದಾರೆಂದು ನನ್ನ ಭಾವನೆ. ಅಪರಾತಪರವಾಗಿ ಸೊಸೈಟಿಗಳಲ್ಲಿ ಹಣ ಅಥವಾ ಭತ್ತವನ್ನು ಪರ್‌ಚೇಸಿಂಗ್ ಪಾಯಿಂಟ್‌ಗಳ ಮೂಲಕ ದುರುಪಯೋಗ ಮಾಡಿಕೊಂಡಿದ್ದಾರೆ ಎಲ್ಲಾ ಹಣವನ್ನು ತಿಂದು ಹಾಕಿದ್ದಾರೆ, ಈ ತರಹ ನಮ್ಮ ಸೊರಬಾ ತಾಲ್ಲೂಕಿನಲ್ಲೂ ನಡೆದಿದೆ, ನಮ್ಮ ಕಾಲದಲ್ಲೂ ನಡೆದಿತ್ತು ಈಗಲೂ ನಡೆಯುತ್ತಿದೆ. ಹಣವನ್ನು ತಿಂದು ಹಾಕಿದವರಿಂದ ವಸೂಲಿ ಮಾಡುವುದಕ್ಕೆ ಯಾವುದೇ ಕಾರ್ಯಕ್ರಮವನ್ನು ತಾವು ತೆಗೆದುಕೊಂಡಿಲ್ಲ ಇಡೀ ಕರ್ನಾಟಕ ರಾಜ್ಯದಲ್ಲಿ, ಪರ್‌ಚೇಸಿಂಗ್ ಪಾಯಿಂಟ್‌ಗಳಲ್ಲಿ ಹಣ ದುರುಪಯೋಗ ಮಾಡಿರತಕ್ಕ ಜನ ಇದ್ದಾರೆ. ಇಂತಹವರು ಯಾವುದೇ ಪಕ್ಷದವರಾಗಿರಲಿ ಅಂತವರಿಗೆ ಸರಿಯಾಗಿ ಶಿಕ್ಷೆಯನ್ನು ವಿಧಿಸಬೇಕು. ಇಲ್ಲದಿದ್ದರೆ ಅವರು ಹೀಗೆಯೇ ಹಣವನ್ನು ತಿಂದು ಹಾಕುತ್ತಲೇ ಇರುತ್ತಾರೆ.

ಶ್ರೀ ಆರ್. ಎಲ್. ಜಾಲಪ್ಪ.—ಅಧ್ಯಕ್ಷರೇ, ಎಲ್ಲಿ ಈ ತರಹ ಅಪರಾತಪರ ಆಗಿದೆ, ಅಂಥದ್ದು ನಮ್ಮ ಗಮನಕ್ಕೆ ಬಂದ ತಕ್ಷಣ ಅಂಥವರ ಆಸ್ತಿಯನ್ನು ನಾವು ಅಟ್ಯಾಚ್ ಮಾಡಿಸಿದ್ದೇವೆ. ಸ್ಪೆಸಿಫಿಕ್ ಆಗಿ ಎಲ್ಲಿ ಆ ತರಹ ನಡೆದಿದೆ ಎಂಬುದನ್ನು ತಿಳಿಸಿದರೆ ತಕ್ಷಣ ನಾವು ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಬಂಗಾರಪ್ಪ.—ತಾವು ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನ ಅಧ್ಯಕ್ಷರು ಆಗಿದ್ದವರು. ಎಲ್ಲಿ ಹಣ ಅನ್ಯಾಯವಾಗಿದೆ ಎಂಬುದು ತಮಗೂ ಗೊತ್ತಿದೆ. ನಮ್ಮ ಸೊರಬಾ ತಾಲ್ಲೂಕಿನಲ್ಲೂ ಈ ತರಹ ಅನ್ಯಾಯಗಳು ನಡೆದಿವೆ. ಸರ್ಕಾರವು ಕೆಲವು ಡೈರೆಕ್ಟರುಗಳನ್ನು ಬ್ಯಾಂಕುಗಳಿಗೆ ನಾಮಿನೇಟ್

ಮಾಡಿತ್ತು. ಈ ಡೈರೆಕ್ಟರುಗಳಲ್ಲಿ ಕೆಲವರು ಬಹಳ ಒಳ್ಳೆಯವರೂ ಇದ್ದಾರೆ. ಸರ್ಕಾರದ ನೋಟಿಫಿಕೇಷನ್ ಪ್ರಕಾರ ಎಲ್ಲಾ ಡೈರೆಕ್ಟರ್‌ಗಳು ಮತ್ತು ಅಧ್ಯಕ್ಷರುಗಳ ಆಸ್ತಿಯ ವಿವರಗಳನ್ನು ಪಡೆದುಕೊಂಡಿದ್ದಾರೆ. ವಿನಾಕಾರಣ ಕೆಲವು ನಿರಪರಾಧಿ ಡೈರೆಕ್ಟರುಗಳ ಮೇಲೆ ನಿಮ್ಮ ಸರ್ಕಾರದವರು ತೊಂದರೆ ಮಾಡುತ್ತಿದ್ದಾರೆ. ಡೈರೆಕ್ಟರುಗಳನ್ನು ನಮ್ಮ ಸರ್ಕಾರ ಇದ್ದಾಗ ನಾವು ನಾಮಿನೇಟ್ ಮಾಡಿದ್ದೆವು. ನಿಮ್ಮ ಸರ್ಕಾರ ಬಂದ ಮೇಲೆ ನೀವು ಡೈರೆಕ್ಟರುಗಳನ್ನು ನೇಮಕ ಮಾಡಿದ್ದೀರಿ. ಆದರೆ ಇಂತಹ ನಿರಪರಾಧಿ ಡೈರೆಕ್ಟರುಗಳ ಮೇಲೆ ನೀವು ತೊಂದರೆಯನ್ನು ಕೊಡಬೇಡಿ.

ಶ್ರೀ ಆರ್. ಎಲ್. ಜಾಲಪ್ಪ —ಅಧ್ಯಕ್ಷರೇ, ಇದು ಬಹಳ ಕ್ಲಿಷ್ಟಕರವಾದ ಸಮಸ್ಯೆ. ಬೋರ್ಡ್ ಆಫ್ ಡೈರೆಕ್ಟರುಗಳನ್ನು ನಾಮಿನೇಟ್ ಮಾಡುತ್ತೇವೆ, ಕೆಲವು ಡೈರೆಕ್ಟರು ಎಲೆಕ್ಟ್ ಆಗಿಯೂ ಬರುತ್ತಾರೆ, ನಮ್ಮ ಅಧಿಕಾರಿಗಳು ಬ್ಯಾಂಕಿನಲ್ಲಿ ಇರುತ್ತಾರೆ, ಮ್ಯಾನೇಜಿಂಗ್ ಡೈರೆಕ್ಟರೂ ಇರುತ್ತಾರೆ, ಸೆಕ್ರೆಟರಿಯೂ ಸಹ ಇರುತ್ತಾರೆ. ಬ್ಯಾಂಕ್ ಮೀಟಿಂಗ್‌ನಲ್ಲಿ ಏನು ಆಗುತ್ತದೆ ಎನ್ನುವುದು ಕೆಲವು ಡೈರೆಕ್ಟರುಗಳು ತಿಳಿದುಕೊಳ್ಳುವುದಕ್ಕೆ ಹೋಗುತ್ತಿರಲಿಲ್ಲ. ಆದುದರಿಂದ ಅವರಿಗೂ ಜವಾಬ್ದಾರಿ ಬರಲೆಂದು, ಇತ್ತೀಚಿಗೆ ಆಕ್ಟನ್ನು ಅಮೆಂಡ್‌ಮೆಂಟ್ ಮಾಡಿ ಇವರುಗಳನ್ನೂ ಇನ್‌ವಾಲ್ವ್ ಮಾಡಿದ್ದೇವೆ. ಈಗ ಇದು ಕೋರ್ಟಿಗೆ ಹೋಗಿದೆ. ಇನ್ನೇನು ತೀರ್ಮಾನ ಬರಬಹುದು. ಆಗ ಅದರ ಬಗ್ಗೆ ನೋಡೋಣ. ಬರೀ ಕಾಫಿ ತಿಂಡಿಯನ್ನು ಮೀಟಿಂಗ್‌ನಲ್ಲಿ ತಿಂದು ಯಾರೋ ಕೈ ಎತ್ತಿ ಎಂದಾಗ ಕೈಯನ್ನು ಎತ್ತಿ ಹೋಗುವ ಹಾಗಿಲ್ಲ. ಆದುದರಿಂದ ಅವರುಗಳ ಆಸ್ತಿಪಾಸ್ತಿಗಳ ವಿವರಗಳನ್ನೂ ನಾವು ತರಿಸಿಕೊಂಡಿದ್ದೇವೆ ಅಷ್ಟೆ ಹೊರತು ಅವರುಗಳಿಗೆ ತೊಂದರೆ ಕೊಡುವ ಉದ್ದೇಶ ಸರ್ಕಾರಕ್ಕಿಲ್ಲ. ಮೀಟಿಂಗ್‌ನಲ್ಲಿ ಆಗುವ ನಿರ್ಣಯಗಳಿಗೆ ಅಧಿಕಾರಿಗಳು ಸೇರಿಕೊಂಡು ಎಲ್ಲರು ಜವಾಬ್ದಾರರಾಗಿರುತ್ತಾರೆ.

ಶ್ರೀ ಎಸ್. ಬಂಗಾರಪ್ಪ.— ಒಟ್ಟಿನಲ್ಲಿ ನಿರಪರಾಧಿಗಳಾದ ಡೈರೆಕ್ಟರುಗಳ ಮೇಲೆ ಏನು ಅನ್ಯಾಯವಾಗದ ರೀತಿಯಲ್ಲಿ ತಾವು ಮಾಡಬೇಕು. ಅವರು ಕೇವಲ ೨ ಅಥವಾ ೩ ಎಕರೆ ಜಮೀನುಗಳನ್ನು ಇಟ್ಟುಕೊಂಡಿರುವವರು ಇರಬಹುದು ಅವರ ಮೇಲೆ ಕ್ರಮ ತೆಗೆದುಕೊಳ್ಳುವುದು ಸರಿಯಲ್ಲ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ.—

"೩೧-೩-೧೯೮೬ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಯ ಸಂಖ್ಯೆ : ೫೫ ಮತ್ತು ೫೬ಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗನ್ನು ಮಂಜೂರು ಮಾಡಬೇಕು."

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಯನ್ನು ಮಂಜೂರು ಮಾಡಲಾಯಿತು.

(ಅಧ್ಯಕ್ಷರ ಅಪ್ಪಣೆಯ ಮೇರೆಗೆ ಬೇಡಿಕೆಯ ಪಟ್ಟಿಯನ್ನು ಕೆಳಗೆ ನಮೂದಿಸಲಾಗಿದೆ) —

ಅಭಿಯಾಚನೆ ಕ್ರಮಾಂಕ ೫೫- ಸಹಕಾರ (ಕ್ರಮಪಡಿಸಿದ ಮಾರುಕಟ್ಟೆಗಳ ಹೊರತು)

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೬ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಹಕಾರಕ್ಕೆ (ಕ್ರಮಪಡಿಸಿದ ಮಾರುಕಟ್ಟೆಗಳ ಹೊರತು) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೪೫,೦೮,೬೪,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧೩,೭೪,೯೬,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ಮಂಡಿಸಲು ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ ೫೬-ಕ್ರಮಪಡಿಸಿದ ಮಾರುಕಟ್ಟೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೬ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕ್ರಮಪಡಿಸಿದ ಮಾರುಕಟ್ಟೆಗಳಿಗೆ, ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೫,೮೧,೨೮,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

(ii) Discussion on Demands for Grants for 1985-86

DEMANDS No. 57 Rural Water Supply & Sanitation
58 Community Development
59 I. R. D. P.
60 Rural Employment Programme
54 Wakfs

SRI ABDUL NAZEER SAB (Minister for Rural Development & Panchayath Raj).—Sir, I beg to move the following Demands.

ಅಭಿಯಾಚನೆ ಕ್ರಮಾಂಕ 57—ಗ್ರಾಮಾಂತರ ನೀರು ಸರಬರಾಜು ಮತ್ತು ನೈರ್ಮಲ್ಯ

ಶ್ರೀ ಅಬ್ದುಲ್ ನಜೀರ್‌ಸಾಬ್.—ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೬ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಗ್ರಾಮಾಂತರ ನೀರು ಸರಬರಾಜು ಮತ್ತು ನೈರ್ಮಲ್ಯಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೭೪,೭೪,೫೫,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 58—ಸಾಮುದಾಯಿಕ ಅಭಿವೃದ್ಧಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೬ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಾಮುದಾಯಿಕ ಅಭಿವೃದ್ಧಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೮,೯೪,೪೪,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧,[illegible]೦,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 59 ಗ್ರಾಮಾಂತರ ಸಂಘಟನಾ ಅಭಿವೃದ್ಧಿ ಯೋಜನೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೬ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಗ್ರಾಮಾಂತರ ಸಂಘಟನಾ ಅಭಿವೃದ್ಧಿ ಯೋಜನೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೪೨,೪೩,೭೦,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 60 ಗ್ರಾಮೀಣ ಉದ್ಯೋಗ ಯೋಜನೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೬ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸರ್ಕಾರಕ್ಕೆ ಗ್ರಾಮೀಣ ಉದ್ಯೋಗ ಯೋಜನೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ರಾಜಸ್ವ ಖಾತೆಯಲ್ಲಿ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ. -

ಅಭಿಯಾಚನೆ ಕ್ರಮಾಂಕ 54 ವಕ್ಫ್

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೬ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಕ್ಫ್‌ಗೆ, ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೬೪,೦೦,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಧ್ಯಕ್ಷರು.—ಬೇಡಿಕೆಗಳನ್ನು ಮಂಡಿಸಲಾಯಿತು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅಧ್ಯಕ್ಷರೇ, ಈಗಾಗಲೇ ಇದನ್ನು ಮಂಡಿಸುವವರು ಎರಡು ಗಂಟೆಗಳ ಹೊತ್ತು ತೆಗೆದುಕೊಂಡಿದ್ದಾರೆ. ಮುಖ್ಯವಾದ ವಿಷಯದ ಮೇಲೆ ನಾವುಗಳು ಮಾತನಾಡಬೇಕಾಗಿದೆ. ನಮಗೆ ಮಾತನಾಡಲು ಎಷ್ಟು ದಿವಸ ಕೊಡುತ್ತೀರಿ ?

ಅಧ್ಯಕ್ಷರು.—ನಿಮಗೆ ೧೫೦ ನಿಮಿಷಗಳನ್ನು ಕೊಡುತ್ತೇನೆ.

† ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೇ, ಈ ದಿವಸ ಸದನದಲ್ಲಿ ಗ್ರಾಮೀಣ ಅಭಿವೃದ್ಧಿ ಸಚಿವರು ಮಾಡಿಸಿರತಕ್ಕಂತಹ, ೫೮—೫೯—೬೦ ಮತ್ತು ೫೪, ಈ ಬೇಡಿಕೆಗಳ ಬಗ್ಗೆ ಅನೇಕ ಕಾರಣಗಳಿಗಾಗಿ, ಅನೇಕ ಸಿದ್ಧಾಂತಗಳ ಮೇಲೆ, ಹೆಚ್ಚು ಕಡಿಮೆ ನಾನು ಇವನ್ನು ವಿರೋಧಿಸುತ್ತಾ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಸನ್ಮಾನ್ಯ ಅಧ್ಯಕ್ಷರೇ, ನಮ್ಮ ದೇಶ, ಹಳ್ಳಿಗಳಿಂದ, ಗ್ರಾಮಗಳಿಂದ ಕೂಡಿರತಕ್ಕಂತಹ ದೇಶ. ಮಹಾತ್ಮಾ ಗಾಂಧೀಜಿಯವರು ಸ್ವರಾಜ್ಯ ಸಿಕ್ಕಿದ ಕೂಡಲೇ ಹೇಳಿದ ಮಾತು—"ಈ ದೇಶದಲ್ಲಿ ೭ ಲಕ್ಷಕ್ಕೂ ಮಿಕ್ಕಿದ ಹಳ್ಳಿಗಳು ಇವೆ. ಆ ಹಳ್ಳಿಗಳ ಉದ್ಧಾರವಾಗಬೇಕು, ಅವುಗಳ ಅಭಿವೃದ್ಧಿಯಾಗಬೇಕು, ಹಳ್ಳಿಯ ಜನರು ಮೇಲೆ ಬರಬೇಕು. ಅಲ್ಲಿಯ ಜನರ ಪ್ರಗತಿಯಾಗಬೇಕು, ಹಾಗಿದ್ದರೆ ಮಾತ್ರ ಈ ದೇಶ ಉದ್ಧಾರ ಆದೀತು, ಸ್ವರಾಜ್ಯ ಸಿಕ್ಕಿದ್ದಕ್ಕೆ ಸಾರ್ಥಕ ಆದೀತು"—ಎಂದು ಹೇಳಿದ ಮಾತು ಅನೇಕರಿಗೆ ನೆನಪಿರಬಹುದು. ಅದೇ ರೀತಿಯಲ್ಲಿ ನಾವು ರಾಜ್ಯಮಟ್ಟದಲ್ಲಿಯೂ ನೋಡಿದರೂ ಕೂಡಾ ಹೆಚ್ಚಾಗಿ ಹಳ್ಳಿಗಳು ಇರತಕ್ಕಂತಹ ಈ ರಾಜ್ಯದಲ್ಲಿ ಗ್ರಾಮಗಳ ಅಭಿವೃದ್ಧಿಗೆ, ಹಳ್ಳಿಗಳ ಅಭಿವೃದ್ಧಿಗೆ, ನಾವು ವಿಶೇಷವಾದಂತಹ ಗಮನ ಹರಿಸುವಂಥದ್ದು ಹೆಚ್ಚು ಪ್ರಾಮುಖ್ಯ. ಏಕೆಂದರೆ, ಹಳ್ಳಿಯ ಪ್ರದೇಶದಲ್ಲಿರತಕ್ಕಂತಹ ಜನ, ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂತಹ ಜನ—ರೈತರು, ಸಣ್ಣ ರೈತರು, ಅತೀ ಸಣ್ಣ ರೈತರು, ಕೃಷಿ ಕಾರ್ಮಿಕರು, ಬಡವರು, ಕೂಲಿಗಾರರು, ಅನುಸೂಚಿತ ಜಾತಿ ಮತ್ತು ಪಂಗಡದವರು ಆಗಿರುತ್ತಾರೆ. ಇಂತಹವರೇ ಗ್ರಾಮಾಂತರ ಪ್ರದೇಶಗಳಲ್ಲಿರುವುದು. ಅದೇ ರೀತಿಯಲ್ಲಿ ಹಳ್ಳಿಗಳಲ್ಲಿ ಇರುವುದು. ಇಂತಹವರ ಏಳಿಗೆ ಮಾಡಬೇಕು, ಇಂತಹವರನ್ನು ಮೇಲೆ ತರಬೇಕು. ಇವರೆಲ್ಲರೂ ಬಹಳ ಕೆಳಗಿದ್ದಾರೆ. ಬಡತನದ ರೇಖೆಗಿಂತಲೂ ಕೆಳಗಿದ್ದಾರೆ. ಅವರೆಲ್ಲರನ್ನೂ ಮೇಲೆ ತರಬೇಕೆನ್ನುವ ಒಂದು ಬಹಳ ದೊಡ್ಡ ಸಿದ್ಧಾಂತವನ್ನು ಇವೊತ್ತು ಕೇಂದ್ರದಲ್ಲಿಯೂ ಅದೇ ರೀತಿ ರಾಜ್ಯದಲ್ಲಿಯೂ ಮಾಡಿರುತ್ತಾರೆ.

ಇವೊತ್ತು ಗ್ರಾಮೀಣ ಅಭಿವೃದ್ಧಿ ಸಚಿವರು ಮಾಡಿಸಿರತಕ್ಕಂತಹ ಬೇಡಿಕೆಗಳನ್ನು ಈ ರೀತಿಯಲ್ಲಿ ನಾವು ಆಲೋಚನೆ ಮಾಡಿದರೆ, ಗ್ರಾಮಗಳಲ್ಲಿ, ಹಳ್ಳಿಗಳಲ್ಲಿ, ಬಹುತೇಕ, ಬಡವರೇ ಇರುವ ಜನ, ರೈತರೇ ಇರುವಂತಹದ್ದಕ್ಕೆ ಇವರು ಇಟ್ಟಿರುವ ಹಣ ಅತ್ಯಂತ ಅಲ್ಪವೆಂದು ನಾನು ಹೇಳುತ್ತೇನೆ. ಏಕೆಂದರೆ ನಮ್ಮ ಗ್ರಾಮಗಳನ್ನು ಬಲಪಡಿಸಿದೇ ನಿಜವಾಗಿಯೂ ಯಾವುದೇ ಒಂದು ದೇಶ, ಆಗಲಿ

ಯಾವುದೇ ಒಂದು ರಾಜ್ಯ ಆಗಲೀ, ಮೇಲೆ ಬರಲಿಕ್ಕೆ, ಪ್ರಗತಿ ಹೊಂದಲಿಕ್ಕೆ, ಉತ್ತುಂಗ ಶಿಖರಕ್ಕೆ ಏರಲಿಕ್ಕೆ ಸಾಧ್ಯವೇ ಇಲ್ಲ. ಇವೊತ್ತು ರೈತರು ಇದ್ದಾರೆ, ಸಣ್ಣ ರೈತರು ಇದ್ದಾರೆ, ಅತಿ ಸಣ್ಣ ರೈತರು ಇದ್ದಾರೆ, ಕೃಷಿ ಕಾರ್ಮಿಕರು ಇದ್ದಾರೆ, ಅವರೆಲ್ಲರೂ ನಮ್ಮ ಅನ್ನದಾತರು. ಇವೊತ್ತು ಪಟ್ಟಣದಲ್ಲಿರತಕ್ಕಂತಹ ಜನರು, ನಗರಗಳಲ್ಲಿರತಕ್ಕಂತಹ ಜನರು, ಎಷ್ಟೇ ದೊಡ್ಡ ವಕೀಲರು, ಎಷ್ಟೇ ದೊಡ್ಡ ಇಂಜಿನೀಯರುಗಳು, ಎಷ್ಟೇ ದೊಡ್ಡ ಸಾಹಿತಿಗಳನ್ನು ಬದುಕಿಸತಕ್ಕಂತಹ, ಅನ್ನ ಕೊಡತಕ್ಕಂತಹ ಅನ್ನದಾತರು — ಈ ಹಳ್ಳಿಯಲ್ಲಿರತಕ್ಕಂತಹ ರೈತರು, ಸಣ್ಣ ರೈತರು, ಕೃಷಿ ಕಾರ್ಮಿಕರು. ಇವರ ಬಗ್ಗೆ ನಾವು ಹೆಚ್ಚಿನ ಕಾಳಜಿ ತೆಗೆದುಕೊಳ್ಳಬೇಕಾಗುತ್ತದೆ. ಇವತ್ತು ಸ್ವಾತಂತ್ರ್ಯಕ್ಕೆ ಅಪಾಯ ಬರತಕ್ಕಂತಹ ಕಾಲದಲ್ಲಿ ಯೋಧರಿರತಕ್ಕದ್ದು ಎಷ್ಟು ಪ್ರಾಮುಖ್ಯವೋ ಅಷ್ಟೇ ಪ್ರಾಮುಖ್ಯ, ಈ ರೈತರು, ಕೃಷಿ ಕಾರ್ಮಿಕರು, ಬಡವರು, ಕೂಲಿಗಾರರು ಎಂಬುದನ್ನು ಮರೆಯ—ಬಾರದು. ಅನೇಕ ರೀತಿಯಲ್ಲಿ ಗದ್ದೆಯಲ್ಲಿ ಬಿದ್ದು, ಮಣ್ಣಿನಲ್ಲಿ ಹೊರಳಿ, ಬೆವರನ್ನು ಸುರಿಸಿ, ಬಹಳ ಕಷ್ಟದಿಂದ ನಮ್ಮನ್ನು ಬದುಕಿಸುವಂತಹ ಅನ್ನದಾತರು ಇವರುಗಳು. ಇವರುಗಳು ಬಹಳ ನಮಗೆ ಬಹಳ ದೊಡ್ಡವರುಗಳು. ಇವೊತ್ತು ಯುದ್ಧವಾಗುವಾಗ, ಅಲ್ಲಿಯ ಯೋಧರಿಗೆ ಅಕ್ಕಿಯನ್ನು, ಜೋಳವನ್ನು, ಗೋಧಿಯನ್ನು, ರಾಗಿಯನ್ನು ಕಳುಹಿಸತಕ್ಕಂತಹವರೂ ಇವರೇ. ಇವರು ಗ್ರಾಮಗಳಲ್ಲಿ ಬೆಳೆದರೆ ಮಾತ್ರ ಗ್ರಾಮದ ರೈತರು ಒಳ್ಳೆಯ ರೀತಿಯಲ್ಲಿ ಕೃಷಿ ಮಾಡಿದರೆ ಮಾತ್ರ ಅಲ್ಲಿಗೆ ಅವುಗಳನ್ನು ಕಳುಹಿಸಲಿಕ್ಕೆ ಸಾಧ್ಯ, ಯೋಧರನ್ನು ಉಳಿಸಲಿಕ್ಕೆ ಸಾಧ್ಯ. ಈ ದೇಶದಲ್ಲಿ ನಮ್ಮನ್ನು ರಕ್ಷಿಸಲಿಕ್ಕೆ, ಸ್ವಾತಂತ್ರ್ಯವನ್ನು ಉಳಿಸಲಿಕ್ಕೆ, ಪ್ರಜಾಪ್ರಭುತ್ವವನ್ನು ಉಳಿಸಲಿಕ್ಕೆ ಯಾವ ರೀತಿಯಲ್ಲಿ ಯೋಧರು ಪ್ರಾಮುಖ್ಯರೋ ಅದೇ ರೀತಿಯಲ್ಲಿ ಹಳ್ಳಿಗಳಲ್ಲಿರತಕ್ಕಂತಹ ಹಳ್ಳಿಯ ಜನರೂ ಕೂಡಾ ಪ್ರಾಮುಖ್ಯರು. ಆದುದರಿಂದ ಅವರ ಕಡೆಗೆ ನಾವು ಗಮನಹರಿಸಬೇಕಾಗಿದೆ. ಬಡವರಲ್ಲಿ ಅತೀ ಬಡವರನ್ನು ಅನುಲಕ್ಷಿಸಿ, ಅವರಿಗೆ ಬೇಕಾದಂತಹ ವ್ಯವಸ್ಥೆಯನ್ನು ಮಾಡಬೇಕಾಗಿದೆ. ಆದುದರಿಂದ ಇಲ್ಲಿ ಈ ಕೆಲಸಕ್ಕೆ ಇಟ್ಟಿರತಕ್ಕಂತಹ ಹಣವನ್ನು ನೋಡಿದರೆ ಬಹಳ ಕಡಿಮೆ ಎಂದು ನಾನು ಹೇಳುತ್ತೇನೆ. ಏಕೆಂದರೆ ಇದ್ದುದರಲ್ಲಿ ಇದು ಬಹಳ ಪ್ರಾಮುಖ್ಯವಾದಂತಹ ಖಾತೆಯಾಗಿದೆ. ಅದರಲ್ಲಿಯೂ ನಮ್ಮ ಮಾನ್ಯ ನಜೀರ್‌ಸಾಬ್‌ರವರಿಗೆ ಈ ಖಾತೆಯನ್ನು ಕೊಟ್ಟಿದ್ದಾರೆ. ಬಹಳ ಉತ್ಸಾಹ ಇರತಕ್ಕಂತಹ, ಉಮೇದು ಇರತಕ್ಕಂತಹ, ಒಳ್ಳೆಯ ರೀತಿಯಲ್ಲಿ ಬಡವರಿಗೆ ಉಪಕಾರವನ್ನು ಮಾಡಬೇಕೆಂಬ ಅಭಿಪ್ರಾಯ ಇರತಕ್ಕಂತಹ ನಜೀರ್‌ಸಾಹೆಬ್‌ರವರಿಗೆ ಈ ಖಾತೆಯನ್ನು ಕೊಟ್ಟಿರುವಾಗ ಈ ಹಣ ಬಹಳ ಕಡಿಮೆ ಆಯಿತು. ಈ ಖಾತೆಗೆ ಬಜೆಟ್‌ನಲ್ಲಿ ಹೆಚ್ಚು ಹಣ ಕೊಡಬೇಕೆಂದು ಮಾನ್ಯ ನಜೀರ್ ಸಾಹೇಬರವರು ಕೇಳುತ್ತಾರೆಂದು ನನಗೆ ಅಪೇಕ್ಷೆ. ಇವತ್ತು ಗ್ರಾಮಗಳಲ್ಲಿನ ಅತೀ ಬಡವರ ಏಳಿಗೆ ಮಾಡಬೇಕು, ಗ್ರಾಮಗಳ ಅಭಿವೃದ್ಧಿ ಮಾಡಬೇಕು, ಅನುಸೂಚಿತ ಜಾತಿ ಮತ್ತು ಪಂಗಡಗಳವರು ಬಹಳ ಹಿಂದುಳಿದಿದ್ದಾರೆ ಅವರನ್ನು ಮುಂದಕ್ಕೆ ತರಬೇಕು, ಅನಕ್ಷರಸ್ಥರ ಬಹಳ ಸಂಖ್ಯೆಯಲ್ಲಿದ್ದಾರೆ ಅವರನ್ನೂ ಅಕ್ಷರಸ್ಥರನ್ನಾಗಿ ಮಾಡಬೇಕು ಈ ಜನರಿಗೆಲ್ಲಾ ಏನು ಆಗಿದೆ ಎಂದು ನೋಡುವಂತಹ ವ್ಯವಸ್ಥೆ ಇದ್ದರೆ ಆಗ ಗೊತ್ತಾಗುತ್ತದೆ. ಈ ರೀತಿಯಲ್ಲಿರತಕ್ಕಂತಹ ಜನರಿಗೆ ನೀವು ಮಾಡುವಂತಹ ಕೆಲಸ ಇದು ? ಆದಕ್ಕಾಗಿ ನಮಗೆ ಪಂಚಾಯತಿಗಳು ಬೇಕು, ಅದಕ್ಕಾಗಿ ನಮಗೆ ತಾಲ್ಲೂಕು ಬೋರ್ಡ್‌ಗಳು ಬೇಕು, ಆರಿಸಿರುವಂತಹ ಸದಸ್ಯರು ಬೇಕು—ಹಾಗಿದ್ದರೆ ಮಾತ್ರ ಜನರ ಕೆಲಸ ಮಾಡಲಿಕ್ಕೆ ಆಗುತ್ತದೆ ಅವರ ದುಃಖವನ್ನು ಬಂದು ಪ್ರತಿನಿಧಿಗಳ ಹತ್ತಿರ ಹೇಳಲಿಕ್ಕೆ ಸಾಧ್ಯವಾಗುತ್ತದೆ. ಬಡಜನರನ್ನು ಸ್ಪಂದಿಸಲಿಕ್ಕೆ ಸಾಧ್ಯವಾಗುತ್ತದೆ. ಅವರಿಗೆ ಏನು ಬೇಕು ಎಂದು ಕೇಳಲಿಕ್ಕೆ ಸಾಧ್ಯವಾಗುತ್ತದೆ. ಆದರೆ ಇವರು ಏನು ಮಾಡಿದ್ದಾರೆ ? ಅಧಿಕಾರ ಇವರ ಕೈಗೆ ಬಂದಕೂಡಲೇ ರಾಜ್ಯದಲ್ಲಿರತಕ್ಕತಹ ಎಲ್ಲಾ ಪಂಚಾಯತಿಗಳನ್ನು ವಿಸರ್ಜನೆ ಮಾಡಿದರು. ಟಿ. ಡಿ. ಬಿ. ಮತ್ತು ಟೌನ್ ಪಂಚಾಯತ್‌ಗಳನ್ನು ವಿಸರ್ಜನೆ ಮಾಡಿದರು. ಪ್ರಜಾಪ್ರಭುತ್ವವನ್ನು ಹೇಳತಕ್ಕಂತಹ ನೀವು, ಒಳ್ಳೆಯ ಮೌಲ್ಯಗಳನ್ನು ಹೇಳತಕ್ಕಂತಹ ನೀವು, ಗ್ರಾಮಗಳ ಉದ್ಧಾರವನ್ನು ಮಾಡಬೇಕೆಂಬ ಅಪೇಕ್ಷೆ ಇರುವಂತಹ ನೀವು ಗ್ರಾಮಗಳನ್ನು ಮುಂದಕ್ಕೆ ತರಬೇಕು ಅಲ್ಲಿಯ ಜನರನ್ನು ಉದ್ಧಾರ ಮಾಡಬೇಕೆನ್ನುವ ನೀವು, ಉತ್ತುಂಗವಾದಂತಹ, ಬಹಳ ದೊಡ್ಡದಾದಂತಹ ಅಭಿಲಾಷೆಯನ್ನು ಹೊಂದಿದಂತಹ ನೀವು ಅದನ್ನು ಬುಡದಲ್ಲಿಯೇ ಕತ್ತರಿಸಿ ಹಾಕಿದ್ದೀರಿ ಎಂದು ನನ್ನ ಅನಿಸಿಕೆ ಆದರೆ ಅವೊತ್ತು ಎರಡು ವರ್ಷ ಆರು ತಿಂಗಳು ಆಯಿತು ಈ ಎರಡು ವರ್ಷ ಆರು ತಿಂಗಳು ಆಗುವಾಗ ಎಲ್ಲಾ ಪಂಚಾಯತಿಗಳನ್ನು, ತಾಲ್ಲೂಕು ಬೋರ್ಡ್‌ಗಳನ್ನು ಬರಖಾಸ್ತು ಮಾಡಿದ್ದೀರಿ. ಇವೊತ್ತು ಪಂಚಾಯತಿಗಳ ಚಿಕ್ಕ ಆವರಣದಲ್ಲಿರ ತಕ್ಕಂತಹವರು, ಮೊಹಲ್ಲಾಗಳಲ್ಲಿರ ತಕ್ಕಂತಹವರು, ಗಲ್ಲಿಗಳಲ್ಲಿರ ತಕ್ಕಂತಹವರು, ವಾರ್ಡಿನಲ್ಲಿರತಕ್ಕಂತಹವರು, ಎಲ್ಲಾ

ಮತದಾರರು ಒಂದು ತಮ್ಮ ಪ್ರತಿನಿಧಿಗಳ ಹತ್ತಿರ ಅವರವರ ಸುಖ-ದುಃಖಗಳನ್ನು ಕಷ್ಟವನ್ನು ಹೇಳಿಕೊಳ್ಳಲಿಕ್ಕೆ, ಯಾವುದಾದರೂ ಕೆಲಸವನ್ನು ಮಾಡಿಸಲಿಕ್ಕೆ ಅವಕಾಶ ಇತ್ತು. ಮತ ಕೊಟ್ಟ ಮತದಾರ ಬಂದು ಆ ರೀತಿಯಲ್ಲಿ ಅವರನ್ನು ಕೇಳಲಿಕ್ಕೆ ಅಸ್ಪದ ಇತ್ತು. ಆದರೆ ಇವೊತ್ತು ಅಂತಹ ಆಸ್ಪದ ಎಲ್ಲಿದೆ? ಅಂತಹವುಗಳನ್ನು ನೀವು ವಿಸರ್ಜನೆ ಮಾಡಿದ್ದೀರಿ. ಅದನ್ನು ವಿಸರ್ಜನೆ ಮಾಡುವಾಗ ಅದಕ್ಕಿಂತಲೂ ದೊಡ್ಡ ವಿಚಾರಗಳು ನಿಮ್ಮ ತಲೆಯಲ್ಲಿ ಇದ್ದಿರಬಹುದು. ಪ್ರಜಾಪ್ರಭುತ್ವದ ನೀತಿಯಲ್ಲಿರತಕ್ಕಂತಹ ಬಹಳ ದೊಡ್ಡ ತತ್ವವೇ ಚುನಾವಣೆ ಆಗಬೇಕೆನ್ನುವುದು ಚುನಾವಣೆಯಲ್ಲಿ ಆರಿಸಿ ಬಂದಿರತಕ್ಕಂತಹ ಜನರು, ಜನರನ್ನು ಸಂರಕ್ಷಣೆ ಮಾಡಲಿಕ್ಕೆ, ಅವರ ಜನಗಳ ಔಚಿತ್ಯವನ್ನು ಸಾಧಿಸುವಲ್ಲಿ ಕೆಲಸ ಮಾಡತಕ್ಕಂಥಾದ್ದು ಆಗಿರುತ್ತದೆ. ಆದರೆ ಈ ಸಂದರ್ಭದಲ್ಲಿ ಈ ರೀತಿಯಲ್ಲಿ, ಎರಡು ವರ್ಷ ಚಿಲ್ಲರೆ ಆ ಪಂಚಾಯತಿಗಳಲ್ಲಿ ಸುಧಾರಣೆ ೮ ಸಾವಿರ ಪಂಚಾಯತಿಗಳನ್ನು, ಅನೇಕ ತಾಲ್ಲೂಕು ಬೋರ್ಡ್‌ಗಳನ್ನು ೧೯೯ ಟೌನ್ ಪಂಚಾಯತ್‌ಗಳನ್ನು ಇವೊತ್ತು ಬರ್‌ಖಾಸ್ ಮಾಡಿದ್ದಾರೆ ಇವುಗಳು ಅಧಿಕಾರವನ್ನು ಇವೊತ್ತು ಅಧಿಕಾರಿಗಳ ಕೈಯಲ್ಲಿ ಕೊಟ್ಟಿದ್ದೇವೆಂದು ನೀವು ಹೇಳಬಹುದು. ಆದರೆ ಅಧಿಕಾರಿಗಳ ಕೈಯಲ್ಲಿ ಕೊಟ್ಟಾದ ಮೇಲೆ ಪರಿಸ್ಥಿತಿ ಏನಾಗಿದೆ ಎಂಬುದನ್ನು ಸ್ವಲ್ಪ ಆಲೋಚನೆ ಮಾಡಿದರೆ ನಿಜವಾಗಿಯೂ ದುಃಖವಾಗುತ್ತದೆ. ಮೊದಲೇ ಆರಿಸಲ್ಪಟ್ಟಂತಹ ಪ್ರತಿನಿಧಿಗಳು ಅವರು ಹತ್ತಿರ ಮತದಾರರು ಬಂದು ಕೇಳುವಂತಹ ಒಂದು ಹಕ್ಕು ಅವರಿಗೆ ಬೇಕಾದುದು. ನಾವು ನಿಮಗೆ ಮತ ಕೊಟ್ಟಿದ್ದೇವೆ, ನಮಗೆ ಒಂದು ಕೆಲಸ ಆಗಬೇಕು, ಒಂದು ಅಭಿವೃದ್ಧಿ ಆಗಬೇಕು. ಇಂತಹ ಒಂದು ಸೌಲಭ್ಯ ಸಿಗಬೇಕು, ಒಂದು ಮಾರ್ಗ ಆಗಬೇಕು, ಶಾಲೆ ಆಗಬೇಕು. ಮನೆಯಾಗಬೇಕು. ಎಂದೆಲ್ಲಾ ಹೇಳತಕ್ಕಂತಹ ಒಂದು ಬಹಳ ದೊಡ್ಡದಾದಂತಹ ಒಳ್ಳೆಯ ಅಸ್ಪದ ಇತ್ತು. ಇದು ಪ್ರಜಾಪ್ರಭುತ್ವದ ನೀತಿಯೂ ಕೂಡಾ ಆಗಿದೆ. ಆದರೆ ಇವೊತ್ತು ಅಧಿಕಾರವನ್ನು ನೀವು ಕೊಟ್ಟಿದ್ದೀರಿ. ಈ ಸಂಸ್ಥೆಗಳನ್ನು ಸೂಪರ್‌ಸೀಡ್ ಮಾಡಿ ಅವರ ಕೈಯಲ್ಲಿ ಕೊಟ್ಟ ಮೇಲೆ ಅವರು ಆಡಳಿತ ಅಧಿಕಾರಿಯೆಂದು ಆಗಿದ್ದಾರೆ. ಆಡಳಿತ ಅಧಿಕಾರಿಗಳನ್ನು ಅನೇಕ ಗ್ರಾಮ ಪಂಚಾಯತಿಗಳಿಗೆ ಒಬ್ಬನನ್ನು ಇಟ್ಟರೆ ಅವರು ವಾರದಲ್ಲಿ ಒಂದು ದಿವಸ ಒಂದು ಕಡೆಯಲ್ಲಿ ಒಂದು ದಿವಸ ಮತ್ತೊಂದು ಕಡೆಯಲ್ಲಿ ಹೀಗೆ ಅಲ್ಲಿ ಇಲ್ಲಿ ಹೋಗುತ್ತಾ ಕಾರುಬಾರು ಮಾಡುತ್ತಾರೆ. ನಾನು ಮೂಲತಃ ಕೇಳುವಂಥದ್ದು. ತಮ್ಮ ಪ್ರಜಾಪ್ರಭುತ್ವದ ಮೇಲೆ ಬಹಳ ದೊಡ್ಡ ಪ್ರೀತಿ ಇದ್ದರೆ ಮೌಲ್ಯಗಳನ್ನು ಬಹಳ ಲೀಲಾಜಾಲವಾಗಿ ಹೇಳುತ್ತಾ, ಪತ್ರಿಕೆಗಳಲ್ಲಿಯೂ ಕೂಡಾ ಬಹಳ ಪ್ರಚಾರ ಪಡೆಯುತ್ತಾ ಇರುವಾಗ ನೀವುಗಳು ಈ ರೀತಿಯಲ್ಲಿ ಮಾಡುವಂತಾದ್ದು ಸರಿಯೇ ಎಂದು ನಾನು ಕೇಳುತ್ತಾ ಇದ್ದೇನೆ. ಮಂಡಳ ಪಂಚಾಯತ್ ಮಾಡಬೇಕು, ಜಿಲ್ಲಾ ಪರಿಷತ್ ಮಾಡಬೇಕು. ಇದು ವಿಕೇಂದ್ರಿಕರಣ, ಇದು ಹಳ್ಳಿಯ ಜನರಿಗೆ, ಗ್ರಾಮಗಳ ಜನರಿಗೆ ಕೆಲಸವನ್ನು ಮಾಡಲಿಕ್ಕೆ ಆಸ್ಪದ ಇರುವಂತಹ ದೊಡ್ಡ ಕೆಲಸವನ್ನು ಮಾಡಲಿಕ್ಕೆ ಹೊರಟಿದ್ದೇವೆಂದು ನೀವು ಹೇಳಬಹುದು ಮತ್ತು ಅದಕ್ಕಿಂತಲೂ ಹೆಚ್ಚಿನ ಒಂದು ವಿಚಾರದ ಕಡೆಗೆ ಹೋಗುತ್ತಾ ಇದ್ದೇವೆ ಎಂದು ಹೇಳಬಹುದು

೧-೦೦ ಪಿ.ಎಂ.

ಮಾನ್ಯ ಮಂತ್ರಿಗಳಾದ ಶ್ರೀಮಾನ್ ನಜೀರ್ ಸಾಹೇಬರು ಬಹಳ ಪ್ರಗತಿದಾಯಕವಾದಂತಹ ಯೋಜನೆಯನ್ನು ತಯಾರು ಮಾಡಿದರು. ಅವರು ತಯಾರು ಮಾಡಿದ ಯೋಜನೆ ಕೂಡ ಬಹಳ ಪ್ರಗತಿದಾಯಕವಾದುದು ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅವರು ಆ ಮಸೂದೆಯನ್ನು ಜಾರಿಗೆ ತರುವುದಕ್ಕೆ ಬಹಳ ಕಷ್ಟಪಟ್ಟಿದ್ದಾರೆ ಈ ಮಸೂದೆಯನ್ನು ಜಾರಿಗೆ ತರುವುದಕ್ಕೆ ಬಹಳ ಕಷ್ಟಪಟ್ಟಿದ್ದಾರೆ. ಆ ಮಸೂದೆಯ ಕರಡನ್ನು ತಯಾರು ಮಾಡುವಾಗ ಅನೇಕ ಕಡೆಗಳಲ್ಲಿ ಸಂಚಾರ ಮಾಡಿ ವಿಷಯವನ್ನು ಸಂಗ್ರಹಿಸಿ ಕರಡು ಮಸೂದೆಯನ್ನು ತಯಾರು ಮಾಡಿದ್ದಾರೆಂದು ನಾನು ಪತ್ರಿಕೆಯಲ್ಲಿ ಓದಿದ್ದೇನೆ ಮಾನ್ಯ ಮಂತ್ರಿಗಳು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಆದರೆ ಈ ರೀತಿ ಮಾಡುವಾಗ ಮಂಡಲ್ ಪಂಚಾಯಿತಿಗಳು, ಜಿಲ್ಲಾ ಪರಿಷತ್ತುಗಳು ಆಗುವವರೆವಿಗೂ ಹಿಂದೆ ಇದ್ದಂತಹ ಪಂಚಾಯಿತಿಗಳು, ಟೌನ್ ಪಂಚಾಯಿತಿಗಳು, ತಾಲ್ಲೂಕು ಬೋರ್ಡ್‌ಗಳು ಇದ್ದಿದ್ದರೆ ಏನಾಗುತ್ತಿತ್ತು ಎಂದು ನಾನು ಈಗ ಮಾನ್ಯ ಮಂತ್ರಿಗಳನ್ನು ಕೇಳಬಯಸುತ್ತೇನೆ. ಈ ಜಿಲ್ಲಾ ಪರಿಷತ್ತು ಮಸೂದೆಗೆ ರಾಷ್ಟ್ರಪತಿಗಳಿಂದ ಅಂಕಿತ ಬಿದ್ದು ನೋಟಿಫಿಕೇಶನ್ ಆಗಿದ್ದರೆ ತನ್ನಷ್ಟಕ್ಕೆ ತಾನೆ ಈ ಎಲ್ಲಾ ಪಂಚಾಯಿತಿಗಳು ಟೌನ್ ಪಂಚಾಯಿತಿಗಳು ಹಾಗೂ ತಾಲ್ಲೂಕು ಬೋರ್ಡ್‌ಗಳು ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿದ್ದವು. ಆದರೆ ಕಳೆದ ಎರಡು ವರ್ಷಗಳಿಂದ ಇಡೀ ಕರ್ನಾಟಕ ರಾಜ್ಯದಲ್ಲಿ

ಜನತಾ ಪ್ರತಿನಿಧಿಗಳು ಇಲ್ಲದೆ ಹೊಸ ಪ್ರತಿನಿಧಿಗಳು ಬರದೆ ಇರುವಂತಹ ಒಂದು ಪರಿಸ್ಥಿತಿ ಬಂತಲ್ಲ ಎಂದು ನನಗೆ ತುಂಬಾ ಬೇಸರವಾಯಿತು. ಈ ಬಗ್ಗೆ ಮಾನ್ಯ ಮಂತ್ರಿಗಳು ಹೇಳಬಹುದು ನಾವು ಜಿಲ್ಲಾ ಪರಿಷತ್ತು ಕರಡು ಮಸೂದೆಯನ್ನು ಮಾಡಿದೆವು. ಆ ನಂತರ ಆ ಮಸೂದೆಯನ್ನು ವಿಧಾನ ಸಭೆಯಲ್ಲಿ ಮಂಡಿಸಿ ಅದಕ್ಕೆ ತಮ್ಮ ಬೆಂಬಲವನ್ನು ಪಡೆದುಕೊಂಡೆವು ಆ ನಂತರ ರಾಷ್ಟ್ರಪತಿಗಳ ಅಂಕಿತಕ್ಕೆ ಕಳುಹಿಸಿ ಕೊಟ್ಟೆವು. ಅಲ್ಲಿ ರಾಷ್ಟ್ರಪತಿಗಳಿಂದ ನಮಗೆ ಅಂಕಿತ ಸಿಕ್ಕಿದ್ದು ತಡವಾಯಿತು ಎಂದು. ಆದರೆ ನಮ್ಮ ಪ್ರಶ್ನೆ ಇಷ್ಟೇ. ಈ ಜಿಲ್ಲಾ ಪರಿಷತ್ತು ಮಸೂದೆ ಜಾರಿಗೆ ಬರುವ ತನಕ ಹಿಂದೆ ಇದ್ದಂತಹ ಚುನಾಯಿತ ಪ್ರತಿನಿಧಿಗಳು ಇದ್ದಿದ್ದರೆ ಏನಾಗುತ್ತಿತ್ತು ? ಅಲ್ಲಿ ನಿಮಗೆ ಒಂದು ತೊಂದರೆ ಬಂತು. ಅದೇನೆಂದರೆ ಎಲ್ಲಾ ಪಂಚಾಯಿತಿಗಳಲ್ಲಿ, ಎಲ್ಲಾ ತಾಲ್ಲೂಕು ಬೋರ್ಡ್‌ಗಳಲ್ಲಿ. ಎಲ್ಲಾ ಟೌನ್ ಪಂಚಾಯಿತಿಗಳಲ್ಲಿ ಕಾಂಗ್ರೆಸ್ ಪಕ್ಷದವರೇ ಇದ್ದರು. ಆದ್ದರಿಂದ ಏನಾದರೂ ಮಾಡಿ ಈ ತಾಲ್ಲೂಕು ಬೋರ್ಡ್‌ಗಳನ್ನು ಟೌನ್ ಪಂಚಾಯಿತಿಗಳನ್ನು ಮತ್ತು ಪಂಚಾಯಿತಿಗಳನ್ನು ವಜಾ ಮಾಡಬೇಕೆಂದು ಮಾಡಿದಿರಿ. ಈ ಕಾರಣ ಬಿಟ್ಟರೆ ಬೇರೆ ಯಾವ ಕಾರಣವು ಕೂಡ ನಿಮ್ಮಲ್ಲಿ ಇರಲಿಲ್ಲವೆಂದು ನನ್ನ ಹೃದಯ ಹೇಳುತ್ತಿದೆ. ಈ ರೀತಿ ತಾವು ಮಾಡಿದುದ್ದು ಸರಿಯಾಗಿಲ್ಲ. ಇದರಲ್ಲಿ ತಾವು ರಾಜಕೀಯ ಮಾಡಬಾರದಾಗಿತ್ತು. ಯಾವ ಪಕ್ಷದವರೇ ಆಗಲಿ ಯಾವುದೇ ಕಾರ್ಯಕ್ರಮಗಳನ್ನು ಹಾಕಿಕೊಂಡರೆ ಅದು ಗ್ರಾಮಾಂತರ ಜನರ ಕಲ್ಯಾಣ ಸಾಧನೆ ಮಾಡುವುದಕ್ಕಾಗಿಯೇ ಎಂದು ತಾವು ಏತಕ್ಕೆ ತಿಳಿದುಕೊಳ್ಳಲಿಲ್ಲ. ಯಾವುದೇ ಕಾರ್ಯಕ್ರಮ ಹಾಕಿಕೊಂಡರೂ ಅದು ಹಳ್ಳಿಗರನ್ನು ಉದ್ಧಾರ ಮಾಡುವ ಸಲುವಾಗಿ, ರೈತರನ್ನು ಉದ್ಧಾರ ಮಾಡುವ ಸಲುವಾಗಿ ಕೂಲಿ ಕಾರ್ಮಿಕರನ್ನು ಉದ್ಧಾರ ಮಾಡುವ ಸಲುವಾಗಿ ಬಡವರನ್ನು ಮತ್ತು ಹರಿಜನ ಮತ್ತು ಗಿರಿಜನರನ್ನು ಉದ್ಧಾರ ಮಾಡುವ ಸಲುವಾಗಿ ಎನ್ನುವ ಕಲ್ಪನೆಯನ್ನು

ತಾವೇಕೆ ಮಾಡಲಿಲ್ಲ ಎಂದು ನಾನು ಈ ಸಂದರ್ಭದಲ್ಲಿ ಕೇಳಬಯಸುತ್ತೇನೆ. ಯಾವ ಪಕ್ಷದವರೇ ಆಗಲಿ ಯಾವುದೇ ಕಾರ್ಯಕ್ರಮ ಹಾಕಿಕೊಂಡರೂ ಕೂಡ ಅದು ಪ್ರಜಾಪ್ರಭುತ್ವಕ್ಕೆ ಅನುಗುಣವಾಗಿ ಇರಬೇಕು. ಆ ರೀತಿ ಮಾಡುವಾಗ ನಾವು ಪ್ರಜಾಪ್ರಭುತ್ವದ ಸಿದ್ಧಾಂತವನ್ನು ಅನುಸರಿಸಬೇಕಾದದು ಅಗತ್ಯವೆಂದು ನಾನು ಭಾವಿಸಿದ್ದೇನೆ. ಆದರೂ ಕೂಡ ಮಾನ್ಯ ಮಂತ್ರಿಗಳಾದಂಥ ಅಬ್ದುಲ್ ನಜೀರ್ ಸಾಬ್ ರವರು ಜಿಲ್ಲಾ ಪರಿಷತ್ತು ಚುನಾವಣೆಗಳನ್ನು ಮಾಡಿಯೇ ಮಾಡುತ್ತಾರೆ. ಅವರು ಹಿಡಿದ ಛಲವನ್ನು ಯಾವತ್ತೂ ಕೂಡ ಬಿಡುವುದಿಲ್ಲ. ರಾಷ್ಟ್ರಪತಿಗಳ ಅಂಕಿತ ಪಡೆದು ಇವೊತ್ತು ಜಿಲ್ಲಾ ಪರಿಷತ್ತು ಮಸೂದೆ ಬಂದಿದೆ. ಚುನಾವಣೆ ಮಾಡಬೇಕು ಎನ್ನುವ ಒಂದು ಉತ್ಸುಕತೆಯಿಂದ ಕೂಡ ಮಾನ್ಯ ಮಂತ್ರಿಗಳು ಇದ್ದಾರೆ. ಹಿಂದೆ ಒಂದು ಸಾರಿ ಮಾನ್ಯ ಮಂತ್ರಿಗಳು ಒಂದು ಪತ್ರಿಕಾ ಹೇಳಿಕೆಯನ್ನು ಕೊಟ್ಟಿದ್ದರು ಅದೇನೆಂದರೆ ಕರ್ನಾಟಕ ರಾಜ್ಯದಿಂದ ಕಳುಹಿಸಿಕೊಟ್ಟಿರುವಂತಹ ಜಿಲ್ಲಾ ಪರಿಷತ್ತು ಮಸೂದೆಗೆ ರಾಷ್ಟ್ರಪತಿಗಳು ತಮ್ಮ ಅಂಕಿತವನ್ನು ಕೊಡದಿದ್ದರೆ ನಾನು ರಾಷ್ಟ್ರಪತಿ ಭವನದ ಮುಂದೆ ಮುಷ್ಕರ ಮಾಡುತ್ತೇನೆ ಸತ್ಯಾಗ್ರಹ ಮಾಡುತ್ತೇನೆಂದು. ಆ ಮಾತು ಕೇಳಿ ನಿಜವಾಗಿಯೂ ಕೂಡ ನನಗೂ ಬಹಳ ಸಂತೋಷವಾಯಿತು. ಅಂತಹ ಒಂದು ಮನಸ್ಸುಳ್ಳವರು ಮಾನ್ಯ ಮಂತ್ರಿಗಳು. ಈಗ ರಾಷ್ಟ್ರಪತಿಗಳ ಅಂಕಿತ ಪಡೆದು ಮಸೂದೆ ಬಂದಿವೆ. ಬಹುಶಃ ಡಿಸೆಂಬರ್ ಅಥವಾ ಜನವರಿ ತಿಂಗಳಲ್ಲಿ ಇವುಗಳಿಗೆ ಚುನಾವಣೆಯನ್ನು ಮಾಡಬಹುದೆಂದು ಕಾಣುತ್ತದೆ. ನನಗೆ ತಿಳಿದ ಮಟ್ಟಿಗೆ ಜಿಲ್ಲಾ ಪರಿಷತ್ತು ಮಸೂದೆಗೆ ಅಂಕಿತ ಪಡೆದು ಒಂದು ತಿಂಗಳಲ್ಲಿ ಚುನಾವಣೆಯನ್ನು ಮಾಡಬಹುದಿತ್ತು. ಆದರೆ ಏತಕ್ಕೆ ಆ ಆಲೋಚನೆ ಮಾನ್ಯ ಮಂತ್ರಿಗಳು ಮಾಡಲಿಲ್ಲವೋ ನನಗೆ ಗೊತ್ತಿಲ್ಲ. ಈ ಜಿಲ್ಲಾ ಪರಿಷತ್ತು ಚುನಾವಣೆಯನ್ನು ಮಾಡುವ ತನಕವಾದರೂ ಹಿಂದೆ ಇದ್ದಂತಹ ೧೭೫ ತಾಲ್ಲೂಕು ಬೋರ್ಡ್‌ಗಳು, ೧೧೯ ಟೌನ್ ಪಂಚಾಯಿತಿಗಳು. ಮತ್ತು ೮ ಸಾವಿರ ಪಂಚಾಯಿತಿಗಳನ್ನು ಬರಖಾಸ್ತು ಮಾಡಿ ಚುನಾಯಿತ ಪ್ರತಿನಿಧಿಗಳ ಹಕ್ಕನ್ನು ತಾವು ತಾವು ಕಸಿದುಕೊಂಡಿದ್ದೀರಿ. ಈ ಜಿಲ್ಲಾ ಪರಿಷತ್ತು ಮತ್ತು ಮಂಡಲ್ ಪಂಚಾಯಿತಿಗಳ ಚುನಾವಣೆಯನ್ನು ಮಾಡಿದ ಮೇಲೆ ತಾವು ಕಸಿದುಕೊಂಡಿದ್ದಂಥ ಹಕ್ಕನ್ನು ಮತ್ತೆ ಅವರಿಗೆ ಸಂಪೂರ್ಣವಾಗಿ ಕೊಡಬೇಕು. ಇಲ್ಲದಿದ್ದರೆ ಪ್ರತಿಯೊಂದಕ್ಕೂ ಅವರು ಇಲ್ಲಿಗೆ ಬರುವಂತಹ ಒಂದು ಪದ್ಧತಿಯನ್ನು ಸಂಪೂರ್ಣವಾಗಿ ತಪ್ಪಿಸಬೇಕು. ಯಾವುದೇ ರೀತಿಯಾದಂತಹ ಮಂಜೂರಾತಿಗೂ ಕೂಡ ಅವರು ಇಲ್ಲಿಗೆ ಬರದಂತೆ ಹಣವನ್ನು ಒದಗಿಸಿಕೊಡಬೇಕು. ಆಯಾಯಾ ತಾಲ್ಲೂಕುಗಳ ಅಭಿವೃದ್ಧಿಯನ್ನು ಅವರೇ ಮಾಡಿಕೊಳ್ಳುವುದಕ್ಕೆ ಸಂಪೂರ್ಣ ಅಧಿಕಾರವನ್ನು ಅವರಿಗೇ ಕೊಡಬೇಕು. ತಮ್ಮ ಗ್ರಾಮದ ಶ್ರೇಯೋಭಿವೃದ್ಧಿಯನ್ನು ಅವರೇ ಲೀಲಾಜಾಲವಾಗಿ ಮಾಡಿಕೊಳ್ಳುವ ಅವಕಾಶವನ್ನು ಮಾನ್ಯ ಮಂತ್ರಿಗಳು ಕಲ್ಪಿಸಿ ಕೊಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ ಆ ರೀತಿಯ ವ್ಯವಸ್ಥೆ

ಯನ್ನು ಮಾನ್ಯ ಮಂತ್ರಿಗಳು ಮಾಡುತ್ತಾರೆಂದು ನಾನು ಆಸೆ ಇಟ್ಟುಕೊಂಡಿದ್ದೇನೆ. ಆ ರೀತಿ ಮಾಡದಿದ್ದರೆ ಅದು ಪ್ರಜಾಪ್ರಭುತ್ವಕ್ಕೆ ಅನುಗುಣವಾಗಿರುತ್ತದೆಯೇ ? ಅಥವಾ ಮೌಲ್ಯಾಧಾರಗಳಿಗೆ ಅನುಗುಣವಾಗಿ ಇರುತ್ತದೆಯೇ ಎಂಬುದನ್ನು ತಾವೇ ಯೋಚನೆ ಮಾಡಬೇಕು. ಈ ಬಗ್ಗೆ ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ತಿಳಿಸಬೇಕು.

ಇನ್ನು ಬಹಳ ಪ್ರಮುಖವಾದಂಥ ವಿಚಾರವೆಂದರೆ ಗ್ರಾಮಗಳ ಉದ್ಧಾರವಾಗಬೇಕು ಹಳ್ಳಿಗಳು ಉದ್ಧಾರವಾಗಬೇಕು. ಆದರೆ ಇವೊತ್ತು ಗ್ರಾಮಗಳ ಮತ್ತು ಹಳ್ಳಿಗಳ ಉದ್ಧಾರವಾಗುತ್ತಿದೆಯೇ ? ಸಾಮಾನ್ಯವಾಗಿ ಗ್ರಾಮಗಳಲ್ಲಿ ವಾಸ ಮಾಡುವಂತಥವರು ಬಡವರು, ಕೂಲಿಕಾರ್ಮಿಕರು ಹರಿಜನ ಮತ್ತು ಗಿರಿಜನರು ಆದರೆ ಈ ಜನರೆಲ್ಲಾ ಪಟ್ಟಣಗಳಿಗೆ ವಲಸೆ ಹೋಗುತ್ತಿದ್ದಾರೆ. ಗ್ರಾಮಗಳಿಂದ ಜನ ವಲಸೆ ಬರುವುದನ್ನು ನೋಡಿದರೆ ನನಗೆ ಬಹಳ ದುಃಖವಾಗುತ್ತದೆ. ದೊಡ್ಡ ದೊಡ್ಡ ಪಟ್ಟಣಗಳಾದ ಬೆಂಗಳೂರು, ಮಂಗಳೂರು ಹುಬ್ಬಳ್ಳಿ, ಧಾರವಾಡ ಗುಲ್ಬರ್ಗ ಇತ್ಯಾಧಿ ಜಿಲ್ಲೆಗಳಿಗೆ ವಲಸೆ ಹೋಗುತ್ತಿದ್ದಾರೆ. ಮುಖ್ಯವಾಗಿ ಬೆಂಗಳೂರು. ಮೈಸೂರು ಮತ್ತು ಮಂಗಳೂರಿಗೆ ಹೆಚ್ಚಾಗಿ ಜನ ವಲಸೆ ಹೋಗುತ್ತಿದ್ದಾರೆ. ಇದರಲ್ಲಿ ಗಾಂಧಿಜೀಯವರು ಒಂದು ಮಾತನ್ನು ಹೇಳಿವರು, ಅದೇನೆಂದರೆ ಹಳ್ಳಿಗಳಿಂದ ಯಾರೂ ಪಟ್ಟಣ್ಣಗಳಿಗೆ ವಲಸೆ ಹೋಗಬಾರದು, ಆರೀತಿ ವಲಸೆ ಹೋಗದಂತೆ ಎಲ್ಲಾ ರೀತಿಯ ಸೌಲಭ್ಯಗಳನ್ನು ಅವರಿಗೆ ಒದಗಿಸಿ ಕೊಡಬೇಕು ಎಂದು ನಮ್ಮ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದಂತಹ ಸಂದರ್ಭದಲ್ಲಿ ಈ ಮಾತನ್ನು ಹೇಳಿದ್ದಾರೆ. ಹಳ್ಳಿಗಳಿಂದ ಪಟ್ಟಣಗಳಿಗೆ ವಲಸೆ ಬರತಕ್ಕಂಥ ತಂಡಗಳನ್ನು ನೋಡಿದರೆ ಒಂದು ಕಡೆ ದುಃಖವಾಗುತ್ತದೆ. ಹಳ್ಳಿಗಳಲ್ಲಿ ಅವರು ಮಾಡಲು ಉದ್ಯೋಗವಿಲ್ಲ. ನಿರುದ್ಯೋಗ ಎಂಬುದು ವ್ಯಾಪಕವಾಗಿ ಬೆಳೆದಿದೆ. ಅವರಿಗೆ ಮಾಡಲು ಕಸಬು ಇಲ್ಲ, ಮಾಡಲು ವಾಸಿಸಲು ಮನೆ ಇಲ್ಲ. ಇಂತಹ ಪರಿಸ್ಥಿತಿಯಲ್ಲಿ ಅವರು ಪಟ್ಟಣಗಳಿಗೆ ವಲಸೆ ಬರಬೇಕಾಗುತ್ತದೆ. ನಮ್ಮ ರಾಜ್ಯದಲ್ಲಿ ಯಾವಾಗಲೂ ಬರಗಾಲ ಪರಿಸ್ಥಿತಿಯನ್ನು ಎದುರಿಸುತ್ತಿರುವ ಜಿಲ್ಲೆಗಳೆಂದರೆ ಗುಲ್ಬರ್ಗ, ರಾಯಚೂರು ಕೋಲಾರ ತುಮಕೂರು ಇಂತಹ ಕೆಲವಾರು ಜಿಲ್ಲೆಗಳು ಸದಾ ಕ್ಷಾಮದ ದವಡೆಗೆ ಸಿಕ್ಕಿರುವುದನ್ನು ನಾವೆಲ್ಲಾ ಕಣ್ಣಾರೆ ಕಂಡಿದ್ದೇವೆ ಈ ಮೇಲ್ಕಂಡ ಜಿಲ್ಲೆಗಳಲ್ಲಿ ಜಾನುವಾರುಗಳಿಗೆ ಮೇವು ಇಲ್ಲ. ಕುಡಿಯುವ ನೀರು ಇಲ್ಲ. ಜನರಿಗೆ ಕೂಲಿ ಕೆಲಸ ಇಲ್ಲ. ಇದರಿಂದ ಜನ ದೊಡ್ಡ ದೊಡ್ಡ ಪಟ್ಟಣಗಳಿಗೆ ವಲಸೆ ಬರುತ್ತಾರೆ. ಸ್ವಾಮಿ, ನಮ್ಮ ನವ ಮಂಗಳೂರು ಬಂದರಿನಲ್ಲಿ ಕೆಲಸಕ್ಕೆಂದು ಬೇರೆ, ಬೇರೆ ಸ್ಥಳಗಳಿಂದ ಬಂದಿದ್ದಾರೆ. ಅಲ್ಲಿ ಸ್ವಲ್ಪ ಕೂಲಿ ಕೂಡ ಜಾಸ್ತಿ ಕೊಡುತ್ತಾರೆ. ಆದ್ದರಿಂದ ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಈ ಗ್ರಾಮಾಭಿವೃದ್ಧಿ ಇಲಾಖೆಯಲ್ಲಿ ಜನರಿಗೆ ಅನುಕೂಲವಾಗುವಂತಹ ಒಳ್ಳೆಯ ಕೆಲಸಕಾರ್ಯಗಳನ್ನು ಮಾಡಬೇಕೆಂದು ಮತ್ತು ಜನತೆ ಹಳ್ಳಿಯಿಂದ ಪಟ್ಟಣಗಳಿಗೆ ತಂಡ ತಂಡವಾಗಿ ವಲಸೆ ಹೋಗುವುನ್ನು ತಪ್ಪಿಸುವುದಕ್ಕೆ ಸಮರ್ಥ ರೀತಿಯ ಕೆಲಸಕಾರ್ಯಗಳನ್ನು ಹಮ್ಮಿಕೊಳ್ಳಬೇಕೆಂದೂ ಸಹ ಹೇಳುತ್ತೇನೆ. ಮಾನ್ಯ ಮಂತ್ರಿಗಳು ಆ ಬಗ್ಗೆ ಸಮರ್ಥರಿದ್ದಾರೆ ಮತ್ತು ಅಂತಹ ಮನೋಭಾವನೆಯನ್ನು ಸಹ ಹೊಂದಿದ್ದಾರೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಗ್ರಾಮಗಳಲ್ಲಿ ಜನ ಇದ್ದರೆ ಒಂದು ಒಗ್ಗಟ್ಟು ಇರುತ್ತದೆ ಒಂದು ಶಕ್ತಿ ಇರುತ್ತದೆ. ರೈತ ಯಾವಾಗಲೂ ಗದ್ದೆಯಲ್ಲಿ ಕೆಲಸ ಮಾಡುವವನು. ಅವನು ಯಾವಾಗಲೂ ಮಣ್ಣಿನಲ್ಲಿ ಕೆಲಸ ಮಾಡುವವನು. ಆ ರೈತನ ಬಗ್ಗೆ ರಾಷ್ಟ್ರ ಕವಿ ಕುವೆಂಪುರವರು ಒಂದು ಮಾತನ್ನು ಹೇಳಿದ್ದಾರೆ ಅದೇನೆಂದರೆ "ರಾಜ್ಯಗಳಳಿಯಲಿ ರಾಜ್ಯಗಳುದಿಸಲಿ ಹಾರಲಿ ಗದ್ದುಗೆ ಮಕುಟಗಳು, ನೇಗಿಲು ಯೋಗಿ ಬಿತ್ತುಳುವುದನೆಂದೂ ಅವ ಬಿಡವುದೇ ಇಲ್ಲ" ಎನ್ನುವ ಒಂದು ಮಾತನ್ನು ಹೇಳಿದ್ದಾರೆ. ಈ ರಾಜ್ಯದಲ್ಲಿ ಎಷ್ಟೇ ಅರಸರು ಬರಲಿ, ಎಷ್ಟೇ ಕಿರೀಟಗಳು ಬೀಳಲಿ ರೈತರು ಮಾತ್ರ ಮಣ್ಣಿನಲ್ಲಿ ಯಾವಾಗಲೂ ಕೆಲಸ ಮಾಡಿಕೊಂಡಿರುತ್ತಾರೆ.

ಇನ್ನು ಬಹಳ ಮುಖ್ಯವಾದ ವಿಚಾರವೆಂದರೆ ಕೊಳವೆ ಬಾವಿಗಳು. ಈ ಸರ್ಕಾರ ಬಂದ ಮೇಲೆ ನೀರು ಇಲ್ಲದೆ ಇರುವಂತಹವರಿಗೆ ಕುಡಿಯುವ ನೀರನ್ನು ಒದಗಿಸಿ ಕೊಟ್ಟರು. ಎಷ್ಟೋ ಗ್ರಾಮಗಳಿಗೆ ಕುಡಿಯುವ ನೀರು ಇರಲಿಲ್ಲ. ಆದರೆ ಕುಡಿಯುವ ನೀರನ್ನು ಒದಗಿಸಿಕೊಟ್ಟರು. ಇದು ಸಹ ಪತ್ರಿಕೆಯಲ್ಲಿ ಬಂದಿದೆ. ನಾನು ಓದಿದ್ದೇನೆ. ಅವರ ಕೆಲಸ ನೋಡಿ ನನಗೂ ಕೂಡ ಬಹಳ ಸಂತೋಷವಾಯಿತು. ಒಳ್ಳೆಯ ಕೆಲಸವನ್ನು ಮಾಡಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ನೀರು ಮಂತ್ರಿಗಳು ಮತ್ತು ಬೋರ್ ಮಂತ್ರಿಗಳೆಂದೆ ಅವರಿಗೆ ಹೆಸರು ಬಂದುಬಿಟ್ಟಿದೆ.

ಶ್ರೀ ಬಿ. ಎಂ. ಇದಿನಬ್ಬ. — ಕೊಳವೆ ಬಾವಿಗಳನ್ನು ತೋಡಿಸಿದುದ್ದು ಒಂದು ಪ್ರಾಮುಖ್ಯವಾದ ಕೆಲಸ. ಅವರು ಹಾಕಿಕೊಂಡ ಈ ಯೋಜನೆ ಒಳ್ಳೆಯದು. ಯಾವುದೇ ಕೆಲಸವನ್ನು ಯಾರೇ ಮಾಡಿದರೂ ಒಟ್ಟಾರೆ ಜನರನ್ನು ಉದ್ಧಾರ ಮಾಡಬೇಕೆನ್ನುವುದೆ. ಇದು ಏನಾಯಿತು ಎಂದರೆ ಕೊಂಡಿಯಿಂದ ಕೊಂಡಿಗೆ ಕೈಯಿಂದ ಕೈಗೆ ಹೋಗಿ ಯಾರಿಗೆ ಮುಟ್ಟಬೇಕಾಗಿತ್ತೋ ಅವನಿಗೆ ಸರಿಯಾಗಿ ಮುಟ್ಟುವುದಿಲ್ಲ. ಇವೊತ್ತು ರಾಜ್ಯದಲ್ಲಿರುವಂತಹ ಕೊಳವೆ ಬಾವಿಗಳಲ್ಲಿ ಅರ್ಧಕ್ಕರ್ಧ ಕೊಳವೆ ಬಾವಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಇದರಿಂದ ಕಂಟ್ರ್ಯಾಕ್ಟ್‌ದಾರರು ಒಳ್ಳೆಯ ಹಣವನ್ನು ಸಂಪಾದನೆ ಮಾಡಿಕೊಂಡರು ಖಾಸಗಿ ಬೋರ್‌ವೆಲ್‌ಗಳನ್ನು ತರಿಸತಕ್ಕಂಥ ವಿಚಾರವನ್ನು ಪ್ರಸ್ತಾಪ ಮಾಡುವುದಾದರೆ ಸರ್ಕಾರಿ ಕೊಳವೆ ಯಂತ್ರಗಳು ಕಡಿಮೆ ಇವೆ ಎಂದು ಹೇಳಿ ಖಾಸಗಿಯವರಿಂದ ಕೊಳವೆ ಯಂತ್ರಗಳನ್ನು ತರಿಸಿದರು. ಸ್ವಾಮಿ ಇದರಿಂದ ಬರಗಾಲವಿರುವಂತಹ ಪ್ರದೇಶಗಳಲ್ಲಿ ಸಾಕಷ್ಟು ಅವ್ಯವಹಾರಗಳು ನಡೆದವು. ಒಂದೊಂದು ಕಡೆ ೫೦ ಅಡಿ ಕೂಡ ಕೊಳವೆ ಬಾವಿಯನ್ನು ತೋಡದೆ ಹಣವನ್ನು ಸಂಪಾದನೆ ಮಾಡಿರುವುದು ಕೂಡ ಇದೆ.

೫೦ ಫೂಟ್ ಆಳ ತೆಗೆದು ಅದು ಸರಿಯಲ್ಲ ಎಂದು ಬಿಡುತ್ತಾರೆ. ಕೆಲವೊಂದು ಕಡೆ ೫೦ ಫೂಟ್ ತೆಗೆದರೆ ಸ್ವಲ್ಪ ನೀರು ಬರುತ್ತದೆ. ಸ್ವಲ್ಪ ಸಮಯದಲ್ಲಿ ಆ ನೀರು ಆರಿ ಹೋಗುತ್ತದೆ, ಅದನ್ನು ಮತ್ತೆ ಆಳಮಾಡಬೇಕು. ೫೦ ಅಡಿ ಇದ್ದದನ್ನು ೭೦ ಅಡಿ ಮಾಡಿದರೂ ಕೂಡಾ, ನೀರು ಇರುವುದಿಲ್ಲ. ಅನೇಕರು ಹೇಳುವಂತಹ ಮಾತಿನ ಪ್ರಕಾರ ಇಷ್ಟು ಕಡೆ ೧೫೦ ಅಡಿ, ೨೦೦ ಅಡಿ ತೆಗೆದಿದ್ದೇವೆ ಎಂದು ಬಿಲ್ಲನ್ನು ಕೊಡುತ್ತಿದ್ದಾರೆ. ಈ ರೀತಿಯಾದ ಒಂದು ಸುಲಿಗೆಯನ್ನು ಖಾಸಗಿ ಕಂಟ್ರ್ಯಾಕ್ಟರುಗಳು ಕೊಳವೆ ಭಾವಿ ವಿಷಯದಲ್ಲಿ ಬಹಳಷ್ಟು ಹಣ ದೋಚುತ್ತಿದ್ದಾರೆ. ಒಳ್ಳೆಯ ಕೇಸಿಂಗ್ ಪೈಪ್‌ಗಳನ್ನು ಹಾಕುವುದಿಲ್ಲ. ಒಳ್ಳೆಯ ರೀತಿಯಲ್ಲಿ ಅದಕ್ಕೆ ಬೇಕಾದಂಥ ಪಂಪ್‌ಗಳನ್ನು ಹಾಕುವುದಿಲ್ಲ. ಈ ರೀತಿಯಲ್ಲಿ ಅನ್ಯಾಯವಾಗುತ್ತಿದೆ ಎಂಬುದು ನಮ್ಮ ಜಿಲ್ಲೆಯಲ್ಲಿ ಅನೇಕ ಕಡೆ ಹೇಳತಕ್ಕ ಮಾತು. ಇದರ ಕಡೆಗೆ ಮಾನ್ಯ ಮಂತ್ರಿಗಳು ಗಮನಹರಿಸಬೇಕೆಂದು ಹೇಳುತ್ತೇನೆ. ಕೆಲವು ಕಡೆ ಕೊಳವೆ ಬಾವಿಗಳನ್ನು ಸರಿಯಾದ ರೀತಿಯಲ್ಲಿ ಮಾಡುತ್ತಿದ್ದಾರೆ. ಸರಿಯಾದ ಕಡೆ ಹಾಕುತ್ತಿದ್ದಾರೆ. ಇದರಿಂದ ಅನೇಕರಿಗೆ ಸಂತೋಷವಾಗುತ್ತಿದೆ. ಆದರೆ ಕೆಲವೊಂದು ಕಡೆ ಕೊಳವೆ ಬಾವಿ ಮಾಡುವುದು ಎಲ್ಲಿ ಎಂದರೆ. ಮಾರ್ಗದ ಬದಿಯಲ್ಲಿ ಯಾರಿಗೂ ಬೇಡದ ಜಾಗದಲ್ಲಿ ಹಾಕಿಬಿಡುತ್ತಾರೆ. ಅಲ್ಲಿ ಕೇಳುವವರು ಯಾರೂ ಇಲ್ಲ. ಯಾವುದಾದರೂ ಹೋಟೆಲ್ ಪಕ್ಕದಲ್ಲಿ ಹಾಕಿ. ಅಲ್ಲಿ ಕಾಫಿ ಕುಡಿದು ಗಮ್ಮತ್ತು ಮಾಡಿ ಬರುತ್ತಾರೆ. ಅಲ್ಲಿ ಮನೆಗಳೇ ಇಲ್ಲ. ೧೦–೧೨ ಮನೆಗಳು ಇರತಕ್ಕಂಥ ಸಣ್ಣ ಸಣ್ಣ ಹಳ್ಳಿಗಳಲ್ಲಿ ಕೊಳವೆ ಬಾವಿಗಳನ್ನು ಹಾಕಬೇಕೇ ಹೊರತು ಎಲ್ಲೋ ಮಾರ್ಗದ ಬದಿಯಲ್ಲಿ ಯಾರೋ ಹೇಳಿದರು ಎಂದು ಹೋಟೆಲ್ ಹತ್ತಿರ ಹಾಕಿ, ಅದಕ್ಕೆ ೨೦–೨೫ ಸಾವಿರ ಖರ್ಚು ಮಾಡಿದರೆ, ಅದರಿಂದ ಜನಕ್ಕೆ ಉಪಯೋಗ ಇಲ್ಲ. ಈ ಹಣ ಸರಕಾರದ ಬೊಕ್ಕಸದ ಹಣ. ಎಲ್ಲರ ಹಣ. ಇಡೀ ರಾಜ್ಯದ ಜನತೆಯ ಹಣ ಈ ರೀತಿ ಪೋಲಾಗಬಾರದು ಎಂದು ಹೇಳತಕ್ಕ ಕಳಕಳಿ ನಮ್ಮದು. ನಾನು ಹೇಳತಕ್ಕಂಥ ಮಾತು ಟೀಕೆ ಎಂದು ಮಾನ್ಯ ನಜೀರ್ ಸಾಹೇಬರು ಯಾವರೀತಿಯಲ್ಲೂ ಭಾವಿಸಬಾರದು. ನಿಮ್ಮ ಭವಿಷ್ಯದಲ್ಲಿ ತಾವು ಇನ್ನೂ ಎತ್ತರಕ್ಕೆ ಏರಬೇಕೆಂದು ಹೇಳತಕ್ಕ ರೀತಿಯಲ್ಲಿ. ವಯಸ್ಸಿನಲ್ಲಿ ಹಿರಿಯನಾದ ನಾನು ಹೇಳುತ್ತಿದ್ದೇನೆ. ನಾನು ಹೇಳತಕ್ಕ ವಿಚಾರಗಳಲ್ಲಿ ಕೆಲವು ಕಹಿಯಾಗಿ ತಮಗೆ ಕಾಣಬಹುದು. ಅವು ಅಧಾರಕ್ಕೆ ಕಹಿಯಾದರೂ ಉದರಕ್ಕೆ ಸಿಹಿ ಎಂಬುದನ್ನು ತಾವು ತಿಳಿದುಕೊಳ್ಳಬೇಕು. ಈ ರೀತಿ ಕೊಳವೆ ಬಾವಿಗಳನ್ನು ಹಾಕುತ್ತಿದ್ದಾರೆ. ಜನಗಳಿರುವ ಕಡೆ ಹೋಗಿ, ಜನಗಳ ಮನೆಗಳು ಇರುವಲ್ಲಿ ಹೋಗಿ, ಜನಗಳಿಗೆ ಬೇಕಾದ ಕಡೆಯಲ್ಲಿ ಕೊಳವೆ ಬಾವಿಗಳನ್ನು ಹಾಕಿದರೆ ಸಂತೋಷವಾಗುತ್ತದೆ, ಆದರೆ ಅಧಿಕಾರಿಗಳು ಜೀಪ್ ಎಲ್ಲಿ ಹೋಗುತ್ತದೆ, ಲಾರಿ ಎಲ್ಲಿ ಹೋಗುತ್ತದೆ, ಅಲ್ಲಿಗೆ ಹೋಗಿ, ಯಾವುದೋ ಒಂದು ಅಂದಾಜು ಮಾಡಿ, ಯಾರೋ ಹೇಳಿದರು ಎಂದು ಅಲ್ಲಿ ಬೋರ್‌ವೆಲ್ ಹಾಕಿ ಬರುತ್ತಾರೆ. ತಾವು ಆದೇಶ ಕೊಟ್ಟಿರುತ್ತೇವೆಂದು ಹೇಳಿದ್ದೀರಿ. ಯಾವುದಿದ್ದರೂ ಕೂಡಾ ಆಯಾ ಶಾಸಕರನ್ನು ಕಾಣಬೇಕು ಅವರನ್ನು ಕೇಳಬೇಕು, ಆಯಾ ಕ್ಷೇತ್ರದ ಅವರನ್ನು ಕೇಳಿ ಎಲ್ಲಾ ವಿಚಾರಗಳನ್ನು ಮಾಡಬೇಕೆಂದು, ಈ ವಿಚಾರವನ್ನು ಹೇಳಿದ್ದೀರಿ ಎಂಬುದನ್ನು ಕೇಳಿದ್ದೇವೆ. ಇದು ಬಹಳ ಒಳ್ಳೆಯ ವಿಚಾರ. ಕೊಳವೆ ಬಾವಿಗಳು ಮಾತ್ರವೇ ಅಲ್ಲ, ತೆರೆದ ಬಾವಿಗಳೂ ಬಹಳ ಮುಖ್ಯ, ನಮ್ಮ ಜಿಲ್ಲೆಯಲ್ಲಿ ಹಾಗೂ ಇತರ ಕಡೆಗಳಲ್ಲಿ ಇದರ ಅಗತ್ಯ ಬೀಳಬಹುದು. ತೆರೆದ ಬಾವಿಗಳಿಗೆ ಬೋರ್‌ವೆಲ್‌ನಷ್ಟು ಹಣಬೇಕಾಗುವುದಿಲ್ಲ ಕಡಿಮೆ ವೆಚ್ಚದಲ್ಲಿ ಆಗುತ್ತವೆ ಎಂದು ಕೇಳಿದ್ದೇನೆ. ಅಧಿಕಾರಿಗಳು ಅದರ ಕಡೆಗೆ ಗಮನ ಕೊಡುವುದಿಲ್ಲ.

ತೆರೆದ ಬಾವಿ ಮಾಡಬೇಕೆಂದರೆ ಏತಕ್ಕೋ ಅವರಿಗೆ ಅಷ್ಟು ಇಷ್ಟ ಇಲ್ಲ. ಇದು ಏನು ಎಂದು ಗೊತ್ತಾಗುತ್ತಿಲ್ಲ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತಾಲ್ಲೂಕ್ ಬೋರ್ಡ್‌ನವರು ಕಮ್ಯೂನಿಟಿ ಡೆವೆಲಪ್‌ಮೆಂಟ್ ಸ್ಕೀಂನಲ್ಲಿ ಮಾಡಿರುವ ತೆರೆದಬಾವಿಗಳು ಹಾಗೇ ಬಿದ್ದಿವೆ. ಅದನ್ನೆಲ್ಲಾ ರಿಪೇರಿ ಮಾಡಿದರೆ ನಮ್ಮ ಕಡೆ ಬೇಕಾದಷ್ಟು ಬಾವಿಗಳಾಗುತ್ತವೆ, ಅದನ್ನು ನೋಡುವವರೂ ಇಲ್ಲ, ಕೇಳುವವರೂ ಇಲ್ಲ. ತಾಲ್ಲೂಕು ಬೋರ್ಡ್‌ಗಳು ಇದ್ದರೂ ಕೂಡಾ ಅದರ ಕಡೆ ನೋಡುತ್ತಿಲ್ಲ. ಆ ಬಾವಿಗಳ ಒಳಕ್ಕೆ ಮಣ್ಣು ಕುಸಿದು ಬಿದ್ದಿದೆ. ಈ ಕಮ್ಯೂನಿಟಿ ಪ್ರಾಜೆಕ್ಟ್‌ನಲ್ಲಿ ತೋಡಿದಂಥ ತೆರೆದ ಬಾವಿಗಳನ್ನು ಒಳ್ಳೆಯ ರೀತಿಯಲ್ಲಿ ರಿಪೇರಿ ಮಾಡಿ, ಕೆಲವು ಕಡೆ ಅದನ್ನು ಸ್ವಲ್ಪ ಆಳ ಮಾಡಿದರೆ ನಿಜವಾಗಿಯೂ ಕೂಡ ಜನರಿಗೆ ಅನುಕೂಲವಾಗುತ್ತದೆ. ಇದರ ಕಡೆಗೆ ಗಮನ ಹರಿಸಬೇಕೆಂದು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಇನ್ನೊಂದು ಪ್ರಮುಖವಾದಂಥ ವಿಚಾರ ಎಂದರೆ, ಎನ್.ಆರ್.ಇ.ಪಿ.ಯಲ್ಲಿ ಆಗತಕ್ಕ ಕೆಲಸಗಳನ್ನು ಮೊದಲು ಪಂಚಾಯತಿಯವರು, ಅದರ ಅಧ್ಯಕ್ಷರು ಸದಸ್ಯರು ಸೇರಿ ಮಾಡಿಸುತ್ತಿದ್ದರು. ಈಗ ಕಂಟ್ರಾಕ್ಟರುಗಳನ್ನು ಬಿ.ಡಿ.ಓ. ಆಫೀಸ್‌ನಲ್ಲಿ ವಿಲೇಜ್ ಅಕೌಂಟೆಂಟ್, ಎಂಜಿನಿಯರ್ ಇಬ್ಬರೂ ಕೂಡಿ ನೇಮಿಸಿ, ಅವರಿಗೆ ಕೆಲಸ ಕೊಡುತ್ತಿದ್ದಾರೆ. ಹಿಂದೆ ಪಂಚಾಯತಿ ಇದ್ದಾಗ, ಪಂಚಾಯಿತಿ ಮೆಂಬರ್‌ಗಳು ಆ ಕೆಲಸದ ತನಿಖೆ ಮಾಡಿ ನೋಡುತ್ತಿದ್ದರು. ಅದರ ವಿಚಾರ ನೋಡುತ್ತಿದ್ದರು ಯಾರು ಬಡವರಲ್ಲಿ ಬಡವರು ಇರುತ್ತಾರೋ ಅವರಿಗೆ ಕೊಡತಕ್ಕ ಕಾರ್ಯಕ್ರಮ ಸರಿಯಾಗಿ ಆಗುತ್ತಿದೆಯೋ ಇಲ್ಲವೊ ಸರಿಯಾಗಿ ಮಾಡಿದ್ದಾರೊ ಇಲ್ಲವೊ ಎಂಬುದನ್ನು ನೋಡತಕ್ಕ ಕಾರ್ಯಕ್ರಮ ಇತ್ತು. ಈಗ ಪಂಚಾಯಿತಿ ಮೆಂಬರ್‌ಗೂ ಇದಕ್ಕೂ ಸಂಬಂಧ ಇಲ್ಲ. ಪಂಚಾಯತಿ ಮೆಂಬರ್ಸ್ ಮಾಡತಕ್ಕ ಕೆಲಸವನ್ನು ಯಾರು ಮಾಡುತ್ತಾರೆ. ಇದು ಹೇಗೆ ಆಗುತ್ತದೆ. ಕಂಟ್ರಾಕ್ಟರುಗಳನ್ನು ವಿಲೇಜ್ ಅಕೌಂಟೆಂಟ್, ಎಂಜಿನಿಯರ್ ಅವರು ಬಿ. ಡಿ. ಓ. ಆಫೀಸ್‌ಗೆ ಕರೆಯಿಸಿ, ಎಲ್ಲರೂ ಸೇರಿ ಅವರಿಗೆ ಕಂಟ್ರಾಕ್ಟ್ ಕೊಡುತ್ತಾರೆ. ಇದರಿಂದ ಕಂಟ್ರಾಕ್ಟರುಗಳು ಉದ್ಯೋಗ ಇಲ್ಲದವರ ಸುಳ್ಳು ಲೆಕ್ಕ ತಯಾರಿಸಿ, ಸುಳ್ಳು ಬಿಲ್ ತಯಾರು ಮಾಡುತ್ತಾರೆ. ನಿಜವಾಗಿಯೂ ಇದು ಮುಟ್ಟುವ ಜನರಿಗೆ ಮುಟ್ಟುವುದಿಲ್ಲ ಯಾರನ್ನೋ ಸೇರಿಸಿ ಸುಳ್ಳು ಪಟ್ಟಿ ಕಳುಹಿಸಿಕೊಡುತ್ತಾರೆ ಬಡವರಲ್ಲಿ ಬಡವರು ಯಾರಿದ್ದಾರೆ ಅವರಿಗೆ ಇದು ಮುಟ್ಟುವುದಿಲ್ಲ. ಉದ್ಯೋಗ ಇಲ್ಲದವರ ಸುಳ್ಳು ಲೆಕ್ಕ ತಯಾರಿಸಿ, ಸುಳ್ಳು ಬಿಲ್ ಮಾಡುತ್ತಾರೆ. ಇದರಲ್ಲಿ ಕಾಮಗಾರಿ ಆಯಿತೋ ಇಲ್ಲವೋ ಎಂದು ಗೊತ್ತಾಗುವುದಿಲ್ಲ. ಸ್ಥಳೀಯ ಜನರಿಗೆ ಉದ್ಯೋಗ ಕೊಟ್ಟಂತೆ ಆಗುವುದಿಲ್ಲ ಉದ್ಯೋಗ ಇಲ್ಲದ ಕೃಷಿಕಾರ್ಮಿಕರಿಗೆ ಉದ್ಯೋಗವನ್ನು ಒದಗಿಸುವುದು ಇದರಿಂದ ತಪ್ಪುತ್ತದೆ. ಮೂಲ ಉದ್ದೇಶ ಸಫಲವಾಗುವುದಿಲ್ಲ. ಇದರ ಮೂಲ ಉದ್ದೇಶ ನಾಶವಾಗುತ್ತದೆ. ಹಣದ ಲೆಕ್ಕ ಹಾಗೂ ಕಾಮಗಾರಿ ನೋಡಿದರೆ ಒಂದಕ್ಕೊಂದಕ್ಕೆ ಸಾಗುವುದಿಲ್ಲ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಗಮನ ಹರಿಸಬೇಕು, ಅತೀ ಬಡವರಲ್ಲಿಬಡವರು ಯಾರು ಇದ್ದಾರೆ, ಅವರ ಕೆಲಸ ಸರಿಯಾಗಿ ಮಾಡಬೇಕು, ಅವರ ಉದ್ಧಾರ ಆಗಬೇಕು ಎಂಬ ಪರಿಸ್ಥಿತಿ ಇಲ್ಲ. ಯಾರಿಗೋ ಕೊಟ್ಟು ಕೆಲಸ ಮಾಡಿಸುತ್ತಾರೆ. ಆದರೆ ನಿಜವಾಗಿ ನಮ್ಮ ಉದ್ದೇಶ ನೋಡಿದರೆ ಅದು ಸಫಲವಾಗುವುದಿಲ್ಲ. ಅದರ ಕಡೆಗೆ ಮಾನ್ಯ ಮಂತ್ರಿಗಳು ಗಮನಹರಿಸಬೇಕೆಂದು ನಾನು ಹೇಳಿ ಕೇಳಿಕೊಳ್ಳುತ್ತೇನೆ. ಅದೇ ರೀತಿಯಲ್ಲಿ ಎನ್.ಆರ್.ಇ.ಪಿ.ಯಲ್ಲಿ ನಡೆಯುವ ರಸ್ತೆ ಕೆಲಸಗಳ ಮೇಲ್ವಿಚಾರಣೆ ನೋಡುವವರು ಯಾರಿದ್ದಾರೆ ? ಮೊದಲಿಗೆ ಪಂಚಾಯತಿಯವರು, ತಾಲ್ಲೂಕು ಬೋರ್ಡ್ ಸದಸ್ಯರು ಇದನ್ನು ನೋಡುತ್ತಿದ್ದರು. ಅವರು ಆಚೆ ಈಚೆ ಹೋಗದಂತೆ ನೋಡಿ ಹೆಚ್ಚು ಕಡಿಮೆ ಇದ್ದರೆ ಹೇಳುತ್ತಿದ್ದರು. ತಾಲ್ಲೂಕುಬೋರ್ಡ್ ಪಂಚಾಯಿತಿಗಳಲ್ಲಿ ಇವೊತ್ತು ದುಡ್ಡಿಲ್ಲ. ಪಿ.ಡಬ್ಲ್ಯೂ.ಡಿ. ಇಲಾಖೆಯವರು ಇದನ್ನು ಮಾಡುತ್ತಿದ್ದು, ಪಿ.ಡಬ್ಲ್ಯೂ.ಡಿ. ಇಲಾಖೆಯವರು ಅಲ್ಲಿವರೆಗೂ ಬರುವುದಿಲ್ಲ. ಮೇಲ್ವಿಚಾರಣೆ ನೋಡಿದಿದ್ದರೆ ಏನಾಗುತ್ತದೆ ಎಂದರೆ, ಎಲ್ಲಾ ಕಡೆಯಲ್ಲೂ ಮಾರ್ಗಗಳು ಹಾಳಾಗಿ ಬಹಳ ದುರವಸ್ಥೆ ಆಗುತ್ತದೆ. ಖರ್ಚು ಮಾಡಿದಂಥ ಹಣಕೂಡಾ ಉಪಯೋಗಕ್ಕೆ ಬರುವುದಿಲ್ಲ ಎಂಬ ಪರಿಸ್ಥಿತಿ ಬರುತ್ತದೆ. ಆದುದರಿಂದ ಸರಕಾರ ವರ್ಷವರ್ಷೇ ಹಣ ನಿಗದಿ ಮಾಡಿ ಪಂಚಾಯಿತಿಗಾಗಲೀ, ತಾಲ್ಲೂಕು ಬೋರ್ಡಿಗಾಗಲೀ, ಕೊಡುವ ವ್ಯವಸ್ಥೆ ಮಾಡಿದರೆ ನಿಜವಾಗಿಯೂ ಒಳ್ಳೆಯದಾಗುತ್ತದೆ.

ಅನುಸೂಚಿತ ಜಾತಿ, ಅನುಸೂಚಿತ ಪಂಗಡಗಳಿಗೆ, ಐ.ಆರ್.ಡಿ.ಪಿ.ಯಿಂದ ಸಿಗುವ ನೆರವು ಇದೆ, ವಿವಿಧ ಇಲಾಖೆಗಳಿಂದ ಸಿಗುವಂತಹ ನೆರವುಗಳನ್ನು ಬಡವರು ಪಡೆಯುತ್ತಾರೆ. ಬ್ಯಾಂಕುಗಳಿಂದ ಬಂಧಿವಂತರಿಗೆ, ಅಧಿಕಾರಿಗಳ ಸಂಪರ್ಕ ಇದ್ದವರಿಗೆ ಪ್ರಯೋಜನ ಸಿಗುತ್ತದೆ. ಅವರು ಮಾತ್ರ ಪ್ರಯೋಜನ

ಪಡೆಯುತ್ತಾರೆ. ನಿಜವಾಗಿ ಯಾವ ಅನುಸೂಚಿತ ಜಾತಿಯವನಿಗೆ ಇದು ಮುಟ್ಟಬೇಕು, ಬಡವನಿಗೆ, ಹಳ್ಳಿಯ ಮೂಲೆಯಲ್ಲಿರತಕ್ಕವನಿಗೆ ಇದು ಮುಟ್ಟಬೇಕು. ಅವರಿಗೆ ಮುಟ್ಟುತ್ತಿಲ್ಲ. ಆದರಲ್ಲಿ ಶಕ್ತಿ ಇದ್ದವರು, ಹಣವಂತರು ಅಧಿಕಾರಿಗಳ ಸಂಪರ್ಕ ಇದ್ದವರು, ಅಧಿಕಾರಿಗಳ ಕೃಪೆ ಇದ್ದಂಥವರು ಮಾತ್ರ ಇದನ್ನು ಕಬಳಿಸಿಕೊಳ್ಳುತ್ತಿದ್ದಾರೆ. ಇದು ಅವರಿಗೆ ಬೇಕಾದಂಥ ರೀತಿಯಲ್ಲಿ ಖರ್ಚಾಗುತ್ತದೆ. ಎಲ್ಲೋ ಮೂಲೆಯಲ್ಲಿರುವ ಅತೀ ಬಡವನನ್ನು ಕೇಳುವವರು ಯಾರೂ ಇಲ್ಲ. ಆದಕಾರಣ ಈ ಜಾತಿ ಪಂಗಡಗಳ ಸಮಗ್ರ ಸಮರ್ಪಕ ಸಮೀಕ್ಷೆಯನ್ನು ಪ್ರತಿ ಜಿಲ್ಲೆಯಲ್ಲೂ ನಡೆಸಬೇಕು. ನಾನು ಹೇಳಿದಂಥ ಜನರ ಸಮೀಕ್ಷೆಯನ್ನು ಪ್ರತಿ ಜಿಲ್ಲೆಯಲ್ಲೂ ನಡೆಸಬೇಕು. ಕಳೆದ ಮೂರು ವರ್ಷಗಳಿಂದ ಏನು ಸವಲತ್ತುಗಳು ಯಾವ ಯಾವ ಇಲಾಖೆಗಳಿಂದ ಏನು ಸವಲತ್ತುಗಳ ಯಾವ ಯಾವ ಇಲಾಖೆಗಳಿಂದ ಯಾರು ಯಾರಿಗೆ ಸಿಕ್ಕಿದೆ ಎಂಬ ದಾಖಲೆಗಳು ಇರಬೇಕು. ಯಾರಿಗೆ ಸಿಕ್ಕಿದೆಯೋ ಅವರನ್ನು ಬಿಟ್ಟು, ಇನ್ನು ಉಳಿದ ಬೇರೆಯವರಿಗೆ ಸಿಗುವಂತಹ ವ್ಯವಸ್ಥೆ ಮಾಡಬೇಕು. ಯಾರಿಗೆ ಸಿಕ್ಕಿದೆ ಯಾರಿಗೆ ಸಿಗಲಿಲ್ಲ ಎಂಬ ತುಲನಾತ್ಮಕ ಸಮೀಕ್ಷೆಯನ್ನು ಮಾಡಿ, ಅದನ್ನು ಪರಿಶೀಲನೆ ಮಾಡಿದರೆ ನೆರವು ಸಿಕ್ಕಿದವರು ಯಾರು, ನೆರವು ಸಿಗದವರು ಯಾರು ಎಂದು ಗುರುತಿಸುವುದಕ್ಕೆ ಸುಲಭವಾಗುತ್ತದೆ. ಇಂತಹ ಒಂದು ವ್ಯವಸ್ಥೆಯನ್ನು ಮಾಡಿದರೆ ಒಳ್ಳೆಯದು.

ಈ ಒಂದು ವ್ಯವಸ್ಥೆಯನ್ನು ಮಾಡಿದರೆ ಬಹಳ ಒಳ್ಳೆಯದು. ಅದೇ ರೀತಿಯಲ್ಲಿ ಐ.ಆರ್.ಡಿ.ಪಿ. ವಿಚಾರದಲ್ಲೂ ಸಬ್ಸಿಡಿ ಕೊಟ್ಟು, ಬಡವರು ಯಾಚನೆ ಮಾಡತಕ್ಕ ವ್ಯವಸ್ಥೆಯನ್ನು ಮಾಡುತ್ತಿದ್ದೀರಿ. ಇದನ್ನು ಬದಲಾವಣೆ ಮಾಡಬೇಕು. ಅಲ್ಲದೆ ಕೊಡತಕ್ಕ ಸವಲತ್ತನ್ನು ಒಂದೇ ಸಾರಿ ಕೊಟ್ಟರೆ ಒಳ್ಳೆಯದಲ್ಲವೇ? ಬೀಜ ಕೊಟ್ಟಿದ್ದಾರೆ, ಗೊಬ್ಬರ ಕೊಟ್ಟಿದ್ದಾರೆ, ಶಾಲೆ ಕೊಟ್ಟಿದ್ದಾರೆ, ಆಸ್ಪತ್ರೆ ಕೊಟ್ಟಿದ್ದಾರೆ, ಬಾವಿ ಮಾಡಿಕೊಟ್ಟಿದ್ದಾರೆ, ಇದು ನನಗೆ ಬಹಳ ಸಂತೋಷ. ಎಲ್ಲರನ್ನೂ ಒಳ್ಳೆಯ ರೀತಿಯಲ್ಲಿ ನೋಡಬೇಕು. ಪ್ರೀತಿಯಿಂದ ಕಾಣಬೇಕು. ಇಂದು ವಿಶ್ವಕ್ಕೆ ಎಚ್ಚರ ಎನ್ನುವ ಪರಿಸ್ಥಿತಿ ಇದೆ. ನಾನು ಹೇಳುವಂತಹ ಮೂಲ ಉದ್ದೇಶ. ಇವತ್ತು ಬೇಕಾದಷ್ಟು ಜಾಗ. ಬೇಕಾದಷ್ಟು ಬಾವಿ, ಕೈಗಾರಿಕೆ, ಕುಶಲ ಕೈಗಾರಿಕೆ ಎಲ್ಲಾ ವ್ಯವಸ್ಥೆಯನ್ನು ಮಾಡಿಕೊಟ್ಟಿರಿ. ಈ ರೀತಿಯಲ್ಲಿ ನೀವು ಚೂರು ಚೂರು ಸಬ್ಸಿಡಿ ಕೊಡುವುದನ್ನು ತಪ್ಪಿಸಬೇಕು. ಒಂದೂವರೆ ಸಾವಿರ ರೂಪಾಯಿ ಕೇಳಿದರೆ, ೫೦೦ ರೂಪಾಯಿಗಿಂತ ಹೆಚ್ಚಿಗೆ ಕೊಡುವುದಕ್ಕಾಗುವುದಿಲ್ಲ ಎನ್ನುತ್ತಾರೆ. ಇದರಿಂದ ಆತ ಪ್ರತಿ ವರ್ಷ ಸಾಲ ಬೇಕು, ಸಾಲ ಬೇಕು ಎಂದು ಹೇಳತಕ್ಕ, ಯಾಚನೆ ಮಾಡತಕ್ಕ, ಭಿಕ್ಷೆ ಬೇಡುವಂತಹ ಪರಿಸ್ಥಿತಿ ಬರುತ್ತದೆ. ಈ ರೀತಿಯಲ್ಲಿ ಆಗುತ್ತಿರುವ ವಿಚಾರದಲ್ಲಿ ಒಂದು ಸಮೀಕ್ಷೆಯನ್ನು ಮಾನ್ಯಮಂತ್ರಿಗಳು ನಡೆಸಿ, ಯೋಜನೆಯನ್ನು ಮಾಡಿದರೆ ಕಾರ್ಯಗತವಾಗುತ್ತದೆ. ನಾನು ಇಲ್ಲಿ ಈ ವಿಚಾರವನ್ನು ಹೇಳಿದರೆ ಅದರಿಂದ ಒಳ್ಳೆಯದಾದೀತು ಎಂದು, ಈ ಬಗ್ಗೆ ಮನಸ್ಸು ಇದ್ದರೆ ಮುಂದೆ ಯೋಜನೆ ಮಾಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ ಇಂತಹ ಯೋಜನೆಗೆ ಮಾನ್ಯಮಂತ್ರಿಗಳು ಮನಸ್ಸು ಮಾಡಬೇಕು. ಇನ್ನು ಕೆಲವು ಕಡೆ ಶಾಸಕರಿಗೂ, ಬಿ.ಡಿ.ಓ. ರವರಿಗೂ ಹೊಂದಾಣಿಕೆ ಇರುವುದಿಲ್ಲ. ಗ್ರಾಮಾಭಿವೃದ್ಧಿ ಕೆಲಸಗಳಲ್ಲಿ ಬಿ.ಡಿ.ಓ. ತಲೆಗೆ ಬಿದ್ದಂತೆ ಕೆಲಸದ ರಾಶಿ ಬಹಳ ದೊಡ್ಡದು. ಹಳ್ಳಿಯ ಜನರು ಆಫೀಸಿಗೆ ಹೋಗಿ ಕೆಲಸವಾಗದೆ, ವಾಪಸ್ ಹೋಗುತ್ತಿರುವುದನ್ನು ನೋಡಿದ್ದೇವೆ. ಆಫೀಸಿನಲ್ಲಿ ನಮ್ಮನ್ನು ನೋಡಲೇ ಇಲ್ಲ, ನಾಳೆ ಬನ್ನಿ ಎಂದು ಹೇಳಿದರು ಎಂದು ಹೇಳುವುದನ್ನು ನೋಡಿದ್ದೇವೆ. ಅವರಿಗೆ ಲೆಕ್ಕಕ್ಕಿಂತ ಹೆಚ್ಚು ಕೆಲಸ ಕೊಟ್ಟರೆ ಅವರು ಯಾವ ರೀತಿ ಕೆಲಸ ನಿರ್ವಹಿಸುತ್ತಾರೆ. ಈಗ ಒಬ್ಬ ಒಂದು ಪಾವು ಅಕ್ಕಿ ಅನ್ನವನ್ನು ಊಟ ಮಾಡುತ್ತಾನೆ, ಅದಕ್ಕಿಂತ ಹೆಚ್ಚು ಊಟ ಮಾಡಲು ಅವನಿಗೆ ಸಾಧ್ಯವಾಗುತ್ತದೆಯೋ ? ಅದೇರೀತಿ ಬಿ.ಡಿ.ಓ.ಗಳಿಗೆ ವರ್ಕ್‌ಲೋಡ್ ಜಾಸ್ತಿಯಾಗಿದೆ, ಅಲ್ಲದೆ ಈ ಬಿ.ಡಿ.ಓ.ಗಳಲ್ಲಿ ಎಲ್ಲರೂ ಒಳ್ಳೆಯವರಿದ್ದಾರೆಂದು ಹೇಳುವುದಕ್ಕಾಗುವುದಿಲ್ಲ, ಕೆಲವರು ಒಳ್ಳೆಯವರು ಇರಬಹುದು. ಒಳ್ಳೆಯವರು ಇದ್ದರೆ ಒಳ್ಳೆಯ ಕೆಲಸಗಳು ಆಗುತ್ತವೆ. ನಮ್ಮ ಜಿಲ್ಲೆಯ ವಿಚಾರ ಹೇಳುವುದಾದರೆ, ಕಳೆದ ವರ್ಷದ ಹಿಂದೆ ಒಳ್ಳೆಯ ಬಿ.ಡಿ.ಓ. ಕಂಡಿದ್ದೇವೆ. ಎಲ್ಲಾ ಕಡೆಗೂ ಅನುಸೂಚಿತ ಜಾತಿ, ಪಂಗಡದವರನ್ನೇ ತರಬೇಕೆಂದು ಇದ್ದೀರಿ ಕೆಲವು ಕಡೆ ನಾವು ಯಾವುದೇ ಕೆಲಸಕ್ಕೆ ಹೋದರೂ, ಆ ಕೆಲಸಗಳು ಆಗುವುದಿಲ್ಲ. ನಮ್ಮ ಊರಿನ ವಿಚಾರ ಹೇಳುತ್ತಿದ್ದೇನೆ. ಎಲ್ಲಿ ಲಾಭ ಸಿಗುತ್ತದೆ ಅಂತಹ ಕೆಲಸಗಳು ಆಗುತ್ತವೆ. ಸರ್ಕಾರ ಕೊಟ್ಟಂಥ ಕೆಲಸಗಳ ಬಗ್ಗೆ ಮಾತನಾಡುವುದಿಲ್ಲ ಎನ್ನುವ ವಿಚಾರ ಇದೆ. ಆದುದರಿಂದ ಒಳ್ಳೆಯ ಬಿ.ಡಿ.ಓ. ಗಳನು ತರುವುದು ಒಳ್ಳೆಯದು. ಪ್ರತಿಯೊಬ್ಬರೂ ಪ್ರಾಮಾಣಿಕವಾಗಿ ಕೆಲಸ ಮಾಡಬೇಕು. ನಾವೆಲ್ಲರೂ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಬೇಕು, ಇದು ದೇವರ ಅನುಗ್ರಹದಿಂದ ಬಂದರೆ ಒಳ್ಳೆಯದು.

ಆದುದರಿಂದ ಈ ಬಿ.ಡಿ.ಓ. ರವರ ವಿಚಾರದಲ್ಲಿ ಏನಾದರೂ ಹೊಸ ವ್ಯವಸ್ಥೆಯನ್ನು ಮಾಡಿ, ಜರೂರಾಗಿ ತುರ್ತಾಗಿ ಕೆಲಸಗಳು ಆಗುವುದಕ್ಕೆ ಸಾಧ್ಯವಿದೆಯೇ ಎನ್ನುವುದು ನನ್ನ ಅಭಿಪ್ರಾಯ. ಬ್ಯಾಂಕ್‌ನವರು ತೀರಾ ಬಡವರಿಗೆ ಸಾಲ ಕೊಡಲು ಹಿಂಜರಿಯುತ್ತಾರೆ ಅವರು ಯಾರು ಬಾಕಿ ಕೊಡುತ್ತಾರೆ ಅಂತಹವರನ್ನೇ ನೋಡುತ್ತಾರೆ. ಇದು ಯಾವಾಗಲೂ ಅವರ ತಲೆಯಲ್ಲಿ ಇರುತ್ತದೆ ಇನ್ನು ಐ.ಆರ್.ಡಿ.ಪಿನಲ್ಲಿ ಫಲಾನುಭವಿಗಳನ್ನು ಗುರುತಿಸುವುದರಲ್ಲಿ ಅನ್ಯಾಯವಾಗಿದೆ. ಫಲಾನುಭವಿಗಳನ್ನು ಆರಿಸುವ ಬಗ್ಗೆ ಗ್ರಾಮ ಸಭೆ ಮಾಡಿ ಆರಿಸಬೇಕು. ಈ ಗ್ರಾಮ ಸಭೆಯಲ್ಲಿ ಪಂಚಾಯಿತಿಯವರು, ತಾಲ್ಲೂಕು ಬೋರ್ಡ್‌ನವರು, ಶಾಸಕರು ಬ್ಯಾಂಕಿನವರು, ಸಹಕಾರ ಸಂಘಗಳವರು, ಮಹಿಳಾ ಮಂಡಲಿಯವರು, ಯೋಗ ಮಂಡಲಿಯವರನ್ನು ಕರೆದು ಬಡವರಲ್ಲಿ. ಬಡವರ್ಯಾರು ಎಂಬುದನ್ನು ಸಾರ್ವಜನಿಕವಾಗಿ ಗುರುತಿಸಬೇಕು ಅವರ ಅವಶ್ಯಕತೆಗಳನ್ನು ಅವರಿಂದಲೇ ತಿಳಿದು ಸಾಲ ಕೊಡಬೇಕು. ಬಹಳ ಹಿಂದೆ ಈ ರೀತಿಯಾಗಿ ನಡೆಯುತ್ತಿತ್ತು ಎಂಬುದನ್ನು ನಾನು ಕೇಳಿದ್ದೇನೆ. ಈ ರೀತಿ ಮಾಡಿದರೆ, ಯಾರು ಬಡತನದ ರೇಖೆಗಿಂತ ಕೆಳಗೆ ಇರುತ್ತಾರೆ ಅವರು ಈ ಸವಲತ್ತುಗಳನ್ನು ಪಡೆಯಲು ಅವರನ್ನು ಆರಿಸುವುದಕ್ಕೆ ಸಾಧ್ಯವಾಗುತ್ತದೆ. ಸಾಲವನ್ನು ಯಾವುದಕ್ಕೆ ಉಪಯೋಗ ಮಾಡುತ್ತಾರೆ ಎಂಬುದನ್ನು ಕೇಳಿ ಕೊಡಲು ಅನುಕೂಲವಾಗುತ್ತದೆ. ಇನ್ನು ಅನುಸೂಚಿತ ಜಾತಿಯವರನ್ನು ಕರೆದು ದನ ಕೊಟ್ಟರು ಬೇರೆ ಯಾವುದೋ, ಯಾವುದೋ ಕೊಟ್ಟರು. ಅನೇಕ ಸವಲತ್ತುಗಳು ಉಂಟು. ಯಾವುದು ಯಾರಿಗೆ ಬೇಕೋ ಅಂತಾದ್ದನ್ನು ಅವರಿಗೆ ಕೊಡುವುದು ಒಳ್ಳೆಯದು. ಅದು ಬಿಟ್ಟು ಅವನಿಗೆ ಬೇಡವಾದ ಸಾಮಗ್ರಿಗಳು ಇವೊತ್ತಿನ ದಿವಸ ಹಂಚಿಕೆಯಾಗುತ್ತಿವೆ. ಇನ್ನು ಹಸು ಕೊಡುವಂತಹ ಕಾರ್ಯಕ್ರಮ. ಇದರ ವಿಚಾರ ಹೇಳುವುದು ಬಹಳ ಕಷ್ಟ. ಒಂದೇ ಹಸುವಿಗೆ ಎಷ್ಟೋ ಸಾರಿ ಲೋನ್ ತೆಗೆದುಕೊಂಡ ಚಿತ್ರಗಳು ಇವೆ. ಈ ರೀತಿ ಮಾಡಿ ಯಾರ ಯಾರ ಹೆಸರಿನಲ್ಲಿ ಯಾರ್ಯಾರೋ ಸಾಲ ತೆಗೆದುಕೊಂಡಿದ್ದಾರೆ ಈ ರೀತಿ ತೆಗೆದುಕೊಂಡಿರುವುದನ್ನು ನಮ್ಮ ಜಿಲ್ಲೆಯಲ್ಲೇ ನೋಡಿದ್ದೇವೆ. ಇದು ಬೇರೆ ಬೇರೆ ಜಿಲ್ಲೆಗಳಲ್ಲೂ ಇರಬಹುದು. ಮುಂದುವರಿದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೇ ಈ ರೀತಿ ಇರುವುದಾದರೆ, ಮುಂದುವರಿಯದೇ ಇರತಕ್ಕ ಜಿಲ್ಲೆಗಳಲ್ಲೂ ಹೇಗೆ ಇರಬೇಕು? ಇದನ್ನು ಮಾನ್ಯ ಮಂತ್ರಿಗಳು ಆಲೋಚನೆ ಮಾಡಬೇಕು. ಇದು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೇ ಅಲ್ಲ ಇಡೀ ೧೯ ಜಿಲ್ಲೆಗಳಲ್ಲೂ ನಡೆಯುತ್ತಿರುವ ಚಿತ್ರ ಇದು ನಮ್ಮ ಕಣ್ಣ ಮುಂದೆ ಬರುತ್ತದೆ. ಬಡವರಿಗೆ ಹಸು ಕೊಡುವ ಕಾರ್ಯಕ್ರಮದಲ್ಲಿ ಅನ್ಯಾಯವಾಗುತ್ತಿದೆ. ಇದು ಒಂದು ರೀತಿಯಲ್ಲಿ ವ್ಯಾಪಾರವೆಂಬಂತೆ ನಡೆಯುತ್ತದೆ. ಮಂತ್ರಿಗಳು ಹಾಕಿಕೊಂಡ ವ್ಯವಸ್ಥಿತವಾದ ಕಾರ್ಯಕ್ರಮಗಳನ್ನು ಕೈಬಿಡಬಾರದೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ತಾವು ಮುಂಗಡ ಪತ್ರದಲ್ಲಿ ಗ್ರಾಮಾಭಿವೃದ್ಧಿ ಇಲಾಖೆಗೆ ಕೊಟ್ಟಂಥ ಕೇಂದ್ರದ ಪುರಸ್ಕೃತ ಹಣ, ೩೯.೦೯ ಕೋಟಿ ರೂಪಾಯಿಗಳು ಹಾಗೂ ೫೯.೮೧ ಇಷ್ಟು ಹಣ ಕೇಂದ್ರ ಕೊಟ್ಟಿದೆ, ಯೋಜನೆ ೬೩.೯೧ ಕೋಟಿ ರೂಪಾಯಿಗಳು ಆಗಿದ್ದರೂ ೫೯ ಕೋಟಿ ಚಿಲ್ಲರೆಗೆ ರಾಜ್ಯ ಸರ್ಕಾರ ಕೊಡತಕ್ಕಂಥಾದ್ದು ೪-ನಾಲ್ಕುವರೆ ಕೋಟಿ ಮಾತ್ರ.

ಶ್ರೀ ಅಬ್ದುಲ್ ನಜೀರ್‌ಸಾಬ್.—ಕೇಂದ್ರದ ಯೋಜನೆಗಳು ಎಂದರೆ, ಕೇಂದ್ರ ಸರ್ಕಾರ ಮಾರ್ಗದರ್ಶನ ಕೊಟ್ಟಿರತಕ್ಕ ಯೋಜನೆಗಳು. ಎನ್.ಆರ್.ಇ.ಪಿ.ಗೆ ಅವರು ೫೦ ಪರ್ಸೆಂಟ್, ನಾವು ೫೦ ಪರ್ಸೆಂಟ್ ಕೊಡುತ್ತೇವೆ. ಐ.ಆರ್.ಡಿ.ಪಿ. ಯೋಜನೆಗೂ ಕೇಂದ್ರದ್ದು ೫೦ ಪರ್ಸೆಂಟ್ ನಮ್ಮ ರಾಜ್ಯದ್ದು ೫೦ ಪರ್ಸೆಂಟ್. ಈಗ ೨೦ ಕೋಟಿ ರೂಪಾಯಿಗಳ ಯೋಜನೆಯನ್ನು ಮಾಡಿದರೆ ಅವರದು ೧೦ ಪರ್ಸೆಂಟ್, ನಮ್ಮದು ೧೦ ಪರ್ಸೆಂಟ್.

ಶ್ರೀ ಬಿ.ಎಂ. ಇದಿನಬ್ಬ.—ಇದೇ ರೀತಿಯಲ್ಲಿ ೧೯೮೪—೮೫ಕ್ಕೆ ೧.೭೬ ಕೋಟಿ, ಇದರಲ್ಲಿ ಕೇಂದ್ರ ೯೨ ಕೋಟಿ ಚಿಲ್ಲರೆ ಕೊಟ್ಟಿದೆ. ಈ ವಿಚಾರದಲ್ಲಿ ನಾವು ಹೇಳುವುದು ಇಷ್ಟೆ. ಕೇಂದ್ರವಾಗಲೀ, ರಾಜ್ಯವಾಗಲೀ ಜನರಿಗೆ ಉಪಕಾರ ಆಗತಕ್ಕಂಥಾದ್ದನ್ನು ಮಾಡಬೇಕು. ಇಲ್ಲಿ ಕೇಂದ್ರದವರು ಕೊಟ್ಟಿಲ್ಲ ಎನ್ನುವ ಪ್ರಶ್ನೆ ಬರಲಿಲ್ಲ. ಕಳೆದ ಸಲ ಕೇಂದ್ರದವರು ಯಾವುದೂ ಕೊಟ್ಟಿಲ್ಲ ಎಂದು ಹೇಳಿರುವುದನ್ನು ನಾವು ಪತ್ರಿಕೆಯಲ್ಲಿ ನೋಡಿದ್ದೇವೆ. ಒಟ್ಟಿನಲ್ಲಿ ಇದರಲ್ಲಿ ಜನರ ಹಿತವನ್ನು ಕಾಪಾಡುವುದು ಬಹಳ ಮುಖ್ಯ. ಇನ್ನು ಅಂತ್ಯೋದಯ ಇದು ರಾಜ್ಯದ ಕಾರ್ಯಕ್ರಮ. ೧೯೮೩—೮೪ರಲ್ಲಿ ಇದಕ್ಕೆ ಏನೂ ಖರ್ಚು ಮಾಡಿಲ್ಲ. ೧೯೮೪—೮೫ರಲ್ಲಿ ಏನೂ ಹೆಚ್ಚು ಖರ್ಚ್ ಮಾಡಿಲ್ಲ. ೧೯೮೫—೮೬ರಲ್ಲಿ ೧.೭೪ ಕೋಟಿ ರೂಪಾಯಿಗಳನ್ನು ಒದಗಿಸಿದ್ದು ಕಾಣುತ್ತದೆ. ಇದು ಬಹಳ ಪ್ರಚಾರ ಇರತಕ್ಕಂತದ್ದು ನಮ್ಮ ಕಾರ್ಯಕ್ರಮಗಳಲ್ಲೆಲ್ಲ ಹೆಚ್ಚು ಪ್ರಚಾರ ಇರತಕ್ಕಂಥ ವಿಚಾರ. ಇದರ ಬಗ್ಗೆ ೧೯೮೩—೮೪ರಲ್ಲಿ. ೧೯೮೪—೮೫ರಲ್ಲಿ ಏನೂ ಕೆಲಸ ಆಗಿಲ್ಲ, ಏಕೆ ಆಗಿಲ್ಲ ಎನ್ನುವ ವಿಚಾರವನ್ನು ಕೇಳಬೇಕಾಗಿದೆ.

೧-೩೦ ಪಿ.ಎಂ.

ಇನ್ನು ಅದೇ ರೀತಿಯಲ್ಲಿ ಕಾರ್ಮಿಕ ಮತ್ತು ಜೀತ ಪದ್ಧತಿಯಲ್ಲಿ ೧೯೮೩-೮೪ ಮತ್ತು ೧೯೮೪-೮೫ ವಿಶೇಷವಾಗಿ ಏನೂ ಹಣ ಖರ್ಚಾಗಿಲ್ಲ. ೧೯೮೫-೮೬ಕ್ಕೆ ೩ ಕೋಟಿ ೭೦ ಲಕ್ಷ ರೂಪಾಯಿಗಳನ್ನು ಇಟ್ಟಿರುವಂತೆ ಕಾಣುತ್ತದೆ. ೧೯೮೩-೮೪ ಮತ್ತು ೧೯೮೪-೮೫ರ ಕಾರ್ಯಕ್ರಮದಲ್ಲಿ ಈ ಬಗ್ಗೆ ಏತಕ್ಕೆ ತಾವು ಮನಸ್ಸು ಮಾಡಲಿಲ್ಲ ಎನ್ನುವ ಶಂಕೆ ನಮಗೆ ಕಾಣುತ್ತಾ ಇದೆ.

ಇನ್ನು ಅದೇರೀತಿಯಲ್ಲಿ ೧೮ ಪರ್ಸೆಂಟ್ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡದವರಿಗೆ ಕೊಡತಕ್ಕಂಥ ಕಾರ್ಯಕ್ರಮದಲ್ಲಿ ೧೨೫ ಲಕ್ಷ ೪೭ ಸಾವಿರ ರೂಪಾಯಿಗಳ ಪೈಕಿ ೧೦.೫೭ ಲಕ್ಷ ಮಾತ್ರ ಖರ್ಚಾಗಿದೆ. ಪ್ಲಾನಿಂಗ್ ಕಮೀಷನ್ನಿನವರ ಒಂದು ವರದಿ ಪ್ರಕಾರ ೮೨-೮೩ ರಲ್ಲಿ ಐಆರ್‌ಡಿಪಿ. ಮತ್ತು ಎನ್‌ಆರ್‌ಡಿಪಿ. ನಲ್ಲಿ ನಮ್ಮ ರಾಜ್ಯಕ್ಕೆ ೧೨ನೇ ಸ್ಥಾನ ಬಂದಿದೆ, ೧೯೮೩-೮೪ ರಲ್ಲಿ ೧೫ನೇ ಸ್ಥಾನ ಬಂದಿದೆ.

ಶ್ರೀ ಅಬ್ದುಲ್ ನಜೀರ್ ಸಾಬ್.— ಮಾನ್ಯ ಸದಸ್ಯರಿಗೆ ತಿಳಿಸಬೇಕಾದರೆ ಅವರು ಹಳೇ ರಿಪೋರ್ಟ್‌ನ್ನು ನೋಡಿರಬೇಕು. ಐ.ಆರ್.ಡಿ.ಪಿ. ಮತ್ತು ಎನ್.ಆರ್.ಡಿ.ಪಿ. ಪ್ರೋಗ್ರಾಂನಲ್ಲಿ ನಮ್ಮ ರಾಜ್ಯಕ್ಕೆ ಮೊದಲನೆಯ ಸ್ಥಾನ ಬಂದಿದೆ.

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್.—ಮಾನ್ಯ ಸದಸ್ಯರಿಗೆ ಲೇಟೆಸ್ಟ್ ಪೊಸಿಷನ್ ತಿಳಿಸಿಕೊಡಿ.

ಶ್ರೀ ಬಿ. ಎಂ. ಇದಿನಬ್ಬ.—ಪ್ಲಾನಿಂಗ್ ಕಮೀಷನಿನ ವರದಿಯ ಪ್ರಕಾರ ಕುಡಿಯುವ ನೀರನ್ನು ಒದಗಿಸುವುದರಲ್ಲಿ ನಮ್ಮ ರಾಜ್ಯಕ್ಕೆ ೩ನೆಯ ಸ್ಥಾನ ಬಂದಿದೆ. ಅದರಲ್ಲೂ ಈ ಡಿಪಿಎಪಿ ಪ್ರೋಗ್ರಾಂನಲ್ಲಿ ಕೂಡ ಈವೊತ್ತಿನ ಬರಗಾಲ ಪ್ರದೇಶಕ್ಕೆ ಕೊಟ್ಟಿರುವ ಹಣ ೧೯೮೪-೮೫ಕ್ಕೆ ೧೫.೩೦ ಕೋಟಿ ರೂಪಾಯಿಗಳಲ್ಲಿ ೧೦.೬೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ೧೯೮೪-೮೫ಕ್ಕೆ ಈ ಎನ್‌ಆರ್‌ಡಿಇಪಿಗೆ ಕೊಟ್ಟಿರುವ ಹಣ ೪೭.೬೫ ಕೋಟಿ ರೂಪಾಯಿಗಳು ಈ ಪೈಕಿ ೪೫.೦೫ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ ಉಳಿದಿದ್ದು ಏತಕ್ಕೆ ಖರ್ಚಾಗಲಿಲ್ಲ? ಇದಕ್ಕೆ ತಮ್ಮ ಉತ್ತರ ಬೇಕು. ಈವೊತ್ತು ಯಾವ ರೀತಿಯಲ್ಲಿ ನೋಡಿದರೂ ಸಹ ನಿಮ್ಮ ಇಲಾಖೆಯಲ್ಲಿ ಹಣವನ್ನು ಹೆಚ್ಚಾಗಿ ಖರ್ಚು ಮಾಡಲಿಕ್ಕೆ ಪ್ರಯತ್ನ ನಡೆದಿಲ್ಲ. ನಿಮ್ಮ ಸರ್ಕಾರ ಬಂದ ೨½ ವರ್ಷದ ಆಡಳಿತದಲ್ಲಿ ಹಲವಾರು ಕೆಲಸಗಳನ್ನು ನೀವು ಮಾಡಿರುವುದನ್ನು ನಾನು ನೋಡಿದ್ದೇನೆ. ಆದರೆ ನಿಜವಾಗಿಯೂ ಹೇಳಬೇಕಾದರೆ ಹಳ್ಳಿಯ ಜನರಿಗೆ ಇನ್ನೂ ಕೂಡ ಸರಿಯಾಗಿ ಈ ಯೋಜನೆಗಳು ಮುಟ್ಟುವುದಕ್ಕೆ ತಕ್ಕ ವ್ಯವಸ್ಥೆ ಆಗಲಿಲ್ಲ. ಇದಕ್ಕೆ ಅನೇಕ ಎಡೆತಡೆಗಳು ಇರುವುದನ್ನು ನಾವೇನು ಕಾಣುತ್ತಾ ಇದ್ದೇವೆ ಅದನ್ನು ಹೇಳುತ್ತೇನೆ. ಆಡಳಿತ ಯಂತ್ರದ ದೋಷದಿಂದ ಈ ರೀತಿಯಾಗುತ್ತಿದೆ. ನಾನು ಈ ರೀತಿ ಹೇಳಿದ ಮಾತ್ರಕ್ಕೆ ಆಡಳಿತದಲ್ಲಿರುವವರೆಲ್ಲರೂ ಕೆಟ್ಟವರು ಎಂದು ಹೇಳುವುದಿಲ್ಲ. ಒಳ್ಳೆಯವರೂ ಇದ್ದಾರೆ. ಹಾಗಿಲ್ಲದೇ ಹೋದರೆ ದೇಶ ನಾಶವಾಗುತ್ತದೆ. ಅದಕ್ಕಿಂತಲೂ ಜಾಸ್ತಿ ಕೆಟ್ಟವರು ಇದ್ದಾರೆ. ತಮಗೆ ಹೇಳಬೇಕಾದರೆ ಹಾಲಿನ ಹಂಡೆಗೆ ಒಂದು ತೊಟ್ಟು ಹುಳಿ ಹಾಕಿದರೂ ಸಾಕು ಎಲ್ಲಾ ಹುಳಿ ಆಗುತ್ತದೆ. ಅದೇ ರೀತಿಯಲ್ಲಿ ನಡೆಯುತ್ತಾ ಇದೆ. ಅಂದರೆ ಕೆಟ್ಟವರು ಅಥವಾ ಭ್ರಷ್ಟಾಚಾರಕ್ಕೆ ಮನಸ್ಸು ಮಾಡುವವರು ಹೆಚ್ಚಾಗಿರುವುದರಿಂದ ಹೀಗಾಗುತ್ತದೆ. ಇನ್ನೊಂದು ಉದಾಹರಣೆ ಹೇಳುವುದಾದರೆ ೫೦ ಕಾಸರ ಮರ ಇದ್ದ ಕಡೆ ೧೦ ಗಂಧದ ಮರ ಇದ್ದರೆ ಅದೂ ಕೂಡ ಕಾಸರ ಮರವಾಗುತ್ತದೆ. ಹಾಗೆಯೇ ೫೦ ಗಂಧದ ಮರ ಇರುವ ಕಡೆ ೧೦ ಕಾಸರ ಮರ ಇದ್ದರೆ ಅವೆಲ್ಲವೂ ಗಂಧದ ಮರ ಆಗುತ್ತವೆ. ಇದನ್ನೆಲ್ಲಾ ಕಣ್ಣಿನಲ್ಲಿ ಕಣ್ಣಿಟ್ಟು ನೋಡುತ್ತಾ ಇದ್ದೇವೆ. ಉದಾಹರಣೆಗೆ ೨೬-೫-೧೯೮೫ ರಂದು ನಮ್ಮ ಜಿಲ್ಲೆಯ ಉಸ್ತುವಾರಿ ಮಂತ್ರಿಗಳು ಮಂಗಳೂರಿಗೆ ಬಂದರು ತಾವು ಬಂದಾಗ ಜಿಲ್ಲೆಯ ಅಧಿಕಾರಿಗಳ ಸಭೆ ಆಯಿತು. ಅದಕ್ಕೆ ತಾವೇ ಅಧ್ಯಕ್ಷರಾಗಿ ಕುಳಿತುಕೊಂಡಿದ್ದೀರಿ. ತಾವು ಹಾಕಿಕೊಂಡಂಥ ಕಾರ್ಯಕ್ರಮ ನೋಡಿ ನನಗೆ ಬಹಳ ಸಂತೋಷವಾಯಿತು. ಪ್ರತಿಯೊಬ್ಬ ಅಧಿಕಾರಿಯನ್ನೂ ಏನು ಮಾಡಿದಿರಿ, ಏನು ಮಾಡಿದಿರಿ, ಎಂದು ಕೇಳಿದಿರಿ. ಯಾರ್‍ಯಾರು ಏನೇನು ಮಾಡಲಿಲ್ಲ, ಏತಕ್ಕೆ ಮಾಡಲಿಲ್ಲ, ಏನು ಕಡಿಮೆಯಾಗಿದೆ, ಎಂದೆಲ್ಲಾ ಕೇಳಿದಿರಿ, ಏನೂ ಕೊಡಲಿಲ್ಲ ಎಂದು ಹೇಳಿದಾಗ, ನಾವೆಲ್ಲಾ ಕೊಟ್ಟಿದ್ದೇವೆಲ್ಲಾ ಏತಕ್ಕೆ ಈ ಕೆಲಸಗಳಲೆಲ್ಲಾ ಆಗಲಿಲ್ಲ ಅಂತ ಎಂದು ಎಲ್ಲಾ ಕೇಳಿದಿರಿ. ಪ್ರತಿಯೊಬ್ಬರನ್ನೂ ಕರೆದು ಕರೆದು ಕೇಳಿದಿರಿ. ಶಾಸಕರನ್ನೂ ಕರೆದು ಅವರ ಎದುರಿಗೇನೇ ಪ್ರತಿಯೊಬ್ಬರನ್ನೂ ಕೇಳಿದಿರಿ. ನಜೀರ್ ಸಾಬ್‌ರವರು ಯಾರನ್ನೂ ಬಿಡಲಿಲ್ಲ ಇಷ್ಟಾದರೂ ಕೂಡ ಅವರು ಸರಿಯಾಗಿ ಕೆಲಸ ಮಾಡಿದ್ದರೆ,

ಮಾಡಲಿಲ್ಲ, ನಿಮ್ಮ ಎದುರಿಗೇ ಅವರು ಹೇಳಿದರು ಇದನ್ನು ಸೆಪ್ಟೆಂಬರ್, ಆಕ್ಟೋಬರ್ ವೇಳೆಗೆ ಮಾಡುತ್ತೇನೆಂದು ಉತ್ತರ ಕೊಟ್ಟಿದ್ದಾರೆ. ಮಂಜೂರಾದ ಕೆಲಸಗಳನ್ನೂ ಕೂಡ ಮಾಡಲಿಲ್ಲ. ತಮಗೆ ಹೇಳಬೇಕಾದರೆ ಉಲ್ಲಾಳ್‌ಗೆ ನಲ್ಲಿ ನೀರು ಕೊಡುವುದಕ್ಕೆ ೧೦ ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದ್ದೀರಿ, ಬೇಕಾದಷ್ಟು ಸಲ ಹೇಳಿದರೂ ಸಹ ಆ ಕೆಲಸ ಇನ್ನೂ ಆಗಿಲ್ಲ. ಅಲ್ಲಿಗೆ ನೀರು ಕೊಡುವ ವ್ಯವಸ್ಥೆಯನ್ನು ಇನ್ನೂ ಮಾಡಿಲ್ಲ. ಹಾಗೆಯೇ ಕೋಟ್ಟೇವಾರ್, ಪೆರುಮನ್ನೂರ್ ಇಲ್ಲಿಗೂ ಸಹ ನಲ್ಲಿ ನೀರು ಕೊಡುವ ವ್ಯವಸ್ಥೆ ಇನ್ನೂ ಮಾಡಿಲ್ಲ. ಈ ರೀತಿಯಾಗಿ ಅನೇಕ ಕಡೆಗಳಲ್ಲಿ ಮಂಜೂರಾದ ಕೆಲಸಗಳು ಮಾಡದೇ ನಿಂತು ಹೋಗಿದೆ ಏತಕ್ಕೆ ಹೀಗೆ ಆಯಿತು ? ಹಾಗಾದರೆ ಒಳಗೆ ಏನೋ ನಡೆಯುತ್ತದೆ ಎಂದು ಜನ ತಿಳಿದ ಹಾಗಾಯಿತು. ಅನೇಕ ಕಂಟ್ರಾಕ್ಟರ್‌ಸ್‌ನ್ನು ಅವರ ಇಂಜಿನೀಯರ್ಸ್ ಅವರ ಊರಿನವರನ್ನೇ ತರುತ್ತಾರೆ, ಆ ಊರಿನವರಿಗೆ ಕೊಡುವುದಿಲ್ಲ ಅವರಿಗೆ ಬೇಕಾದವರಿಂದಲೇನೆ ಕಟ್ರಾಕ್ಟ್ ಕೆಲಸ ಮಾಡಿಸಬೇಕು. ಅದರಿಂದ ಯಾವ ಕೆಲಸವೂ ಆಗುವುದಿಲ್ಲ. ಅಲ್ಲಿ ಏನು ನಡೆಯುತ್ತಿದೆ ಅವೆಲ್ಲವನ್ನೂ ಸಹ ನಾನು ಕೇಳಿದ್ದೇನೆ. ಅಧಿಕಾರಿಗಳ ಬಗ್ಗೆ ಜನರಲ್ಲಿ ಏನು ಇದೆ ಎನ್ನುವುದೂ ತಮಗೆ ಗೊತ್ತು. ನಿಮಗೆ ಆ ಬಡವರಿಗೆ ಕೆಲಸಗಳನ್ನು ಮಾಡಿಸಿಕೊಡಬೇಕೆನ್ನುವ ಉದ್ದೇಶ ಇದೆ, ನಿಮ್ಮ ಹೃದಯವೂ ಹಾಗೆಯೇ ಇದೆ, ನಿಮ್ಮ ಅಂತರಾಳದಲ್ಲಿಯೂ ಹಾಗೆಯೇ ಇದೆ. ನಮ್ಮೆಲ್ಲರ ಇಚ್ಛೆಯೂ ಹಾಗೆಯೇ ಇದೆ. ಜನ ಯಾವತ್ತೂ ಕೂಡ ಉತ್ಪ್ರೇಕ್ಷೆಯಿಂದ ಮಾತನಾಡುವುದಿಲ್ಲ. ಈ ಕಾರ್ಯಕ್ರಮಗಳ ವಿಚಾರದಲ್ಲಿ ನೀವು ಅಲ್ಲಿಗೆ ಬಂದಿದ್ದಾಗ ಎಲ್ಲಾ ಜನರನ್ನೂ ಕರೆಸಿದ್ದೀರಿ, ಹೇಳಿದ್ದೀರಿ. ಆಮೇಲೆ ನಿಮ್ಮ ಮನಸ್ಸಿಗೆ ಸಮಾಧಾನವಾದ ಮೇಲೆ ನಾನು ಹೇಳುವಂಥಾದ್ದು ಏನೆಂದರೆ ಮಂತ್ರಿಗಳಾಗಿ ನೀವು ಹೇಳಿದ್ದು ಸರಿಯೋ ನಾವು ಹೇಳಿದ್ದು ಸರಿಯೋ ಅದನ್ನು ತಾವು ಪರಿಶೀಲನೆ ಮಾಡಿದರೆ ಅದರ ಗುಟ್ಟು ಸಿಕ್ಕುತ್ತದೆ, ಅದಕ್ಕೆ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಮಾನ್ಯ ಸಭಾಧ್ಯಕ್ಷರೇ ಅದೇರೀತಿಯಲ್ಲಿ ನಮ್ಮ ಮಂಗಳೂರು ಸಭೆಯಲ್ಲಿ ತಾವು ಬಂದಿದ್ದಾಗ ಎಲ್ಲಾ ಶಾಸಕರನ್ನೂ ಕರೆಸಿದಿರಿ. ಅದರಲ್ಲಿ ಒಬ್ಬ ಶಾಸಕರು ಈ ಕೆಲಸಕಾರ್ಯಗಳಿಗೆ ಹಣದ ಕೊರತೆ ಏನಾದರೂ ಇದೆಯೇ ಎಂದು ಕೇಳಿದಾಗ ಇಲ್ಲ ಇಲ್ಲ, ಸಾಕಷ್ಟು ಹಣವನ್ನು ಕೊಡಲಾಗಿದೆ, ಎಷ್ಟು ಹಣಬೇಕೋ ಅಷ್ಟು ಹಣವನ್ನು ಕ್ಲಿಯರ್ ಮಾಡಿದ್ದೇವೆ, ಆದರೆ ಅವರು ಕೆಲಸ ಮಾಡಲಿಲ್ಲ ಎಂದು ಹೇಳಿದ್ದು ಇನ್ನೂ ಕೂಡ ನಮ್ಮ ಕಣ್ಣುಮಾಂದೆ ಕಾಣುತ್ತಾ ಇದೆ. ಈ ರೀತಿಯಾಗಿ ತಾವು ಹೇಳಿದ ಮೇಲೆ ಆ ಅಧಿಕಾರಿಗಳು ಆ ಕೆಲಸಗಳನ್ನು ಮಾಡುವುದಿಲ್ಲ ಎಂದರೆ ಯಾವ ಅಧಿಕಾರಿ ಆ ಕೆಲಸ ಮಾಡುವುದಿಲ್ಲ ಅಂಥಾವರ ಮೇಲೆ ಉಗ್ರವಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ

ಇನ್ನು ಫಲಾನುಭವಿಗಳಿಗೆ ತಾವು ಏನು ಒಂದು ಕಾರ್ಯಕ್ರಮ ಇಟ್ಟುಕೊಂಡಿದ್ದೀರೊ ಅವರ ಬಗ್ಗೆ ಹೇಳಬೇಕಾದರೆ ವಿಲೇಜ್ ಅಕೌಂಟೆಂಟ್ ಮತ್ತು ಬ್ಯಾಂಕ್‌ನವರು ಸೇರಿ ಒಂದು ತಾಲ್ಲೂಕಿಗೆ ೧೦೦ ಜನರಿಗೆ ದೋಣಿ ತೆಗೆದುಕೊಳ್ಳಲು ಸಹಾಯ ಮಾಡುವುದು. ೨೦೦ ಜನರಿಗೆ ಹಸುಗಳನ್ನು ತೆಗೆದುಕೊಳ್ಳಲು ಸಹಾಯ ಮಾಡುವುದು, ಮತ್ತು ೫೦ ಜನರಿಗೆ ಹಸುಗಳನ್ನು ತೆಗೆದುಕೊಳ್ಳುವುದಕ್ಕೆ ಸಹಾಯ ಮಾಡುವುದು ಈ ಕೆಲಸ ಏನು ಇದೆ ಈಗ ಇದಕ್ಕೆ ತದ್ವಿರುದ್ಧವಾಗಿ ನಡೆಯುತ್ತಾ ಇದೆ. ಹಳ್ಳಿಗಳಲ್ಲಿ ಈ ಕೆಲಸ ಸರಿಯಾಗಿ ನಡೆಯುತ್ತಾ ಇಲ್ಲ ಅಲ್ಲಿ ಇಲ್ಲಿ ಒಂದೊಂದು ಕೆಲಸ ಆಗುತ್ತಾ ಇದೆ. ಇದಕ್ಕೆ ಸರಿಯಾದ ವ್ಯವಸ್ಥೆ ಇಲ್ಲ. ಇದು ಬಹಳ ಪ್ರಾಮುಖ್ಯವಾದುದು ತಾವು ಇದರ ಬಗ್ಗೆ ಗಮನಹರಿಸಬೇಕು ಎಂದು ನಾನು ಹೇಳುತ್ತೇನೆ.

ಇನ್ನು ಅದೇರೀತಿಯಲ್ಲಿ ನಮ್ಮ ದಕ್ಷಿಣ ಕನ್ನಡ ಕರಾವಳಿಯಲ್ಲಿ ಉಲ್ಲಾಳ್‌ನಿಂದ ಬೈಂದೂರ್‌ರವರೆಗೂ ನೋಡಿದರೆ ಎಲ್ಲಿ ಬಾವಿ ತೋಡಿದರೂ ಸಹ ಮಳೆಗಾಲದಲ್ಲಿ ಕೆಸರು ಬರುತ್ತದೆ ಬೇಸಿಗೆ ಕಾಲದಲ್ಲಿ ಉಪ್ಪು ನೀರು ಬರುತ್ತದೆ ಇದರಿಂದ ಅಲ್ಲಿಯ ಜನರಿಗೆ ಕುಡಿಯುವ ನೀರಿಗೆ ಬಹಳ ತೊಂದರೆಯಾಗಿದೆ. ಆದುದರಿಂದ ಕರಾವಳಿ ಪ್ರದೇಶದಲ್ಲಿ ಉಪ್ಪು ಇರತಕ್ಕಂಥ ಸ್ಥಳದಲ್ಲಿ ಸ್ವಲ್ಪ ದೂರದಲ್ಲಿ ನಲ್ಲಿ ನೀರನ್ನು ಉಪಯೋಗ ಮಾಡುವ ಹಾಗೆ ಒಂದು ವ್ಯವಸ್ಥೆ ಮಾಡಿದರೆ ಬಹಳ ಉತ್ತಮವಾಗುತ್ತದೆ, ಆ ಜನರಿಗೂ ಸಹ ಸಂತೋಷವಾಗುತ್ತದೆ. ಮಾನ್ಯ ಮಂತ್ರಿಗಳು ಉಲ್ಲಾಳ್, ಬೈಂದೂರು ಕಡೆಗೆ ವಿಶೇಷ ಗಮನ ಕೊಡಬೇಕೆಂದು ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ.

ಇನ್ನು ಮಾನ್ಯ ಮಂತ್ರಿಗಳು ಬಹಳ ಉತ್ಸಾಹದಿಂದ ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಆದರೆ ಅಧಿಕಾರಿಗಳ ಕೆಲವು ದೋಷಗಳಿಂದ ಜನರಿಗೆ ಉಪಯೋಗವಾಗುವಂಥ ಕೆಲಸ ಆಗುತ್ತಾ ಇಲ್ಲ ಎನ್ನುವುದು ಹಾಗೂ ಎಲ್ಲಾ ಜಿಲ್ಲೆಗಳಲ್ಲೂ ಇವರು ಏನು ಸುಧಾರಣೆ

ಮಾಡಬೇಕೆಂದಿದ್ದಾರೋ ಅದು ಸರಿಯಾಗಿ ಆಗುವುದಿಲ್ಲ ಎನ್ನುವುದು ಅನೇಕ ಮಾನ್ಯ ಸದಸ್ಯರಲ್ಲಿ ತಿಳಿದುಕೊಂಡ ವಿಚಾರವಾಗಿದೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ವಿಚಾರದ ಬಗ್ಗೆ ಹೇಳುವುದಾದರೆ ಕಳೆದ ಸಾರಿ ನಮಗೆ ೯೦೦ ಕೊಳವೆ ಬಾವಿಗಳನ್ನು ಕೊಟ್ಟಿದ್ದಾರೆ. ಈ ವರ್ಷ ಸಾವಿರದ ಹತ್ತಿರ ಕೊಡುವ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದಾರೆ. ನನ್ನ ಕ್ಷೇತ್ರದಲ್ಲಿ ಕೆಲವು ಕೈಪಂಪು ಹಾಳಾಗಿ ಹೋಗಿವೆ. ೧-೨ ತಿಂಗಳಾದರೂ ಕೂಡ ಅದನ್ನು ಸರಿ ಮಾಡುವುದಿಲ್ಲ. ಅವರು ಬಡಪಟ್ಟಿಗೆಗೆ ಕೆಲಸ ಮಾಡುವುದಿಲ್ಲ ಏತಕ್ಕೆ ಹೀಗಾಯಿತು ಎನ್ನುವುದನ್ನು ವಿಚಾರಿಸುವುದೂ ಇಲ್ಲ. ಮಾನ್ಯ ಮಂತ್ರಿಗಳಿಗೆ ಬಡವರಿಗೆ ಅನುಕೂಲ ಮಾಡಿಕೊಡಬೇಕು ಎನ್ನುವ ಉದ್ದೇಶದಿಂದ ಈ ಕಾರ್ಯಕ್ರಮಗಳನ್ನು ಹಾಕಿಕೊಂಡರೆ ಅದೇ ರೀತಿಯಾಗಿ ಅಧಿಕಾರಿಗಳಲ್ಲಿ ಅವರಿಗೆ ಈ ಕೆಲಸವನ್ನು ಮಾಡಿಕೊಡಬೇಕು ಎನ್ನುವ ಮನಸ್ಸು ಬಾರದೇ ಇರುವುದರಿಂದ, ಈ ಬಗ್ಗೆ ಸರ್ಕಾರದವರು ಯಾವ ಕಾರ್ಯಕ್ರಮಗಳನ್ನು ಹಾಕಿಕೊಂಡರೂ ಸಹ ಅದು ಸುಧಾರಣೆಯಾಗುವುದಿಲ್ಲ. ಹೀಗಾಗಿ ಅನೇಕ ಸಲ ಕೆಲವು ಕಾರ್ಯಕ್ರಮಗಳು ಕೈಬಿಟ್ಟು ಹೋಗಿವೆ. ಹೀಗಾದರೆ ಬಾವಿಗೆ ನೀವು ೨೦-೨೫ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದರೂ ಕೂಡ ನಿಮ್ಮ ಗುರಿಯನ್ನು ಮುಟ್ಟುವುದಕ್ಕೆ ಆಗುವುದಿಲ್ಲ.

ಕೆಲವು ಕಡೆ ಬಾವಿ ತೋಡಿದರೆ ಒಂದುತರಹದ ಮಿಶ್ರಣದ ನೀರು ಬಂದಿದೆ. ಅದನ್ನು ಪರೀಕ್ಷೆ ಮಾಡಿ, ಸರಿ ಮಾಡಲಿಕ್ಕೆ ಸಾಧ್ಯವುಂಟು. ಉಲ್ಲಾಳದ ಅಕ್ಕರಕೆರೆಯಲ್ಲಿ ಬಾವಿ ತೋಡಿಸಿ ಮೇಲೆ ಸಮ್ಮಿಶ್ರಣದ ಹಳದಿ ಬಣ್ಣದ ನೀರು ಬಂತು. ಆಗ ಜನರು ಅರ್ಜಿ ಕೊಟ್ಟರು. ಕುಡಿಯುವ ನೀರು ಕೊಡಿ ಎಂದು ಕೇಳಿದರು. ಇಷ್ಟರವರೆಗೆ ಅದನ್ನು ನೋಡಲಿಕ್ಕೆ ಯಾರೂ ಹೋಗಲಿಲ್ಲ. ಒಂದುವೇಳೆ ಅದನ್ನು ಪರೀಕ್ಷೆಮಾಡಿ ಸುಧಾರಣೆ ಮಾಡಲಿಕ್ಕೆ ಸರಿಯಾದರೆ ಕುಡಿಯುವ ನೀರು ಸಿಗುವಂತೆ ಆದರೆ ಒಳ್ಳೆಯದು. ಇಲ್ಲವಾದರೆ ಬೇರೆ ಎಲ್ಲಿಯಾದರೂ ಬಾವಿ ತೋಡುವಂಥ ವ್ಯವಸ್ಥೆ ಮಾಡುವುದಕ್ಕೆ ಆಗುತ್ತದೆಯೋ ನೋಡಿ. ಇವೊತ್ತು ಈ ಕೊಳವೆ ಬಾವಿಗಳ ಮಟ್ಟಿನಲ್ಲಿ ಒಳ್ಳೆಯ ಕೆಲಸ ಆದರೂ ಕೂಡ ಕೆಲವು ಕಡೆ ಬಾವಿಗಳಿದ್ದರೂ ಸಹ ನೀರು ಸಿಕ್ಕದೇ ಇರುವ ಸ್ಥಿತಿ ಇದೆ. ಉಲ್ಲಾಳದಲ್ಲಿ ೬೦ ಮೀಟರ್ ತೋಡಿದ್ದಾರೆ ಅದರ ಮೇಲೆ ಗೋಣಿ ಹಾಕಿದ್ದಾರೆ. ನಿಮ್ಮಲ್ಲಿ ಬೇಕಾದಂಥ ತಾಂತ್ರಿಕ ತಜ್ಞರು ಇದ್ದಾರೆ. ಎಲ್ಲಿ ಒಳ್ಳೆಯ ಸ್ಥಳ ಇದೆ, ಎಲ್ಲಿ ಬಾವಿ ತೋಡಬೇಕು ಎಂದು ನೋಡುವುದಕ್ಕೆ ಬೇರೆಯವರನ್ನು ಹುಡುಕಬೇಕಾದ್ದಿಲ್ಲ, ನಿಮ್ಮಲ್ಲಿ ಬೇಕಾದಂಥ ತಜ್ಞರಿದ್ದಾರೆ. ಅಂತಹವರನ್ನು ಕರೆದುಕೊಂಡು ಹೋಗಿ ಎಲ್ಲಿ ಜನರಿಗೆಬೇಕೋ ಅಲ್ಲಿ ಬಾವಿ ತೋಡುವಂಥ ವ್ಯವಸ್ಥೆ. ಎಲ್ಲಿ ನೀರು ಸಿಗುತ್ತದೋ ಅಲ್ಲಿ ಬಾವಿ ತೋಡುವಂಥ ವ್ಯವಸ್ಥೆ ಆಗಬೇಕು, ಆ ರೀತಿ ಹೆಚ್ಚಿನ ಕಡೆಗಳಲ್ಲಿ ಆಗಲಿಲ್ಲ. ಎಲ್ಲಿ ನೀರು ಉಂಟು, ಎಲ್ಲಿ ಜನಗಳು ಕೇಳಿದ್ದಾರೋ, ೧೦-೧೫ ಮನೆಗಳು ಎಲ್ಲಿ ಉಂಟು ಅಲ್ಲಿ ಪರೀಕ್ಷೆಮಾಡಿ ಆ ರೀತಿ ನೀರು ಕೊಡುವಂಥ ವ್ಯವಸ್ಥೆಯಾಗಬೇಕು. ಮಾರ್ಗದ ಬದಿಯಲ್ಲಿ ಹಾಕಿದರೆ ಜನರು ಕೈಕಾಲು ತೊಳೆದುಕೊಂಡು ಹೋಗತಕ್ಕ ಪರಿಸ್ಥಿತಿಗೆ ಬರಬಹುದು. ನೀರಿಲ್ಲದೆ ಹಾಹಾಕಾರ ಮಾಡುವಂಥ ಬಡ ಜನರಿಗೆ ನೀರು ಕೊಡುವಂತೆ ಆಗಬೇಕು. ಈ ಬಗ್ಗೆ ತಾವು ಗಮನ ಕೊಡಬೇಕು ಎಂದು ಮಾನ್ಯ ಅಧ್ಯಕ್ಷರ ಮುಖಾಂತರ ತಮ್ಮ ಗಮನವನ್ನು ಸೆಳೆಯುತ್ತಾ ಇದ್ದೇನೆ. ಇನ್ನು ಈ ವಿಚಾರದಲ್ಲಿ ಬಹಳ ದೀರ್ಘವಾಗಿ ಹೇಳಲಿಕ್ಕೆ ನಾನು ಅಪೇಕ್ಷೆ ಪಡುವುದಿಲ್ಲ

ವಕ್ಫ್ ಇಲಾಖೆ ಬಗ್ಗೆ ಹೇಳುವುದಾದರೆ ವಕ್ಫ್ ಇಲಾಖೆ ಶಮಂಗೆ ಇದೆ. ಇದು ಬಹಳ ಪ್ರಾಮುಖ್ಯವಾದಂಥ ಇಲಾಖೆ. ಅದು ಒಂದು ಇಲ್ಲಿಯವರೆಗೆ ನಿರ್ಜೀವವಾದ ಸಂಸ್ಥೆಯಾಗಿದೆ. ವಕ್ಫ್ ಅಂದರೆ ಎದ್ದು ಕುಣಿಯಬೇಕಾಗಿತ್ತು. ಕರ್ನಾಟಕ ರಾಜ್ಯದಲ್ಲಿರತಕ್ಕಂಥ ೭೦ ಲಕ್ಷ ಅಲ್ಪಸಂಖ್ಯಾತರ ಉಪಕಾರ ಮಾಡತಕ್ಕಂಥ ಅವರ ಅಭ್ಯುದಯವನ್ನು ಕೋರತಕ್ಕಂಥ, ಅವರನ್ನು ಮೇಲೆತ್ತತಕ್ಕಂಥ, ಅವರಿಗೆ ಶಕ್ತಿ ಕೊಡತಕ್ಕಂಥ ಈ ಸಂಸ್ಥೆ ಈಗ ನಿರ್ಜೀವವಾಗಿದೆ. ಇದು ಒಂದು ಬೋರ್ಡ್ ಇದೆ ಇದರಲ್ಲಿ ಅಧ್ಯಕ್ಷರು, ಸದಸ್ಯರಿದ್ದಾರೆ, ಅವರು ಏನು ಕೆಲಸ ಮಾಡುತ್ತಾರೆ, ಏನು ಮಾಡಿದ್ದಾರೆ. ಇದು ನಾನು ಕಳಕಳಿಯಿಂದ ಹೇಳಬೇಕಾದಂಥ ವಿಚಾರ. ಅಲ್ಪಸಂಖ್ಯಾತರಾದ ಮುಸಲ್ಮಾನ್ ಬಂಧುಗಳು, ಶೈಕ್ಷಣಿಕವಾಗಿ, ಆರ್ಥಿಕವಾಗಿ ಬಹಳ ಹಿಂದುಳಿದ ಜನರು, ಅವರನ್ನು ಮೇಲೆತ್ತಬೇಕು, ಸಮತಟ್ಟಿಗೆ ಎನ್ನುವ ಕಳಕಳಿ ಅನೇಕರಲ್ಲಿ ಇರಬೇಕಾದ್ದು ಸಹಜ ಹಾಗಿರುವಾಗ ಈ ವಕ್ಫ್ ಇಲಾಖೆಯಲ್ಲಿ ಕಮಿಟಿ ಇದ್ದು, ಅದಕ್ಕೆ ಬೇಕಾದ ವ್ಯವಸ್ಥೆ ಇದ್ದು ಕೆಲವು ಜನಗಳಿಂದ ಕೆಲಸಗಳು ಸರಿಯಾಗಿ ಆಗುತ್ತಾ ಇಲ್ಲ ತರಬೇಕು ಎನ್ನುವುದು ಉಂಟು ಇವೊತ್ತು ವಕ್ಫ್ ಭೂಮಿ ಎಷ್ಟಿಲ್ಲ. ಅದನ್ನು ನೀವು ಬಿಡಲಿಕ್ಕಿಲ್ಲ. ಈ ಭೂಮಿಗಳು ಯಾರ್ಯಾರ ಕೈಯಲ್ಲಿದೆ? ಕೆಲವು ಒಳ್ಳೊಳ್ಳೆಯ ಜಾಗಗಳಲ್ಲಿ ಕಟ್ಟಡಗಳನ್ನು ಕಟ್ಟಿ ೩೦೦,೫೦೦

ರೂಪಾಯಿಗಳಿಗೆ ಅವುಗಳನ್ನು ಬಾಡಿಗೆಗೆ ಕೊಟ್ಟಿದ್ದು ಉಂಟು ಇವೊತ್ತು ೩೦–೩೫ ಸಾವಿರ ರೂಪಾಯಿಗಳ ಬಾಡಿಗೆ ಸಿಗಬಹುದು, ೩೦ ವರ್ಷ, ೯೦ ವರ್ಷಗಳ ಕಂತು ಕೂಡ ಉಂಟು ಎಂದು ಕೇಳಿದ್ದೇನೆ. ಕೆಲವು ಪಟ್ಟಭದ್ರ ಹಿತಾಸಕ್ತಿಯ ಜನರ ಕೈಯಲ್ಲಿ ಕೆಲವು ಭೂಮಿಗಳು ಇದ್ದು, ಕಟ್ಟಡಗಳಿದ್ದು ನಾವೇ ಅದರ ಮಾಲೀಕರು, ಇದು ನಮಗೆ ಸೇರುವಂಥಾದ್ದು ಎಂದು ಹಠ ಮಾಡುವಂಥ ಜನರು ಅಲ್ಲಿದ್ದಾರೆ ಎಂದು ಕೇಳಿದ್ದೇನೆ. ಇದನ್ನು ತಾವು ಪರಿಶೀಲನೆ ಮಾಡಬಹುದು. ಪಟ್ಟಭದ್ರ ಹಿತಾಸಕ್ತಿಗಳನ್ನು ಮಟ್ಟ ಹಾಕಲಿಕ್ಕೇ ಬೇಕು, ಬಡವರಿಗೆ, ಎಲ್ಲಾ ಮುಸ್ಲಿಂ ಬಂಧುಗಳಿಗೆ ಉಪಕಾರ ಸಿಗುವಂತೆ ಮಾಡಬೇಕು ಎಂದು ಹೇಳುತ್ತೇನೆ. ಅಲ್ಲದೆ ವಕ್ಫ್ ಮಸೀದಿ ದುರಸ್ತಿ ಮಸೀದಿ ಕಟ್ಟಡಕ್ಕೆ ಹಣ ಕೇಳುತ್ತಾ ಇದ್ದಾರೆ. ಅದಕ್ಕೆ ಯಥೇಚ್ಛವಾಗಿ ಹಣ ಕೊಡುವುದು ಒಳ್ಳೆಯದು. ಅಲ್ಪಸಂಖ್ಯಾತ ಜನರು, ಹಿಂದುಳಿದಂಥ ಜನರು ಆರ್ಥಿಕವಾಗಿ, ಶೈಕ್ಷಣಿಕವಾಗಿ ಬಹಳ ಹಿಂದುಳಿದವರು, ಅವರ ಹತ್ತಿರ ಹಣ ಇರುವುದಿಲ್ಲ. ಕೆಲವು ಕಡೆ ಸ್ವಲ್ಪ ಶ್ರೀಮಂತರು ಹುಷಾರಾಗುತ್ತಾರೆ. ಅಲ್ಲಿ ಒಳ್ಳೆಯ ಸ್ಥಿತಿಯಲ್ಲಿ ಮಸೀದಿಗಳು ಇರುತ್ತವೆ. ಇನ್ನು ಕೆಲವು ಕಡೆ ಬಡ ಮೊಹಲ್ಲಾಗಳು ಇರುತ್ತವೆ. ಅಲ್ಲಿ ಪಾತ್ರೆ ತೆಗೆದುಕೊಂಡು ಹೋಗಿ ಕಲೆಕ್ಷನ್ ಮಾಡಿ ಮಸೀದಿ ನಡೆಸತಕ್ಕ ಎಷ್ಟೋ ಗ್ರಾಮಗಳುಂಟು ಕೆಲವು ಕಡೆ ಶಕ್ತಿ ಇರತಕ್ಕಂಥ ಕಡೆ, ಅಬುದಾಬಿ, ದುಬೈ, ಮಸ್ಕಾಟ್ ಮುಂತಾದ ಬೇರೆ ಬೇರೆ ಅರಬ್ ರಾಷ್ಟ್ರಗಳಿಂದ ಹಣ ಮಾಡಿಕೊಂಡು ಚೆನ್ನಾಗಿ ನಡೆಸುತ್ತಾರೆ, ಅಂಥಾದ್ದು ಬಹಳ ಕಡಿಮೆ ಇದೆ. ಬಡವರು ಇರತಕ್ಕ ಕಡೆ ಮಸೀದಿಗಳಿಗೆ ಹಣ ಕೇಳುತ್ತಾ ಇದ್ದಾರೆ. ೫೦ ಲಕ್ಷ, ೬೦ ಲಕ್ಷ ಕೇಳಿರುವುದು ಹೆಚ್ಚಿಗೆ ಇರಬಹುದು. ತಾವು ಒಂದೂವರೆ ಕೋಟಿ ರೂಪಾಯಿಗಳನ್ನು ಮಾನ್ಯ ಮುಖ್ಯ ಮಂತ್ರಿಗಳ ಹತ್ತಿರ ಕೇಳಬೇಕಾಗಿತ್ತು. ಮಂಡಲದಲ್ಲಿರುವ ೩೦ ಜನರ ಪೈಕಿ ತಾವು ಏಕಮೇವ ಅಲ್ಪಸಂಖ್ಯಾತ ಮಂತ್ರಿಗಳು. ನಿಮ್ಮ ಮೇಲೆ ಬಹಳ ದೊಡ್ಡ ಜವಾಬ್ದಾರಿ ಬರುತ್ತದೆ, ದೊಡ್ಡ ಹೊಣೆಗಾರಿಕೆ ಬೀಳುತ್ತದೆ ಅಂದರೆ ನೀವು ಬೇಡದ್ದನ್ನು ಮಾಡಬೇಕು ಎಂದು ಹೇಳುವುದಿಲ್ಲ. ಅಲ್ಪಸಂಖ್ಯಾತರಿಗೆ ಬೇಕಾದಂಥ ವ್ಯವಸ್ಥಿತವಾದ ಕಾರ್ಯಕ್ರಮವನ್ನು ಕಟಿಬದ್ಧರಾಗಿ ಮಾಡಬೇಕಾಗುತ್ತದೆ. ವಕ್ಫಿನಲ್ಲಿ ಭೂಮಿ ಸ್ವಾಧೀನ ಮಾಡಿಕೊಂಡ, ಕಟ್ಟಡ ಸ್ವಾಧೀನ ಮಾಡಿಕೊಂಡ ಪಟ್ಟಭದ್ರ ಹಿತಗಳ ಜನರನ್ನು ತೊಲಗಿಸಬೇಕು, ಅದು ಒಳ್ಳೆಯ ರೀತಿಯಲ್ಲಿ ಜನರಿಗೆ ಮುಟ್ಟುವ ಹಾಗೆ ಮಾಡಬೇಕು. ಕವಿ ಪುಟ್ಟಪ್ಪನವರು "ಸರ್ವರಿಗೂ ಸಮಬಾಳು, ಸರ್ವರಿಗೂ ಸಮಪಾಲು ಎಂಬ ನವಯುಗ ವಾಣಿ ಕೇಳುತಿದೆ ನೋಡು'' ಎಂದು ಹೇಳಿದ್ದಾರೆ. ಅಂತಹ ವಾಣಿ ಬರುತ್ತಾ ಉಂಟು, ಎಲ್ಲೆಲ್ಲೂ ಆ ರೀತಿ ಬರಬೇಕು. ಆದುದರಿಂದ ತಾವು ಎಲ್ಲಾ ಮಸೀದಿಗಳಿಗೂ ಆದಷ್ಟು ಹೆಚ್ಚಿಗೆ ಹಣ ಕೊಡಬೇಕು, ಆ ಜನರಿಗೆ ಪ್ರೀತಿಯಿಂದ ಕೊಟ್ಟು ಸಂತೋಷಪಡಿಸಬೇಕು ಎಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಏನಾದರೂ ಸಂದರ್ಭವಿದ್ದರೆ ಇನ್ನೂ ೫೦ ಲಕ್ಷ ಹೆಚ್ಚಿಗೆ ಮುಖ್ಯ ಮಂತ್ರಿಗಳ ಹತ್ತಿರ ಕೇಳಿದರೆ ಬಹಳ ಒಳ್ಳೆಯದು ಎಂದು ಹೇಳುತ್ತಾ ಇದ್ದೇನೆ. ಈ ವಕ್ಫ್ ಸಂಸ್ಥೆ ಏನು ಇದೆ ಇದರ ಕಾರ್ಯವ್ಯಾಪ್ತಿಯಲ್ಲಿ, ವಿಸ್ತರಣೆಯಲ್ಲಿ ಎಲ್ಲೂ ಬೆಳಕು ಕಾಣುವುದಿಲ್ಲ. ಅದು ಕಾಣಬೇಕು. ಅದರಲ್ಲಿ ಇವೊತ್ತು ದತ್ತಿ ಎಂಡೋಮೆಂಟ್, ಬೇರೆ ವ್ಯವಸ್ಥೆ ಎಲ್ಲಾ ಉಂಟು. ನಮಗೆ ವಕ್ಫಿನಲ್ಲಿ ಎಲ್ಲಾ ಕೆಲಸ ಆಗಬೇಕು. ಈ ಪರಿಸ್ಥಿತಿಯಲ್ಲಿ ಇಷ್ಟನ್ನು ನಾನು ಹೇಳುತ್ತಾ ಇದ್ದೇನೆ, ಕಡೆಗೆ ಹೇಳುವಂಥಾದ್ದು ಏನೆಂದರೆ, ನಿಮ್ಮ ಬಗ್ಗೆ ನಮಗೆ ಸಂತೋಷ, ಗೌರವ ಉಂಟು ನಾನು ಮೊದಲೇ ಹೇಳಿದಹಾಗೆ ಇದು ನೀವೊಬ್ಬರೇ ಮಾಡತಕ್ಕಂಥ ಕೆಲಸ ಅಲ್ಲ. ನಿಮ್ಮ ಯೋಚನೆ ಒಳ್ಳೆಯದು ಇರಬಹುದು, ಅತ್ಯುತ್ತಮ ಉಚ್ಛ್ರಾಯ ಶ್ರೇಣಿಗೆ ಏರಿಸತಕ್ಕಂಥ ಭಾವನೆಗಳು ಇರಬಹುದು, ಆದರೆ ಕಾರ್ಯರೂಪಕ್ಕೆ ಆಗಬೇಕಲ್ಲ. ನೀವು ಟಿಪ್ಪು ಸುಲ್ತಾನನ ಚರಿತ್ರೆಯನ್ನು ಕೇಳಿದ್ದೀರಿ ಈ ರಾಜ್ಯದಲ್ಲಿ ದೊಡ್ಡ ಸಾಮರ್ಥ್ಯವನ್ನು ತೋರಿಸಿದಂಥ ಟಿಪ್ಪುಸುಲ್ತಾನನ ಬಗ್ಗೆ ಕನ್ನಡನಾಡಿನ ಜನತೆಗೆ ಬಹಳ ಗೌರವ ಉಂಟು ಟಿಪ್ಪುಸುಲ್ತಾನ ಸ್ವಾತಂತ್ರ್ಯ ಯೋಧರಲ್ಲಿ ಅಗ್ರ ಗಣ್ಯ, ವೀರಾಧಿವೀರ. ಅಂತಹ ಟಿಪ್ಪು ಸುಲ್ತಾನ ಹೇಗೆ ಸೋತ, ಯಾರು ಸೋಲಿಸಿದರು ಅಂದರೆ ಟಿಪ್ಪುಸುಲ್ತಾನ ಯಾರನ್ನು ನಂಬಿದ್ದನೋ ಅವರಿಂದಲೇ ಸೋಲಿಸಲ್ಪಟ್ಟ. ಎರಡು ಯುದ್ಧಗಳಲ್ಲಿ ಬ್ರಿಟಿಷರನ್ನು ಸೋಲಿಸಿದ. ಮೂರನೇ ಯುದ್ಧದಲ್ಲಿ ಇವರನ್ನು ನಂಬಿ ಮದ್ದುಗುಂಡುಗಳನ್ನು ತಯಾರಿಸಿ ಉಪಯೋಗಿಸಿ ಎಂದು ಹೇಳಿದಾಗ ಇವರು ಮಾಡಿದ್ದು ಏನು ? ಸಗಣಿ ಮುದ್ದೆಗಳನ್ನು ಮಾಡಿ ಉಪಯೋಗಿಸಿದರು, ಅದರಿಂದ ಟಿಪ್ಪುಸುಲ್ತಾನನ ಅವಸಾನವಾಯಿತು. ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಈ ರೀತಿ ಮಾರ್ಮಿಕವಾದ ಚಿತ್ರಣ ಕೊಡುವಂಥಾದ್ದು ಏಕೆಂದರೆ, ಹಿಂದೆ ಆಗಿ ಹೋಗಿದ್ದರೂ ನಿಮ್ಮ ಮುಂದಿನ ಭವಿಷ್ಯದಲ್ಲಿ ಕೀರ್ತಿ ರಾರಾಜಿಸಬೇಕು ಎನ್ನುವ ಉದ್ದೇಶದಿಂದ ಹೇಳುವಂಥಾದ್ದು. ತಾವು ತಮ್ಮ ಆಡಳಿತದಲ್ಲಿ ಉಮರಲ್ ಫರೂಕನ ಆದರ್ಶವನ್ನು ತೆಗೆದುಕೊಳ್ಳ

ಬೇಕು. ನಮಗೆ ಸ್ವಾತಂತ್ರ್ಯ ಸಿಕ್ಕಿದಮೇಲೆ ಮಹಾತ್ಮಾ ಗಾಂಧೀಜಿಯವರು ಏನು ಹೇಳಿದರು ಎಂದರೆ, ರಾಜ್ಯಭಾರದಲ್ಲಿ ಉಮರಲ್ ಫರೂಕನ ರಾಜ್ಯಭಾರದಂತೆ ಮಾಡಿ ಎಂದು ಹೇಳಿದರು. ಏಕೆಂದರೆ, ಉಮರಲ್ ಫರೂಕರು ಒಳ್ಳೆಯ ರೀತಿಯಲ್ಲಿ ಕಾರ್ಯಭಾರ ಮಾಡುತ್ತಿದ್ದರು. ಅಮೇರಿಕದಲ್ಲಿ ದೊಡ್ಡ ತಜ್ಞ ಇಡೀ ವಿಶ್ವದಲ್ಲಿ ೧೦೦ ಜನ ಆಡಳಿತಗಾರರು ಬುದ್ಧಿವಂತರು ಎಂದು ಲೆಕ್ಕ ತೆಗೆದ. ಅದರಲ್ಲಿ ಉಮರಲ್ ಫರೂಕನ ಆಡಳಿತದ ಬಗ್ಗೆಯೂ ಇದೆ. ಉಮರಲ್ ಫರೂಕ್ ತನ್ನ ಆಳ್ವಿಕೆಯಲ್ಲಿ ಏನು ಮಾಡುತ್ತಿದ್ದ ಎಂದರೆ ಅವನು ರಾತ್ರಿ ಇಡೀ ನಿದ್ದೆ ಮಾಡುತ್ತಾ ಇರಲಿಲ್ಲ. ತನ್ನ ಪ್ರಜೆಗಳಿಗೆ ಎಲ್ಲಿ ಅನ್ಯಾಯವಾಗುತ್ತಿದೆ, ಎಲ್ಲಿ ಮೋಸವಾಗಿದೆ, ಎಲ್ಲಿ ತೊಂದರೆಯಾಗಿದೆ ಎಂದು ಇಡೀ ರಾತ್ರಿ ಸಂಚಾರ ಮಾಡಿ ತಿಳಿದುಕೊಳ್ಳುತ್ತಿದ್ದ ವಿಚಾರಣೆಗೆ ಬಂದರೆ ಮೂರನೇ ದಿವಸ ತಿದ್ದುಪಡಿ ಮಾಡುತ್ತಿದ್ದ. ಉದಾಹರಣೆಗೆ ಒಂದು ಸಂಗತಿಯನ್ನು ಹೇಳುತ್ತೇನೆ. ಇವತ್ತು ನಾವು ಎಮ್ಮೆ ಹಾಲಿಗೆ, ಹಸುವಿನ ಹಾಲಿಗೆ ನೀರು ಬೆರೆಸುತ್ತೇವೆ. ಸುಮಾರು ೪೦೦೦ ವರ್ಷಗಳ ಹಿಂದೆ ಒಂಟೆ ಹಾಲು ಮಾರುವಂಥ ವ್ಯವಸ್ಥೆ ಇತ್ತು

ಆಗ ಒಂಟೆ ಹಾಲಿಗೆ ನೀರನ್ನು ಬೆರೆಯಿಸಿ ಮಾರಾಟ ಮಾಡುತ್ತಾರೆಂದು ಗೊತ್ತಾದಾಗ ಉಮರಲ್ ಫರೂಕ್ ಅವರು ಯಾರಾದರೂ ಒಂಟೆ ಹಾಲಿಗೆ ನೀರನ್ನು ಬೆರೆಸಿ ಮಾರಿದರೆ ಅವರಿಗೆ ಕಠಿಣ ಶಿಕ್ಷೆ ಎಂದು ಒಂದು ಸುತ್ತೋಲೆಯನ್ನು ಕಳುಹಿಸಿದರು. ಇಷ್ಟು ಮಾತ್ರವಲ್ಲದೆ ಇಡೀ ರಾತ್ರಿ ತಿರುಗಾಡಲಿಕ್ಕೆ ಹೋದರು. ಬೆಳಿಗ್ಗೆ ನಾಲ್ಕು ಗಂಟೆ ಸಮಯದಲ್ಲಿ ಒಂದು ಗುಡಿಸಿಲಿನಲ್ಲಿ ಒಬ್ಬ ಮುದುಕಿ ಮತ್ತು ಮಗಳು ಸಂವಾದ ಮಾಡುತ್ತಿದ್ದರು. ಆ ಮುದುಕಿ ಬಹಳ ಬಡವಳಾಗಿದ್ದು, ಅವಳ ಹತ್ತಿರ ಇದ್ದುದು ಬಡ ಮಂದಿ ಒಂಟೆ ಒಂದೇ, ಅದರ ಹಾಲು ಮಾರಿ ಅವರು ಜೀವನ ಮಾಡಬೇಕಾಗಿತ್ತು. ಆ ತಾಯಿ ತನ್ನ ಮಗಳಿಗೆ ಹೇಳುತ್ತಾಳೆ ನೀನು ಈ ಕೂಡಲೇ ಎದ್ದು ಒಂಟೆಯ ಹಾಲನ್ನು ಕರೆಯಬೇಕಾದರೆ ಮೊದಲೇ ಕಡಪಾಣದಲ್ಲಿ ನೀರನ್ನು ಇಟ್ಟುಕೊಂಡು ಕರೆಯಬೇಕು, ಉಮರಲ್ ಫರೂಕ್ ಅವರಿಂದ ಸುತ್ತೋಲೆ ಬಂದಿದೆ ಎಂದು ಹೇಳುತ್ತಾಳೆ. ಇಸ್ಲಾಂ ಸಿದ್ಧಾಂತಕ್ಕೆ ಬದ್ಧಳಾದ ಮಗಳು ಅದು ಎಷ್ಟು ಮಾತ್ರಕ್ಕೂ ಸಾಧ್ಯವಿಲ್ಲ, ಈ ಕೆಲಸ ನನ್ನಿಂದ ಆಗುವುದಿಲ್ಲ. ನಮ್ಮ ರಾಜರು ಕೊಟ್ಟಂಥ ಸುತ್ತೋಲೆಯನ್ನು ಉಲ್ಲಂಘನೆ ಮಾಡಲಿಕ್ಕೆ ನಾನು ತಯಾರಿಲ್ಲ ಎಂದು ಹೇಳುತ್ತಾಳೆ, ಈ ರೀತಿಯಲ್ಲಿ ತಾಯಿ ಮತ್ತು ಮಗಳ ಸಂವಾದ ನಡೆಯುತ್ತದೆ. ಉಮರಲ್ ಫರೂಕ್ ಅವರು ತಿರುಗಾಡಿಕೊಂಡು ರಾಜಾ ಸ್ಥಾನಕ್ಕೆ ಹೋದಮೇಲೆ ಇವರು ಇಬ್ಬರನ್ನೂ ಕರೆಯಿಸಿ ವಿಚಾರ ಮಾಡಿದಾಗ ಆಗ ಆ ತಾಯಿ ನಾನು ಬಹಳ ಬಡವಿ, ನನಗೆ ಇರತಕ್ಕವಳು ಒಬ್ಬಳೇ ಮಗಳು ಅವಳನ್ನು ಮದುವೆ ಮಾಡಿಕೊಡಬೇಕೆಂಬ ದೃಷ್ಟಿಯಿಂದ ನಾನು ಈ ರೀತಿಯಲ್ಲಿ ಹೇಳಿದೆ, ನಾನು ಅದರ ಹಾಲನ್ನೇ ಮಾರಿ ಜೀವನ ಮಾಡಬೇಕಾಗಿದೆ ಆದ್ದರಿಂದ, ನಾನು ಆ ರೀತಿ ನನ್ನ ಮಗಳಿಗೆ ಹೇಳಿದೆ, ಆದರೂ ಅವಳು ಅದನ್ನು ಒಪ್ಪಲಿಲ್ಲ ಎಂದು ಹೇಳಿದಳು. ಆಗ ಉಮರಲ್ ಫರೂಕ್‌ರವರ ಹೃದಯ ಕಟಿಬದ್ಧವಾಗಿ, ದೃಢ ನಿಷ್ಠೆಯಿಂದ ಒಪ್ಪಿ, ಆ ಖಲೀಫರು ನನ್ನ ಮಗನೇ ಅವಳನ್ನು ಮದುವೆ ಆಗಬೇಕೆಂದು, ಖಲೀಫರು ಮಗನಿಗೆ ಮದುವೆ ಮಾಡಿದರು. ತಾವು ಹಾಗೆಯೇ ಮಾಡಬೇಕೆಂದು ಹೇಳುತ್ತಿಲ್ಲ. ನೀವು ಒಂದು ಗುಪ್ತ ದಳವನ್ನು ತಯಾರು ಮಾಡಬೇಕು. ಒಂದು ಸೆಲ್ ಇಡಬೇಕು. ನೀವು ಕೊಟ್ಟಂತಹ ಹಣ, ನೀವು ಆಲೋಚನೆ ಮಾಡಿದಂಥ ರೂಪದಲ್ಲಿ ಖರ್ಚಾಗುತ್ತಿದೆಯೇ, ಇಲ್ಲವೇ ನೋಡಬೇಕು. ಎಷ್ಟು ಬಾವಿಗಳು ಸರಿಯಾಗಿವೆ, ಎಷ್ಟು ಹಾಳಾಗಿವೆ, ಎಷ್ಟೆಷ್ಟು ಕೆಲಸ ಆಗುತ್ತಿದೆ ಇವುಗಳನ್ನೆಲ್ಲಾ ನೋಡಲಿಕ್ಕೆ ಸ್ವಲ್ಪ ಹಣ ಖರ್ಚಾದರೂ ಪರವಾಯಿಲ್ಲ, ಅದರ ಬಗ್ಗೆ ನೋಡಲಿಕ್ಕೆ ಒಂದು ಗುಪ್ತದಳ ಇಡಬೇಕು, ಈ ರೀತಿ ಮಾಡಿದರೆ ನಿಯಂತ್ರಿನ ಜನರಿಗೆ ಅನುಕೂಲವಾಗುತ್ತದೆ. ತಾವು ತನಿಖೆ ಮಾಡತಕ್ಕ ಕಾರ್ಯ ಕ್ರಮ ಮಾಡಿದರೆ ಅರ್ಧಾಂಶ ಆದರೂ ತಾವು ಬಯಸಿದಂತೆ ಆಗುತ್ತದೆ. ಈ ಕಡೆ ತಾವು ಗಮನ ಕೊಡಬೇಕು. ತಾವು ಗ್ರಾಮಾಭ್ಯುದಯ, ಅದೇ ರೀತಿ ವರ್ಕ್ಸ್, ನೀರು ಪೂರೈಕೆ ಬೇಡಿಕೆಗಳ ಬಗ್ಗೆ ಹಣ ಕೇಳಿದ್ದೀರಿ. ತಮ್ಮಲ್ಲಿ ಕೆಲಸ ಮಾಡತಕ್ಕ ಉಮ್ಮಸ್ಸು ಇದ್ದರೂ, ಅನೇಕ ಎಡರುತೊಡರುಗಳು ಇದ್ದರೂ, ಒಳ್ಳೆಯದನ್ನು ನಡೆಸಿಕೊಂಡು ಹೋಗಿ, ಮುಂದೆ ಭವಿಷ್ಯದಲ್ಲಿ ಉತ್ತಮ ಆಡಳಿತ ಕೊಟ್ಟು ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಸಾವಿರಾರು ಜನರಿಗೆ ಉಪಕಾರ ಮಾಡಬೇಕು, ಎಲ್ಲ ಜನರು ತಲೆಎತ್ತಿ ನಡೆಯುವಂತಾಗಬೇಕು.

"ನಮಗೆಷ್ಟು ದಿನವಿಹುದೊ ಅಷ್ಟು ದಿನ
ತಲೆಎತ್ತಿ ಮನುಜರಂದದಿ ಬಾಳಿ ಸಾಯಲಿರಬೇಕು.
ಒಂದೇ ತೊಟ್ಟಿಲೊಳಗಿ ಬೆಳೆದ ಮಕ್ಕಳು ನಾವು
ಇನಿತೊಂದು ಭೇದವೇಕೆಂದು ನೋಡಬೇಕು."

ಇದನ್ನು ಕಡಂಗೋಡ್ಲು ಶಂಕರ್‌ಭಟ್ಟರು ಹೇಳಿದ್ದಾರೆ. ನಾವು ಎಷ್ಟು ದಿವಸ ಇರುತ್ತೇವೋ ಅಷ್ಟು ದಿವಸ ಗೌರವದಿಂದ ಬಾಳಬೇಕು. ಈಗ ತಾವು ಬಡವರನ್ನು ಉದ್ಧಾರಮಾಡಬೇಕೆಂದು ಹೇಳಿದ್ದೀರಿ

ಆ ರೀತಿಯಲ್ಲೇ ಆಗಲಿ ಎಂದು ಹೇಳಿ ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಪಂಪಾಪತಿ (ದಾವಣಗೆರೆ).—ಅಧ್ಯಕ್ಷರೇ, ಮೆಟಡಾರ್ ವ್ಯಾನ್‌ನವರೆಲ್ಲರೂ ಬೆಂಗಳೂರಿಗೆ ಬಂದಿದ್ದಾರೆ. ಸುಮಾರು ಎರಡೂ ವರೆ ಸಾವಿರ ಬಂದಿವೆ. ಅವರ ಬೇಡಿಕೆ ಈಗ ೬ ಪ್ಲಸ್ ೧ ಇದೆ ಅದರ ಬಗ್ಗೆ ಮಾನ್ಯ ಸಾರಿಗೆ ಸಚಿವರು ಒಂದು ಹೇಳಿಕೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಮೆಟಡಾರ್ ವ್ಯಾನ್‌ಗಳಿಗೆ ೬ ಪ್ಲಸ್ ೧ ಕೆಪಾಸಿಟಿ ಏನಿತ್ತು ಅದರ ಪ್ರಕಾರ ಪರ್ಮಿಟ್ ಕೊಟ್ಟಿರತಕ್ಕದ್ದು. ಈಗ ಕರ್ನಾಟಕ ರಾಜ್ಯದಲ್ಲಿ ಟ್ಯಾಕ್ಸಿಗಳ ರೂಪದಲ್ಲಿ ಎರಡು ಸಾವಿರ ಮೆಟಡಾರ್ ವ್ಯಾನ್‌ಗಳಿವೆ. ಖಾಸಗಿ ಮೆಟಡಾರ್ ವ್ಯಾನ್‌ಗಳು ಎರಡು ಸಾವಿರ ಇವೆ. ಎಲ್ಲಾ ಒಟ್ಟು ನಾಲ್ಕೈದು ಸಾವಿರ ಮೆಟಡಾರ್ ಆಗುತ್ತವೆ. ನಮ್ಮ ಕೆಎಸ್‌ಆರ್‌ಟಿಸಿ ಬಸ್ಸುಗಳು ಸುಮಾರು ನಾಲ್ಕೈದು ಸಾವಿರ ಇವೆ. ಕೆಎಸ್‌ಆರ್‌ಟಿಸಿ ಬಸ್ಸಿಗೆ ಮೆಟಡಾರ್ ವ್ಯಾನ್ ಕಾಂಪೀಟ್ ಮಾಡಲಿಕ್ಕೆ ರೆಡಿ ಇವೆ. ಅದರಲ್ಲಿ ೩೦–೪೦ ಜನರನ್ನು ಹಾಕಿಕೊಂಡು ಚಿತ್ರಹಿಂಸೆಗೆ ಒಳಪಡಿಸುತ್ತಿದ್ದಾರೆ. ಪ್ರಯಾಣಿಕರಿಗೆ ಚಿತ್ರಹಿಂಸೆ ಕೊಡುವುದರ ಜೊತೆಗೆ ಅವರು ಹೇಳಿದಂಥ ರೇಟು ಕೊಡಬೇಕಾಗಿದೆ. ಪೀಕ್ ಹವರ್ಸ್ ಆದರೆ ೧೫ ರೂಪಾಯಿಗಳು ಎಂದು ಹೇಳುತ್ತಾರೆ. ಬಸ್ಸುಗಳು ಏನಾದರೂ ಹೆಚ್ಚು ಕಡಿಮೆ ಆಯಿತು ಎಂದರೆ ೨೦ ರೂಪಾಯಿಗಳು ಎಂದು ಹೇಳುತ್ತಾರೆ. ಆಗ ಅವರು ಹೇಳಿದ್ದೇ ರೇಟು. ಇದನ್ನು ನಿಯಂತ್ರಣ ಮಾಡಬೇಕೆನ್ನುವ ದೃಷ್ಟಿಯಿಂದ ಮಾಡಿದೆ. ಕೆಎಸ್‌ಆರ್‌ಟಿಸಿ ಕೆಳಮಟ್ಟದ ಅಧಿಕಾರಿಗಳು ಸಹ ಇದಕ್ಕೆ ಶಾಮೀಲು ಆಗಿದ್ದಾರೆ. ಡಿಪೋ ಮ್ಯಾನೇಜರ್‌ಗಳು ಮೆಟಡಾರ್ ವ್ಯಾನ್ ಬೇನಾಮಿ ಹೆಸರಿನಲ್ಲಿ ಇಟ್ಟುಕೊಂಡಿದ್ದಾರೆ. ಅದೇ ರೀತಿ ಕೆಳಮಟ್ಟದಲ್ಲೂ ಇಟ್ಟುಕೊಂಡಿದ್ದಾರೆ. ಅವರ ಜುಟ್ಟು ಇರತಕ್ಕದ್ದು ಈ ಕೆಪಾಸಿಟಿ ಮೇಲೆ. ೬ ಪ್ಲಸ್ ೧ ಇದೆ. ಇವರು ಕೆಎಸ್‌ಆರ್‌ಟಿಸಿ ಬಸ್ಸುಗಳನ್ನು ಓಡಿಸುವ ಕಡೆ ಓಡಿಸುತ್ತಾರೆಯೇ ಹೊರತು ಪ್ರೈವೇಟ್ ರೂಟ್ಸ್‌ನಲ್ಲಿ ಓಡಿಸಲಿಕ್ಕೆ ತಯಾರಿಲ್ಲ. ಮಾನ್ಯ ವಿರೋಧಪಕ್ಷದ ನಾಯಕರು, ಈ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಸದಸ್ಯರಾದ ಪಂಪಾಪತಿಯವರು, ಮಾನ್ಯ ಭೂಪತಿಯವರು, ಅನೇಕ ಸದಸ್ಯರು ಹೇಳಿದ್ದಾರೆ, ಬೆಳಗಾಂ, ಬಿಜಾಪುರ ಧಾರವಾಡ ಜಿಲ್ಲಾ ಶಾಸಕರು ಇದರ ಬಗ್ಗೆ ಮನವಿ ಮಾಡಿದ್ದಾರೆ. ಇವೊತ್ತು ಇವರನ್ನು ರೆಗ್ಯುಲೇಟ್ ಮಾಡಬೇಕೆಂದು ಟ್ಯಾಕ್ಸ್ ಹೆಚ್ಚು ಅಂದರೆ ೨೦೦ ರೂಪಾಯಿಗಳು ಇದ್ದುದನ್ನು ೧,೦೦೦ ರೂಪಾಯಿಗಳಿಗೆ ಮಾಡಿರತಕ್ಕದ್ದು. ಇದನ್ನು ಕಡಿಮೆ ಮಾಡತಕ್ಕದ್ದು ಕಷ್ಟವಾಗುತ್ತದೆ. ಅದರ ಬಗ್ಗೆ ನಾನು ಈಗ ಏನೂ ಹೇಳಲಿಕ್ಕೆ ಸಾಧ್ಯವಿಲ್ಲ, ಅದರ ಬಗ್ಗೆ ಮುಖ್ಯ ಮಂತ್ರಿಗಳ ಜೊತೆ ನಾನು ಮಾತನಾಡಬೇಕಾಗುತ್ತದೆ. ಇನ್ನು ಕೆಪಾಸಿಟಿ ಬಗ್ಗೆ ಹೆಚ್ಚು ಮಾಡಬೇಕಾಗಿದ್ದರೆ, ನಾವು ಕೆಲವೊಂದು ಕಂಡೀಷನ್ ಹಾಕುವುದನ್ನು ಅವರು ಒಪ್ಪಬೇಕಾಗುತ್ತದೆ. ೧೨ ಪ್ಲಸ್ ೧ ಕೆಪಾಸಿಟಿ ಬಗ್ಗೆ ನಾವು ಪರಿಶೀಲನೆ ಮಾಡುತ್ತೇವೆ. ಸೋಮವಾರ ಮಧ್ಯಾಹ್ನ ಪೋಲೀಸ್ ಇಲಾಖೆಯ ಅಧಿಕಾರಿಗಳನ್ನು, ಟ್ರಾನ್ಸ್‌ಪೋರ್ಟ್ ಇಲಾಖೆಯ ಅಧಿಕಾರಿಗಳನ್ನು, ಸಭೆಗೆ ಕರೆದಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳ ಜೊತೆ ಈ ವಿಷಯವನ್ನು ತಿಳಿಸಿ ಪ್ರಸ್ತಾಪ ಮಾಡಬೇಕಾಗುತ್ತದೆ. ಈಗಾಗಲೇ ಇವರ ಜೊತೆಯಲ್ಲಿ ಸ್ವಲ್ಪ ಸ್ವಲ್ಪ ಮಾತನಾಡಿದ್ದೇನೆ. ಅದೇ ಪ್ರಕಾರ ಸರ್ಕಾರ ೧೨ ಪ್ಲಸ್ ೧ ಕೆಪಾಸಿಟಿ ಹೆಚ್ಚು ಮಾಡಲಿಕ್ಕೆ ಸರ್ಕಾರ ಪರಿಶೀಲನೆ ಮಾಡಿ, ಒಪ್ಪಿಕೊಂಡಿದೆ, ಸೋಮವಾರ ಅಂತಿಮ ನಿರ್ಧಾರವನ್ನು ಈ ಸಭೆಯಲ್ಲಿ ತೆಗೆದುಕೊಳ್ಳುತ್ತೇವೆ. ಆದರೆ ಮಾನ್ಯ ಸದಸ್ಯರಲ್ಲಿ ಮನವಿ ಮಾಡುವುದು ಏನೆಂದರೆ, ಕೆಎಸ್‌ಆರ್‌ಟಿಸಿ ಪ್ರಯಾಣಿಕರ ಹಿತದೃಷ್ಟಿಯಿಂದ ಅವರಿಗೆ ಶೋಷಣೆಯಾಗದಂತೆ ನೋಡಬೇಕಾಗುತ್ತದೆ. ಅವರೂ ಸಹ ನಾವು ಏನು ಕಂಡೀಷನ್ ಹಾಕುತ್ತೇವೆ ಅದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಈಗ ಕೆಪಾಸಿಟಿ ೧೨ ಪ್ಲಸ್ ೧ ಕೊಟ್ಟರೆ, ೧೩ ಜನರ ಮೇಲ್ಪಟ್ಟು ಹಾಕಿಕೊಂಡು ಹೋದರೆ ಅವರ ಪರ್ಮಿಟ್ ಕ್ಯಾನ್ಸಲ್ ಮಾಡಬೇಕಾಗುತ್ತದೆ

ಚೇರ್ಮನ್.—ಈಗ ಸಭೆಯನ್ನು ಮುಂದಿನ ಸೋಮವಾರ ಬೆಳಿಗ್ಗೆ ೧೧ ಘಂಟೆಗೆ ಮುಂದೂಡಲಾಗಿದೆ.

(ಸಭೆಯು ೨ ಘಂಟೆಗೆ ಮುಕ್ತಾಯವಾಗಿ ಪುನಃ ದಿನಾಂಕ ೯ನೇ ಆಗಸ್ಟ್ ೧೯೮೫ರ ಸೋಮವಾರದಂದು ೧೧ ಘಂಟೆಗೆ ಸೇರಲು ನಿಶ್ಚಯಿಸಲಾಯಿತು.)

---

† ಈ ಚಿಹ್ನೆಯು ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.